ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

23 ಮಾರ್ಚ್ 2016 ಪುಟ 20 ರೂ. 15/-







ಲಂಕೇಶ್ 81

ನೀಲಿ ಬಾನಿನಲ್ಲಿ ಕೆಂಪು ಸೂರ್ಯ



ನಟಿ ಶ್ರುತಿಯ ನಿಗೂಢ ಸಾವು




ಜೈಲಿಗೆ ಹಾಕಿ

ಮಂಡ್ಯ ನಗರಸಭೆ ಅಧಿಕಾರಕ್ಕೆ ಕೈ–ತೆನೆ ಕಸರತ್ತು

ಬಾಗಲಕೋಟೆ ಕುಸಿದ ಕಾಂಗ್ರೆಸ್ಸಿಗರ ಐಲಾಟಗಳು

ಉತ್ತರ ಕನ್ನಡ ಮಂತ್ರಿಗಿರಿಗೆ ಅನಂತ್ಮಾಣಿಯ ಮುಸ್ಲಿಂ ಬಾಂಬ್

ಕನ್ಹಯ್ಯನ ನೇತೃತ್ವದಲ್ಲಿ ಹೋರಾಟ ಮುಂದುವರೆಸೋಣ



ಈ ಹಿಂದಿನ ವಾರ ಜೆಎನ್‌ಯುನಲ್ಲಿ ನಡೆದ ಘಟನೆಗಳು ಮತ್ತು ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯ ಕುಮಾರ್‌ರ ಬಂಧನದ್ದೇ ಸುದ್ದಿಯಾಗಿತ್ತು. ಕಳೆದ ವಾರ ಕನ್ಹಯ್ಯನ ಬಿಡುಗಡೆ ಮತ್ತು ಅದಕ್ಕೂ ಮಿಗಿಲಾಗಿ ಬಿಡುಗಡೆಯ ನಂತರದ ಆತನ ಭಾಷಣದ ಕುರಿತ ಸಂಭ್ರಮ ವ್ಯಾಪಕವಾಗಿ ಕಂಡುಬರುತ್ತಿದೆ. ಈ ಸಂಭ್ರಮಕ್ಕೆ ತಕ್ಕುನಾದ ರೀತಿಯಲ್ಲಿ ಕನ್ಹಯ್ಯ ಮಾತನಾಡಿದ್ದಾರೆ ಮತ್ತು ನಡೆದುಕೊಂಡಿದ್ದಾರೆ. ಅದರಲ್ಲಿ ಸಂದೇಹವೇ ಇಲ್ಲ. ಈ ಕಾಲದ ಸೈದ್ಧಾಂತಿಕ ಸಂಯೋಜನೆಯ ಕುರಿತಾಗಿ, ಜನಪರ ಚಳವಳಿಯೊಂದರ ಆದ್ಯತೆ ಯಾವ ಜನಸಮುದಾಯಗಳಾಗಿರಬೇಕು ಎಂಬುದುರ ಕುರಿತಾಗಿ, ಈ ದೇಶದ ಜನರ ಸದ್ಯದ ದೊಡ್ಡ ಶತ್ರು ಯಾರು ಎಂಬುದರ ಕುರಿತಾಗಿ ಆ ಭಾಷಣದಲ್ಲಿ ಸ್ಪಷ್ಟತೆಯಿತ್ತು. ಆ ಭಾಷಣದಲ್ಲಿ ತೆಗೆದುಹಾಕಬೇಕಿದ್ದ ಅಂಶಗಳಾವುವೂ ಇರಲಿಲ್ಲ (ಮುಸೊಲಿನಿಯನ್ನು ಗೋಳ್ವಾಲ್ಕರ್ ಹೋಗಿ ಭೇಟಿಯಾಗಿ ಬಂದಿದ್ದರು ಎಂಬ 'ತಾಂತ್ರಿಕ'ವಾಗಿ ಸರಿಯಲ್ಲದ ಅಂಶವೊಂದನ್ನು ಬಿಟ್ಟರೆ). ಆದರೆ ಸೇರಲೇಬೇಕಿದ್ದ ಒಂದೆರಡು ಅಂಶಗಳಿದ್ದವು. ಅವನ್ನು ಪ್ರಜಾವಾಣಿಯಲ್ಲಿ ಈಗಾಗಲೇ ರಘುನಂದನ ಅವರು ಪ್ರಸ್ತಾಪಿಸಿದ್ದಾರೆ.

ಕನ್ಹಯ್ಯನ ಅದೇ ಭಾಷಣದಲ್ಲೇ, ನಾವು ಬಯಸುವ ಎಲ್ಲವೂ ಇರಲೇಬೇಕಿತ್ತು ಎಂದು ಹೇಳುವುದೂ ತಪ್ಪಾಗುತ್ತದೆ. ಅದುವರೆಗೆ ಆ ವ್ಯಕ್ತಿಯ ಕುರಿತು ಅಂತಹ ದೊಡ್ಡ ನಿರೀಕ್ಷೆಗಳೇನೂ ಇಟ್ಟುಕೊಂಡಿರದಿದ್ದ ನಾವು, ಈಗ ನಮ್ಮ ನಿರೀಕ್ಷೆಗೂ ಮೀರಿದ ಭರವಸೆಯನ್ನು ನಮ್ಮಲ್ಲಿ ಮೂಡಿಸಿದಾಕ್ಷಣ, ಅದು ಹೇಳಬೇಕಿತ್ತು, ಇದು ಹೇಳಬೇಕಿತ್ತು ಎಂದು ಹೇಳುವುದು ಅಪದ್ಧವೆನಿಸುತ್ತದೆ. ಬಹುಶಃ ಅಂತಹ ಮಾತುಗಳು, ಕೇವಲ ಕನ್ಹಯ್ಯನ ಜವಾಬ್ದಾರಿಯನ್ನು ನೆನಪಿಸುವುದಕ್ಕಿಂತ ಹೆಚ್ಚಾಗಿ ಈ ಸಂದರ್ಭದಲ್ಲಿ ನಮ್ಮೆಲ್ಲರ ಜವಾಬ್ದಾರಿಗಳ ಕುರಿತಾಗಿಯೂ ಎಚ್ಚರಿಸುತ್ತವೆ.

ಹಾಗಾಗಿ ಈ ಸಂದರ್ಭದಲ್ಲಿ ನಾವು ನೀಡಬೇಕಾದಷ್ಟು ಆದ್ಯತೆ ನೀಡದೇ ಹೋಗಿಬಿಡಬಹುದಾದ ಎರಡು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಮೊದಲನೆಯದ್ದು ರೋಹಿತ್ ವೇಮುಲನ ಸಾವಿಗೆ ನ್ಯಾಯ ಕೇಳುವುದು; ಎರಡನೆಯದ್ದು ಒಮರ್ ಖಾಲಿದ್ ಮತ್ತು ಆತನ ಇನ್ನೋರ್ವ ಸಂಗಾತಿಯ ಬಿಡುಗಡೆಗೆ ಒತ್ತಾಯಿಸುವುದು.


ರೋಹಿತ್‌ನ ಸಾವಿಗೆ ನ್ಯಾಯವೆಂದರೆ, ಅದು ಕೇವಲ ಕೆಲವು ವ್ಯಕ್ತಿಗಳ ರಾಜೀನಾಮೆ, ಎಫ್‌ಐಆರ್ ಮತ್ತು ಬಂಧನಗಳಷ್ಟೇ ಅಲ್ಲ. ರೋಹಿತ್‌ನ ಸಾವು ವಿಶ್ವವಿದ್ಯಾಲಯಗಳಲ್ಲಿನ ಜಾತಿಯ ತಾರತಮ್ಯ, ಸಾಮಾಜಿಕ ಬದಲಾವಣೆಯನ್ನು ಬಯಸಿದ ವಿದ್ಯಾರ್ಥಿಯೊಬ್ಬರ ದಮನ, ಅಧಿಕಾರಸ್ಥರ ದಬ್ಬಾಳಿಕೆ, ಅದರಲ್ಲೂ ಈಗಿನ ಸರ್ಕಾರದ ಸರ್ವಾಧಿಕಾರಿ ಪ್ರವೃತ್ತಿ ಇವೆಲ್ಲವನ್ನೂ ಬಯಲುಗೊಳಿಸಿದೆ. ಅವೆಲ್ಲವನ್ನೂ ಪ್ರಶ್ನಿಸುವುದೂ ಆಗಿದೆ. ಅದರಲ್ಲಿ ಒಂದು ಮುಖ್ಯವಾದ ಅಂಶವಾದ ತಾರತಮ್ಯದ ವಿಚಾರವನ್ನು 'ರೋಹಿತ್ ಕಾಯ್ದೆ'ಯ ಮುಖಾಂತರ ಅಡ್ರೆಸ್ ಮಾಡಬೇಕೆಂಬ ನಿರ್ದಿಷ್ಟ ಹಕ್ಕೊತ್ತಾಯವನ್ನು ಹೈದ್ರಾಬಾದ್‌ನ ವಿದ್ಯಾರ್ಥಿ ಜಂಟಿ ಕ್ರಿಯಾ ಸಮಿತಿ ಈಗಾಗಲೇ ಮುಂದಿಟ್ಟಿದೆ.


ಒಮರ್ ಖಾಲೀದ್ ಮತ್ತಿತರರ ಬಿಡುಗಡೆಯೆಂದರೆ ಅದು ಜಾಮೀನೋ ಅಥವಾ ಆ ನಿರ್ದಿಷ್ಟ ಪ್ರಕರಣದಲ್ಲಿ ಖುಲಾಸೆಯಾಗುವುದೆಂದೋ ಅಲ್ಲ ಎಂಬುದು ನಮಗೆ ನಿಮಗೆಲ್ಲರಿಗೂ ಗೊತ್ತು. ಒಮರ್ ಖಾಲೀದ್ ಒಬ್ಬ ಮುಸ್ಲಿಮನಾಗಿರುವುದರಿಂದಲೂ ಆತನನ್ನು ಭಯೋತ್ಪಾದನೆಯ ಜೊತೆ ತಳುಕು ಹಾಕಲಾಗುತ್ತಿದೆ.

ಘೋಷಣೆಗಳು ಮೊದಲಿಗೆ ಬಹಿರಂಗಗೊಂಡಾಗ 'ಈ ಘೋಷಣೆಗಳನ್ನು ಹಾಕಲಾಗಿದ್ದರೆ ತಪ್ಪು; ಆದರೆ, ಅದಕ್ಕಾಗಿ ರಾಷ್ಟ್ರದ್ರೋಹದ ಮೊಕದ್ದಮೆ ಹಾಕುವುದು ತಪ್ಪು' ಎಂತಲೂ, 'ತಪ್ಪು ಘೋಷಣೆಗಳನ್ನು ಹಾಕಿದ್ದರೆ ಅವರಿಗೆ ಬುದ್ಧಿ ಹೇಳೋಣ. ಅದು ಬಿಟ್ಟು ಬಂಧಿಸುವುದು ಸರಿಯಲ್ಲ' ಎಂತಲೂ ವಾದ ಮಂಡಿಸಲಾಯಿತು. ಆಗ ಕನ್ಹಯ್ಯ 'ಭಾರತದಿಂದ ಕಾಶ್ಮೀರಕ್ಕೆ ಆಝಾದಿ'ಯನ್ನು ಕೇಳುತ್ತಿದ್ದ ವಿಡಿಯೋವನ್ನು ಟಿವಿಗಳಲ್ಲಿ ತೋರಿಸಲಾಗಿತ್ತು.

ಆ ನಂತರ ಕನ್ಹಯ್ಯ ಘೋಷಣೆ ಹಾಕಿಲ್ಲವೆಂಬುದು ಖಚಿತವಾಯಿತು. ಅಲ್ಲಿಂದ ಮುಂದೆ ವಿಡಿಯೋಗಳನ್ನು ತಿರುಚಿದವರ ಮೇಲೆ ಎಲ್ಲರ ಗಮನ ಕೇಂದ್ರೀಕೃತವಾಯಿತು. ಎಬಿವಿಪಿ ಸದಸ್ಯರಾದ ಕೆಲವರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗುತ್ತಿದ್ದ ವಿಡಿಯೋ ಒಂದು ಪತ್ತೆಯಾಯಿತು. ಆ ವಿಡಿಯೋದ ಸಾಚಾತನದ ಬಗ್ಗೆಯೂ ತನಿಖೆಯಾಗಬೇಕಿದೆ.

ಕಾಶ್ಮೀರ ಆಜಾದಿ ಕೇಳುತ್ತಿರುವುದು ವಾಸ್ತವ. ನಮಗೆ ಒಪ್ಪಿಗೆಯಿಲ್ಲದಿರಬಹುದು. 'ಜಮ್ಮು ಮತ್ತು ಕಾಶ್ಮೀರ - ಭಾರತ ಮಾತೆಯ ಸಿಂಧೂರ' ಎಂದು ನಾವು ಹೇಳದಿದ್ದರೂ, ಕಾಶ್ಮೀರ ಭಾರತದಿಂದ ಪ್ರತ್ಯೇಕವಾಗುವುದನ್ನಂತೂ ದೇಶದ ಬಹುಸಂಖ್ಯಾತರು (ಅಂದರೆ ಹಿಂದೂಗಳು ಎಂದಲ್ಲ, ನಿಜಾರ್ಥದಲ್ಲಿ ಬಹುಸಂಖ್ಯಾತರು) ಬಯಸುವುದಿಲ್ಲ. ಹಾಗಿದ್ದರೂ, 'ಒಂದು ವೇಳೆ ಕಾಶ್ಮೀರದ ಬಹುಸಂಖ್ಯಾತ ಜನರು ಪ್ರತ್ಯೇಕ ಕಾಶ್ಮೀರವನ್ನೇ ಬಯಸುವುದಾದಲ್ಲಿ, ಆ ಸ್ವಯಂನಿರ್ಣಯಾಧಿಕಾರದ ಹಕ್ಕು ಅವರಿಗಿದೆ' ಎಂದು





ಹೇಳುವ ದೊಡ್ಡ ಗುಂಪು ಈ ದೇಶದಲ್ಲಿದೆ. 'ಪಾಕಿಸ್ತಾನ್ ಜಿಂದಾಬಾದ್' ಅಂತಾಗಲೀ, 'ಭಾರತ ತುಂಡುತುಂಡಾಗುವತನಕ ಈ ಯುದ್ಧ ನಡೆಯುತ್ತಲೇ ಇರುತ್ತದೆ' ಅಂತಾಗಲೀ ಮಾರ್ಕ್ಸಿಸ್ಟ್-ಲೆನಿನಿಸ್ಟ್ ಒಮರ್ ಖಲೀದ್ ಘೋಷಣೆ ಕೂಗಿರಲಾರರು. ಆದರೆ, ಈ ಸ್ವಯಂನಿರ್ಣಯಾಧಿಕಾರದ ಹಕ್ಕಿನ ಕುರಿತು ಅವರಿಗೆ ತಮ್ಮದೇ ಆದ ಅಭಿಪ್ರಾಯವಿರಲು ಸಾಧ್ಯ. ಅದಕ್ಕಾಗಿ ಅವರ ಬಂಧನವನ್ನು ಸಮರ್ಥಿಸಲಾಗುತ್ತದೆಯೇ?

ಹತ್ತಿರ ಹತ್ತಿರ ಒಂದು ಲಕ್ಷ ಜನರ ಹತ್ಯೆಯನ್ನು ಕಣ್ಣಾರೆ ಕಂಡಿರುವ ಕಾಶ್ಮೀರದ ಜನರ ಮನಸ್ಸಿನಲ್ಲಿ ಇರುವ ಭಾವನೆಗಳೇನು ಎಂಬುದನ್ನು ಭಾರತ ದೇಶದ ಜನರು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇವೆಯೇ? ಭಾರತದೊಂದಿಗೆ ವಿಲೀನವಾಗುವ ತಾತ್ಕಾಲಿಕ ಒಪ್ಪಂದಕ್ಕೆ ಸಹಿ ಹಾಕಿದ ರಾಜಾ ಹರಿಸಿಂಗ್‌ರ ಕಾಲದಿಂದ ಇಲ್ಲಿಯವರೆಗೂ ಅಧಿಕೃತವಾಗಿ ಕಾಶ್ಮೀರದ ವಿಚಾರವು ಬಗೆಹರಿದಿಲ್ಲವೆಂಬುದು ದೇಶದ ಎಷ್ಟು ಜನರಿಗೆ ಗೊತ್ತು? ಏಕಪಕ್ಷೀಯವಾಗಿ ಕಾಶ್ಮೀರ ಅವಿಭಾಜ್ಯ ಅಂಗ ಎಂದು ಘೋಷಿಸಿದ ಭಾರತ ಸರ್ಕಾರವಾಗಲೀ, ಕಾಶ್ಮೀರ ವಿವಾದಿತ ಪ್ರದೇಶ ಎಂದು ಘೋಷಿಸಿದ ಪಾಕಿಸ್ತಾನ ಸರ್ಕಾರಕ್ಕಾಗಲೀ ಅಲ್ಲಿನ ಜನರ ಬಗ್ಗೆ ಎಷ್ಟು ಪ್ರೀತಿಯಿದೆ? ಆ ಪ್ರದೇಶವನ್ನು ತಮ್ಮ ಅವಿಭಾಜ್ಯ ಅಂಗವನ್ನಾಗಿ ಭಾವಿಸುವವರು ಅಲ್ಲಿನ ಜನರೊಂದಿಗೆ ಆತ್ಮೀಯ ಸಂವಾದವನ್ನು ಎಷ್ಟರಮಟ್ಟಿಗೆ ಮಾಡಲು ಪ್ರಯತ್ನಿಸಿದ್ದಾರೆ. ಪ್ರತಿನಿತ್ಯ ಹಿಂಸೆ, ಗುಂಡೇಟು, ಕರ್ಫ್ಯೂ, ಬಾಂಬ್ ದಾಳಿಗಳನ್ನು ನೋಡುತ್ತಿರುವವರ ಜೀವನ ಎಷ್ಟು ಧ್ವಂಸವಾಗಿರಬಹುದು ಎಂಬುದನ್ನು ನಾವು ಊಹಿಸಿಕೊಳ್ಳಬಲ್ಲೆವೇನು?

ನಿಜವಾಗಲೂ ಕಾಶ್ಮೀರದ ಜನರಿಗೆ ಭಾರತದ ಬಗ್ಗೆ ಪ್ರೀತಿ ಹುಟ್ಟಲು ಕಾರಣವಾಗುವವರು ಮಹಾರಾಷ್ಟ್ರದ ಒಮರ್ ಖಾಲೀದನಂತಹವರು. ಹಲವಾರು ಬಾರಿ ಕಾಶ್ಮೀರಕ್ಕೆ ಎಡತಾಕಿದ ದೂರದ ಆಂಧ್ರಪ್ರದೇಶದ ಬಾಲಗೋಪಾಲ್ ಅವರಲ್ಲಿ ಪ್ರೀತಿ ಹುಟ್ಟಿಸಿದ್ದರು. ಎಂತಹ ವಿಪರ್ಯಾಸ ನೋಡಿ? ಕಾಶ್ಮೀರದ ಜನರಿಗೆ ಪ್ರತಿನಿತ್ಯ ತಾವು ಅನ್ಯ ಎಂಬ ಭಾವನೆ ಹುಟ್ಟಿಸುವಂತೆ ಮಾಡುವವರು ದೇಶಪ್ರೇಮಿಗಳು. ಅವರಲ್ಲಿ ಭಾರತದ ಕುರಿತು ಪ್ರೀತಿ ಹುಟ್ಟುವಂತೆ ಮಾಡುವವರು ದೇಶದ್ರೋಹಿಗಳು! ಜೆಎನ್‌ಯುನ ವಿದ್ಯಾರ್ಥಿಗಳು ಕಾಶ್ಮೀರದ ವಿದ್ಯಾರ್ಥಿನಿ ಶೆಹ್ಲಾ ರಷೀದಾಳನ್ನು ತಮ್ಮ ಉಪಾಧ್ಯಕ್ಷಳನ್ನಾಗಿ ಮಾಡಿಕೊಂಡಿದ್ದಾರೆ. ಈ ವಿದ್ಯಾರ್ಥಿಗಳು ಮತ್ತು ಶೆಹ್ಲಾ ಭಾರತದ ಕುರಿತ ಕಾಶ್ಮೀರದ ಜನರ ಎದೆಯನ್ನು ಮಿದುವಾಗಿಸಲು ಸಾಧ್ಯ. ದೇಶಪ್ರೇಮದ ಅಂಶ ಇದರಲ್ಲಿ ಇದೆಯೋ, ಕಾಶ್ಮೀರಿಗರ ಮನದಲ್ಲಿ ಆಕ್ರೋಶ ಹುಟ್ಟಿಸುವ ಸಂಘಪರಿವಾರದ ನಡೆಯಲ್ಲಿ ದೇಶಪ್ರೇಮವಿದೆಯೋ? ಆಜಾದಿಯ ಚರ್ಚೆಯಲ್ಲಿ ಮರೆಯದೇ ಬರಬೇಕಾದ ಅಂಶ ಇದು. ಹುಸಿ ಉದ್ರೇಕದ ದೇಶಪ್ರೇಮವನ್ನು ನಾವು ಪ್ರಶ್ನಿಸಲೇಬೇಕು.

ಕಾಶ್ಮೀರದ ಜನರ ಪ್ರಜಾತಾಂತ್ರಿಕ ಹಕ್ಕೊತ್ತಾಯಗಳ ಕುರಿತು ಮತ್ತು ಉನ್ನತ ಶಿಕ್ಷಣದಲ್ಲಿ ಧಾಳಾಗಿ ವ್ಯಾಪಿಸಿರುವ ಸಾಂಸ್ಥಿಕ ಬ್ರಾಹ್ಮಣವಾದದ ಕುರಿತು ಆರೋಗ್ಯಪೂರ್ಣವಾದ ಚರ್ಚೆ ನಡೆಯುವುದು ಇಂದಿನ ತುರ್ತು ಅಗತ್ಯಗಳಲ್ಲೊಂದು. ಇವೆರಡೂ ದೇಶಪ್ರೇಮದ ಕೆಲಸಗಳಾಗಿವೆ. ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಸಂಬಂಧಿಸಿದ ವಿಚಾರಗಳೂ ಆಗಿವೆ. ಭಾರತದೊಳಗೆ ಆಜಾದಿಯ ಅರ್ಥ ಇದೇ ಅಲ್ಲವೇ?

ಈ ಹೋರಾಟವನ್ನು ಕನ್ಹಯ್ಯನ ನೇತೃತ್ವದಲ್ಲಿ ನಡೆಸೋಣ ಎನ್ನುವುದರ ಅರ್ಥ ಇಷ್ಟೇ. ಕನ್ಹಯ್ಯನ ಭಾಷಣದ ನಂತರದಲ್ಲಿ ಮೂಡಿರುವ ಸಕಾರಾತ್ಮಕ ಬಲಸಂಚಯವನ್ನು ನಾವು ನಿರಾಕರಿಸಲಾಗದು; ನಿರಾಕರಿಸಬಾರದು. ಸಾಮಾನ್ಯ ಸಂದರ್ಭಗಳಲ್ಲಿ ಕೋಮುವಾದಿಗಳ ಅಟ್ಟಹಾಸದ ವಿರುದ್ಧ ನಡೆಯುವ ಹೋರಾಟದಲ್ಲಿ ಕಾಣದ ಅದೆಷ್ಟೋ ಪ್ರಜ್ಞಾವಂತರು, ಈ ಸಂದರ್ಭದಲ್ಲಿ ಕನ್ಹಯ್ಯನ ಭಾಷಣದಿಂದ ರೋಮಾಂಚನಗೊಂಡರು. ಇದಕ್ಕೆ ಕಾರಣವಿಲ್ಲದಿಲ್ಲ. ಜನಸಾಮಾನ್ಯರ ಭಾಷೆಯಲ್ಲಿ, ಈ ದೇಶದ ಬಹುಸಂಖ್ಯಾತ ಜನಸಾಮಾನ್ಯರ ನಿಜವಾದ ಇಶ್ಯೂಗಳನ್ನೇ ಕೇಂದ್ರದಲ್ಲಿಟ್ಟುಕೊಂಡು ಮೋದಿಗೆ ತಿರುಗೇಟು ನೀಡಬಲ್ಲ ವ್ಯಕ್ತಿಯಾಗಿ ಕನ್ಹಯ್ಯ ಕಾಣಿಸಿದ್ದಾರೆ. ತಮ್ಮದೇ ಪಕ್ಷದಿಂದ ಶತಮಾನದಷ್ಟು ಕಾಲ ಜಾರಿ ಮಾಡಿದ ಜನವಿರೋಧಿ ನೀತಿಗಳ ಹೊರೆಯನ್ನು ಹೊತ್ತುಕೊಂಡೇ ಸಾಗಬೇಕಾದ ರಾಹುಲ್‌ಗಾಂಧಿಯಲ್ಲಿ ಅಂತಹ ಪರ್ಯಾಯ ಕಾಣುವುದು ಸಾಧ್ಯವಿರಲಿಲ್ಲ (ಜೆಎನ್‌ಯು ಮತ್ತು ಹೈದ್ರಾಬಾದ್ ವಿವಿಗೆ ಹೋಗಿ ಬಂದ ನಂತರ ಇದ್ದಕ್ಕಿದ್ದಂತೆ ಲೋಕಸಭೆಯಲ್ಲಿ ಆತ್ಮವಿಶ್ವಾಸದಿಂದ ಮಾತಾಡಿದ ಒಂದು ಸಂದರ್ಭ ಹೊರತುಪಡಿಸಿ). ಕೇಜ್ರಿವಾಲ್ ಎಷ್ಟೇ ಯಶಸ್ವಿ ರಾಜಕಾರಣಿಯಾದರೂ ಅವರು ಕೇವಲ ದೆಹಲಿಯಂತಹ ನಗರಗಳಿಗೆ ಸೀಮಿತವಾದ ಅಥವಾ ಮಧ್ಯಮವರ್ಗದ ಆಶೋತ್ತರಗಳನ್ನು ಮಾತ್ರ ಬಿಂಬಿಸಬಲ್ಲ ವ್ಯಕ್ತಿಯಾಗಿ ಕಾಣುತ್ತಾರೆ.

ಬಿಹಾರದಂತಹ ಎರಡನೇ ಜನನಿಬಿಡ ಮತ್ತು ಹಿಂದುಳಿದ ರಾಜ್ಯದ ಪ್ರತಿನಿಧಿಯಾಗಿಯೂ ಇರುವ ಕನ್ಹಯ್ಯ, ಅದನ್ನು ದಾಟಿ ದೇಶದ ಬಹುಸಂಖ್ಯಾತ 'ಆಮ್‌ಆದ್ಮಿ'ಗಳ ಸಮಸ್ಯೆಗಳ ನೆಲೆಯಲ್ಲಿ ಮಾತನಾಡಬಲ್ಲರು. ಈ ಸಂದರ್ಭ ಸೃಷ್ಟಿಸಿರುವ ಕನ್ಹಯ್ಯನನ್ನು ನಿರಾಕರಿಸುವುದೆಂದರೆ, ಇವೆಲ್ಲವನ್ನೂ ಪಕ್ಕಕ್ಕೆ ಸರಿಸಿದ ಹಾಗೂ ಆಗಿಬಿಡಬಹುದು. ಕೋಟ್ಯಾಂತರ ಜನರಿಗೆ ತಲುಪುವಂತೆ ಮಾತನಾಡಿದ ಕನ್ಹಯ್ಯ ಕುಮಾರ ನಿರ್ದಿಷ್ಟ ವಿಚಾರಧಾರೆಯ ಬೆಳವಣಿಗೆಯ ಪ್ರತೀಕವೂ ಆಗಿದ್ದಾರೆ. ಆತನನ್ನು ರೂಪಿಸಿದ್ದೂ ಒಂದು ಪಕ್ಷ ಹಾಗೂ ಅದರ ಸಂಘಟನೆ ಎನ್ನುವುದನ್ನು ನಾವು ಮರೆಯಲಾಗದು. ಇನ್ನೂ ಎಳೆಯ ಬಾಲಕನಾಗಿದ್ದಾಗಲೇ ಎ.ಬಿ.ಬರ್ಧನ್‌ರಿಂದ ಪುರಸ್ಕಾರ ಪಡೆಯುತ್ತಿರುವ ಚಿತ್ರ ಅದನ್ನು ಪುಷ್ಟೀಕರಿಸುತ್ತದೆ. ಈಗಿನ ಕನ್ಹಯ್ಯನ ಮಾತುಗಳಲ್ಲಿ ಕಂಡುಬಂದ 'ಮಾರ್ಕ್ಸ್‌ವಾದದ ಜೊತೆಗೆ ಅಂಬೇಡ್ಕರರ ಚಿಂತನೆಗಳ ಅನುಸಂಧಾನ'ವು ಭಾರತದ ಎಡಪಂಥವು ಬೆಳೆಯುತ್ತಿರುವುದರ ದ್ಯೋತಕವಾಗಿದೆ.

ಹೀಗಾಗಿ ಕನ್ಹಯ್ಯನ ನೇತೃತ್ವವೆಂದರೆ, ಈ ಎರಡು ಚಿಂತನೆಗಳ ಅನುಸಂಧಾನದ ನೇತೃತ್ವವೆಂದು ಅರ್ಥ. ಜೊತೆಗೆ ಹೊಸ ತಲೆಮಾರಿನ ಹೊಸತನ, ಚೈತನ್ಯ ಹಾಗೂ ಹಳೇಬೇರಿನ ಪಾಠಗಳ ಅನುಸಂಧಾನದ ನೇತೃತ್ವವೂ ಆಗಿದೆ. ಈ ಸಕಾರಾತ್ಮಕ ಸಂದರ್ಭದ ಸಕಾರಾತ್ಮಕ ಅಂಶಗಳೆಲ್ಲವನ್ನೂ ಗಟ್ಟಿಗೊಳಿಸಿಕೊಳ್ಳುವ ಅಗತ್ಯ ನಮಗಿದೆ.

ರೋಹಿತ್‌ರ ಸಾವಿನಿಂದ ಉಂಟಾದ ಪರಿಣಾಮಗಳನ್ನು ಅರಗಿಸಿಕೊಳ್ಳಲಾಗದ ಫ್ಯಾಸಿಸ್ಟರು ಜೆಎನ್‌ಯು ಪ್ರಕರಣದಿಂದ ಅದನ್ನು ಮುಚ್ಚಿ ಹಾಕ ಯತ್ನಿಸಿದರು. ರೋಹಿತ್ ಮತ್ತು ಕನ್ಹಯ್ಯರ ಕಾಂಬಿನೇಷನ್ ಸಹ ಅವರು ಅರಗಿಸಿಕೊಳ್ಳಲಾಗದ್ದು ಆಗಿದೆ. ಮೇಲ್ನೋಟಕ್ಕೆ ದಲಿತ ವಿರೋಧಿಗಳಾಗಲು ಕೋಮುವಾದಿಗಳು ಹಿಂಜರಿಯುತ್ತಾರೆಂಬಂತೆ ಕಾಣುತ್ತದೆ. ಆದರೆ, ಮೀಸಲಾತಿಯ ಕುರಿತು ದೇಶದೊಳಗೆ ಏಳುತ್ತಿರುವ ಅಸಹನೆಯು ತನ್ನಂತೆ ತಾನೇ ಉದ್ಭವವಾಗಿರುವುದಲ್ಲ. ಅದರ ಹಿಂದೆ ಸಂಘಪರಿವಾರದ ವ್ಯವಸ್ಥಿತ ಜಾಲ ಕೆಲಸ ಮಾಡುತ್ತಿದೆ. ಪಟೇಲರ ನಂತರ, ಜಾಟರು ಮೀಸಲಾತಿ ಯುದ್ಧಕ್ಕೆ ಇಳಿದಿದ್ದಾರೆ. ಸಂದರ್ಭವು ಕನ್ಹಯ್ಯನನ್ನು ಸೃಷ್ಟಿಸಿದಂತೆಯೇ, ಹಾರ್ದಿಕ್ ಪಟೇಲನನ್ನೂ ಸೃಷ್ಟಿಸುತ್ತದೆ. ಹಾಗಾಗಿ ನಮ್ಮ ಮೈಮರೆವು ರೋಹಿತ್‌ರ ಸಾವಿಗೆ ಕಾರಣವಾದ ದಬ್ಬಾಳಿಕೆಯನ್ನು ಮಾನ್ಯಗೊಳಿಸಿಬಿಡುವ ಸಾಧ್ಯತೆಯಿದೆ. ಹಾಗಾಗಿ ಹೈದ್ರಾಬಾದ್ ವಿದ್ಯಾರ್ಥಿ ಜಂಟಿ ಕ್ರಿಯಾ ಸಮಿತಿಯ ಕರೆಗೆ ಓಗೊಡುವುದು ನಮ್ಮ ಕರ್ತವ್ಯವಾಗಿದೆ.

ಇಷ್ಟು ವರ್ಷಗಳ ಕೋಮುವಾದಿ ರಾಜಕಾರಣ ಕಾಶ್ಮೀರ ಮತ್ತು ಮುಸ್ಲಿಂ ಗುರುತನ್ನು ದಾಳವನ್ನಾಗಿ ಪರಿವರ್ತಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ನಮ್ಮ ಸವಾಲು ಇರುವುದು ಇಲ್ಲೇ. ಹುಸಿ ರಾಷ್ಟ್ರವಾದವಿಲ್ಲದ ಕೋಮುವಾದಿ ರಾಜಕಾರಣವಿಲ್ಲ. ಹುಸಿ ರಾಷ್ಟ್ರವಾದದ ಜಾಗದಲ್ಲಿ ನಿಜವಾದ ದೇಶಪ್ರೇಮವನ್ನು ಸ್ಥಾಪಿಸಬೇಕಾದರೆ ಕಾಶ್ಮೀರದ ಜನರ ಮತ್ತು ಮುಸ್ಲಿಮರ ಪ್ರಜಾತಾಂತ್ರಿಕ ಹಕ್ಕುಗಳನ್ನು ಎತ್ತಿಹಿಡಿಯಬೇಕು. ಒಮರ್ ಖಾಲೀದ ಬಿಡುಗಡೆಗಾಗಿ ನಡೆಯುವ ಹೋರಾಟದಲ್ಲಿ ಇವನ್ನು ಸಾಧಿಸುವ ಸಾಧ್ಯತೆಗಳು ತೆರೆದುಕೊಳ್ಳುತ್ತವೆ. ರೋಹಿತ್ ಮತ್ತು ಕನ್ಹಯ್ಯನ ಸಂಗಾತಿಗಳಾದ ನಾವು ಒಮರ್ ಖಾಲೀದನ ಸಂಗಾತಿಗಳೂ ಆಗಬೇಕಿದೆ. ಇದು ಸಾಧ್ಯವಾದರೆ ಈ ಅವಧಿಯಲ್ಲಿ ಸ್ವಲ್ಪ ಡಲ್ ಆಗಿರುವ ಫ್ಯಾಸಿಸ್ಟ್ ಪಡೆಯ ಸೋಲಿನ ಪಯಣ ಆರಂಭವಾಗುತ್ತದೆ.

ನೀಲಿ ಬಾನಿನಲ್ಲಿ ಕೆಂಪು ಸೂರ್ಯ...



ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

ಅದೇನೇನೋ ಆಗಿ, ಎಂತೆಂತದ್ದೋ ನಡೆದು ...ನೆಗೂ ನಮ್ಮ ಈ ವರ್ಷದ 'ಲಂಕೇಶ್' ಕಾರ್ಯಕ್ರಮ ...ದು ಚೆಂದದ ರೂಪ ಪಡೆದಿದೆ! ಮೊದಲು ಈ ...ರ್ಷ ಕಾರ್ಯಕ್ರಮವನ್ನು ಧಾರವಾಡದಲ್ಲಿ ಮಾಡ್ಬೋಣ ...ದುಕೊಂಡಿದ್ದೆವು. ಅದಕ್ಕೆಂದು ಮಿತ್ರ ಎಂ.ಡಿ. ಒಕ್ಕುಂದ ...ವರು ಇದೇ ಮಾರ್ಚ್ 12ಕ್ಕೆ ಧಾರವಾಡದಲ್ಲಿರುವ ...ದ್ಯಾವರ್ಧಕ ಸಂಘದ ಹಾಲ್‌ಅನ್ನೂ ಬುಕ್ ಮಾಡಿದ್ದರು. ...ರು ವಾರಗಳ ಹಿಂದೆ ಪೂರ್ವಭಾವಿ ತಯಾರಿಗೆ ...ನು ಧಾರವಾಡಕ್ಕೆ ಹೋಗಬೇಕಿತ್ತು, ಆದರೆ ಅದೇ ಹೊತ್ತಿಗೆ ...ೆ ಜ್ವರ ಹಿಡಿದಿದ್ದರಿಂದ ನಾನು ನನ್ನ ಪ್ರಯಾಣವನ್ನು ...ಮುಂದೂಗೊಳಿಸಿದೆ. ಆಮೇಲೆ ಧಾರವಾಡದ ಮಿತ್ರರಾದ ವಿನಯ್ ...ಪ್ಪಿನ ಮತ್ತು ಇತರೆ ಸಾಹಿತ್ಯಾಸಕ್ತ ಮಿತ್ರರು ಬೇರೆಬೇರೆ ...ೋರಾಟ ಮತ್ತು ಕೆಲಸಗಳಲ್ಲಿ ಬ್ಯುಸಿ ಆಗಿದ್ದರಿಂದ ಮತ್ತು ...ಸ್ತಕಗಳ ಕೆಲಸಗಳು ನನ್ನನ್ನು ಆವರಿಸಿದ್ದರಿಂದ ಈ ವರ್ಷ ...ಂಗಳೂರಿನಲ್ಲೇ ಚಿಕ್ಕದಾಗಿ ಒಂದು ಪ್ರೋಗ್ರಾಮ್ ಮಾಡಿ ...ುಗಿಸಿದರಾಯಿತು ಎಂದು ನಿರ್ಧರಿಸಿದೆ. ಅದನ್ನು ಎಷ್ಟು ...ಕ್ಕದಾಗಿ ಮಾಡಬೇಕೆಂದುಕೊಂಡಿದ್ದೆನೆಂದರೆ ಅಪ್ಪನನ್ನು ...ರಿತು ಯಾರಾದರೊಬ್ಬರಿಂದ ಮಾತನಾಡಿಸಿ, ...ಮ್ಮನಿಂದ ಪುಸ್ತಕಗಳನ್ನು ಬಿಡುಗಡೆ ...ಾಡಿಸಿದರಾಯಿತು ಎಂದುಕೊಂಡಿದ್ದೆ. ಈ ಚಿಕ್ಕ ...ರ್ಯಕ್ರಮಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ಚಿಕ್ಕ ...ಾಲ್ ಸಾಕೆಂದು ಅದನ್ನು ಬುಕ್ ಮಾಡಿದೆ.

ಆದರೆ ಇವೆಲ್ಲ ನಡೆಯುತ್ತಿದ್ದ ವೇಳೆಯಲ್ಲೇ ...ಹಲಿಯ ಜೆಎನ್‌ಯು ವಿದ್ಯಾರ್ಥಿಗಳು ಫ್ಯಾಸಿಸಂ ...ರುದ್ಧ ಈ ದೇಶವನ್ನು ಹಾಳುಕೊಂಪೆಯಾಗಿಸಿರುವ ...ತರೆ ಸಾಮಾಜಿಕ ಮತ್ತು ರಾಜಕೀಯ ಪಿಡುಗುಗಳ ...ರುದ್ಧ 'ಆಜಾದಿ' ಕೂಗಿದರು. ಹೈದರಾಬಾದ್ ಕೇಂದ್ರ ...ಶ್ವವಿದ್ಯಾಲಯದಲ್ಲಿ ರೋಹಿತ್ ವೇಮುಲನ ಸಾವು ...ಮ್ಮನ್ನೆಲ್ಲ ತೀವ್ರವಾಗಿ ಕಾಡುತ್ತಿದ್ದಾಗಲೇ ಕನ್ಹಯ್ಯ ಕುಮಾರ್ ...ಬ್ರವರಿ 11ರಂದು ಮಾಡಿದ ಮೊದಲ ಆಜಾದಿ ಭಾಷಣ ...ೀ ದೇಶದ ಎಲ್ಲಾ ಪ್ರಜ್ಞಾವಂತರನ್ನು ಪುಳಕಿತರನ್ನಾಗಿಸಿತು. ...ಮೇಲೆ ಆದ ವಿದ್ಯಮಾನಗಳನ್ನು, ಬಿಜೆಪಿ ಸರ್ಕಾರದ ...ಜ್ಜೆರಹಿತ ನಡತೆಯನ್ನು ಎಲ್ಲರೂ ತೀಕ್ಷ್ಣವಾಗಿ ...ಮನಿಸುತ್ತಿದ್ದರು. ರೋಹಿತ್ ವೇಮುಲ ದೇಶದ ಜನರಲ್ಲಿ ...ಡಿದೆಬ್ಬಿಸಿದ್ದ ಕೆಚ್ಚು ಕನ್ಹಯ್ಯ, ಶೆಹ್ಲಾ ರಶೀದ್, ಉಮರ್ ...ಾಲಿದ್ ಎಂಬ ಯುವಜನತೆಯ ಮೂಲಕ ...ಕ್ತವಾಗತೊಡಗಿತ್ತು. 'ಆಕ್ಯುಪೈ ಯುಜಿಸಿ' ಹೋರಾಟದಲ್ಲಿ ...ಕ್ರಿಯವಾಗಿ ಭಾಗವಹಿಸಿದ್ದ ನಮ್ಮ ಮಲ್ಲಿಗೆಗೆ ಜೆಎನ್‌ಯು ...ದ್ಯಾರ್ಥಿಗಳ ಪರಿಚಯ ಇದೆ. ನಾನು ಮಲ್ಲಿಗೆ ಮೂಲಕ ...ನ್ಹಯ್ಯನ ಮಿತ್ರರನ್ನು ಮತ್ತು ಎಐಎಸ್‌ಎಫ್‌ನ ಹಿರಿಯ ...ಾಯಕರನ್ನು ಸಂಪರ್ಕಿಸಿದೆ. ಆಗ ನಮ್ಮ ಈ ವಾರ್ಷಿಕ ...ಾರ್ಯಕ್ರಮಕ್ಕೆ ಇತ್ತ ಹೈದರಾಬಾದಿನಿಂದ ರೋಹಿತ್ ...ೇಮುಲನ ತಾಯಿ ರಾಧಾ ಅವರನ್ನು, ಅತ್ತ ದೆಹಲಿಯಿಂದ ...ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ನಾಯಕರನ್ನು ಕರೆದರೆ ...ೆನ್ನ ಅನ್ನಿಸಿತು. ಆದ್ದರಿಂದಲೇ ಕನ್ಹಯ್ಯ ಬಿಡುಗಡೆ ಆದ ...ುದ್ದಿ ಬರುತ್ತಿದ್ದಂತೆ ಎಐಎಸ್‌ಎಫ್‌ನ ಜನರಲ್ ಸೆಕ್ರೆಟರಿ ...ಶ್ವಜೀತ್ ಎಂಬುವವರಿಗೆ ಫೋನ್ ಮಾಡಿ, ಮಾರ್ಚ್ 12ಕ್ಕೆ ಕನ್ಹಯ್ಯನನ್ನು ಬೆಂಗಳೂರಿಗೆ ಕಳುಹಿಸಿಕೊಡುತ್ತೀರ ...ಂದು ಕೇಳಿದೆ. ಅದಕ್ಕವರು "ಕಳಿಸಿಕೊಡೋಣಂತೆ" ...ಂದರು. ಅವತ್ತು ರಾತ್ರಿ ಕನ್ಹಯ್ಯ ಎರಡನೆ ಬಾರಿಗೆ ...ಮಾಡಿದ 'ಆಜಾದಿ' ಭಾಷಣ ಈ ದೇಶದ ಮೇಲೆ ಎಂತಹ ...ಪ್ರಭಾವ ಬೀರಿದೆ ಎಂಬುದು ನಿಮಗೆಲ್ಲ ಗೊತ್ತು. ಅದು ...ಮ್ಮೆಲ್ಲರಲ್ಲೂ ರೋಮಾಂಚನವನ್ನು ಮೂಡಿಸಿದೆ. ಈಗಲೂ ...ನ್ನ ಕಿವಿಗಳಲ್ಲಿ ಆತನ ಆಜಾದಿ ಕೂಗು ಗುನುಗುನಿಸುತ್ತಿದೆ.

ಆದರೆ ಎಲ್ಲವೂ ನಾವು ಅಂದುಕೊಂಡಂತೆ ...ಡೆಯುವುದಿಲ್ಲವಲ್ಲ, ಅತ್ತ ರೋಹಿತನ ತಾಯಿಯ ಆರೋಗ್ಯ ...ೈಕೊಟ್ಟು ಅವರು ಪ್ರಯಾಣ ಮಾಡದಂತಾಯಿತು. ಇತ್ತ ...ಲೆಕೆಟ್ಟ ಚೆಡ್ಡಿಗಳಿಂದ ಕನ್ಹಯ್ಯನ ಪ್ರಾಣಕ್ಕೇ ಅಪಾಯ ...ರುವುದರಿಂದ ಆತನಿಗೆ ಪೊಲೀಸ್ ರಕ್ಷಣೆ ಬೇಕೆಂದು ...ೇಂದ್ರ ಸರ್ಕಾರವನ್ನು ಆತನ ಸಂಘಟನೆಯವರು ಕೇಳಿದರು. ...ನ್ಹಯ್ಯನ ಮೇಲೆ ಮತ್ತು ಇತರೆ ಎಡಪಂಥೀಯರ ಮೇಲೆ ...ನ್ಯಾಯಾಲಯದ ಆವರಣದಲ್ಲೇ ಅಸಲಿ ಮತ್ತು ನಕಲಿ ...ವಕೀಲರು ದಾಳಿ ಮಾಡಿದಾಗ ಕೈಕಟ್ಟಿಕೊಂಡು ನಿಂತಿದ್ದ ...ಪೊಲೀಸರು ಆತನಿಗೆ ನಿಜವಾಗಲೂ ರಕ್ಷಣೆ ನೀಡುತ್ತಾರೆಂಬ ...ಭರವಸೆ ಯಾರಿಗೂ ಇರಲಿಲ್ಲ, ಆದರೂ ಕೇಳಿದ್ದಾಯಿತು. ...ಆದರೆ ಕನ್ಹಯ್ಯನಿಗೆ ರಕ್ಷಣೆ ನೀಡಿದರೆ ಆತ ಹೋಗಿಬಂದಲ್ಲೆಲ್ಲ ...ತಮ್ಮನ್ನೇ ತರಾಟೆಗೆ ತೆಗೆದುಕೊಳ್ಳುತ್ತಾನೆ ಎಂದೂ, ...ಈಗಾಗಿರುವ ಮುಖಭಂಗ ಇನ್ನೂ ರಂಗೇರುತ್ತದೆಂದೂ ...ಗೊತ್ತಿರುವುದರಿಂದ ಗೃಹ ಸಚಿವ ರಾಜನಾಥ್ ಸಿಂಗ್ "ದಾರಿಹೋಕರೆಲ್ಲ ನಮ್ಮ ಪ್ರಾಣಕ್ಕೆ ಅಪಾಯವಿದೆ ಎಂದರೆ ...ಎಲ್ಲರಿಗೂ ರಕ್ಷಣೆ ಕೊಡಲಾಗುವುದಿಲ್ಲ" ಎಂದು ಕೈ ...ಎತ್ತಿದ. ಅಲ್ಲಿಗೆ ಸದ್ಯಕ್ಕೆ ಕನ್ಹಯ್ಯನಿಗೆ ಜೆಎನ್‌ಯು ಆವರಣ ...ಮಾತ್ರ ಸುರಕ್ಷಿತ ಎಂದು ಎಲ್ಲರೂ ನಿರ್ಧರಿಸಿದ್ದರಿಂದ ...ಆತ ಬೆಂಗಳೂರಿನ ನಮ್ಮ ಕಾರ್ಯಕ್ರಮಕ್ಕೆ ಬರುವುದಿಲ್ಲ ...ಎಂದಾಯಿತು.

ಆದರೆ ಅಷ್ಟು ಹೊತ್ತಿಗೆ ಅದೇ ಜೆಎನ್‌ಯುನಲ್ಲಿ ...ಓದುತ್ತಿರುವ ಮತ್ತು ತನಗೆ ವಿಶ್ವವಿದ್ಯಾಲಯ ಅನ್ಯಾಯ ಮಾಡುತ್ತಿರುವುದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಜನವರಿ ತಿಂಗಳಲ್ಲಿ ಉಪಕುಲಪತಿಗೆ ಪತ್ರ ಬರೆದಿದ್ದ ದಲಿತ ವಿದ್ಯಾರ್ಥಿ ಮೋಹಿತ್ ಪಾಂಡೆಯನ್ನು ಮಲ್ಲಿಗೆ ನನ್ನ ಪರವಾಗಿ ಸಂಪರ್ಕಿಸಿದ್ದಳು. ಇನ್ನೊಂದು ಕಡೆ ಪತ್ರಕರ್ತ ಮಿತ್ರ ಸುದೀಪ್ತೋ ಮೊಂಡಲ್ ಕೂಡ ಜೆಎನ್‌ಯುಎಸ್‌ಯು ಉಪಾಧ್ಯಕ್ಷೆಯಾದ ಶೆಹ್ಲಾ ರಶೀದ್‌ಳನ್ನು ಸಂಪರ್ಕಿಸಿದ್ದ. ಹಾಗೆಯೇ ಹೈದರಾಬಾದ್ ವಿವಿಯಲ್ಲಿ ರೋಹಿತ್ ವೇಮುಲನ ಮಿತ್ರರಾದ ಉಮಾಮಹೇಶ್ವರ ಅವರನ್ನು ನೂರ್ ಶ್ರೀಧರ್ ಸಂಪರ್ಕಿಸಿದ್ದರು. ನಮ್ಮ ಪತ್ರಿಕೆ ಎಂತಹದ್ದು, ಪಿ.ಲಂಕೇಶರು ಎಂಥವರಾಗಿದ್ದರು ಮತ್ತು ನಮ್ಮ ರಾಜಕೀಯ ಸಿದ್ಧಾಂತ ಎಂತಹದ್ದು ಎಂದು ಈ ಮೂವರಿಗೂ ತಿಳಿಸಲು ಬೇರೆ ಪತ್ರಿಕೆಗಳಲ್ಲಿ ಲಂಕೇಶ್ ಮತ್ತು ನಮ್ಮ ಪತ್ರಿಕೆಯನ್ನು ಕುರಿತು ಪ್ರಕಟವಾಗಿದ್ದ ಎರಡು ಲೇಖನಗಳನ್ನು ಇ-ಮೇಲ್ ಮಾಡಿದೆ. ಅದನ್ನು ಓದಿದ ಮೂವರೂ ನಮ್ಮ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ಒಪ್ಪಿಕೊಂಡರು.



ಈಗ ಯುವಜನತೆಯೇ ಹೋರಾಟದ ಮುಂಚೂಣಿಯಲ್ಲಿರುವುದರಿಂದ, ಅವರೇ ಈ ದೇಶದ ಭವಿಷ್ಯವನ್ನು ನಿರ್ಧರಿಸುವವರಾಗಿರುವುದರಿಂದ ಈ ಬಾರಿಯ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಯುವಕರಿಗೇ ಮೀಸಲಿಡಬೇಕೆಂದು ನಮ್ಮ ತಂಡ ನಿರ್ಧರಿಸಿತು. ಅದರಂತೆ ಈ ವರ್ಷ ವೇದಿಕೆಯನ್ನೇರುತ್ತಿರುವವರಲ್ಲಿ ಬಿಳಿಕೂದಲನ್ನು ಹೊಂದಿರುವವಳು ನಾನೊಬ್ಬಳೇ! ನಾನು ಹೇಗಿದ್ದರೂ 15 ನಿಮಿಷಕ್ಕಿಂತ ಹೆಚ್ಚು ಕಾಲ ಮಾತನಾಡುವುದಿಲ್ಲವಾದ್ದರಿಂದ ವೇದಿಕೆ ಮೇಲೆ ನನ್ನ ಉಪಸ್ಥಿತಿಯೂ ಅಷ್ಟಕ್ಕಷ್ಟೇ!!

ಯುವಜನತೆಗೆ ಪ್ರಾಮುಖ್ಯತೆ ಕೊಡಬೇಕೆಂದು ನಿರ್ಧಾರ ಮಾಡಿದ್ದರಿಂದ ಈ ವರ್ಷ ಲಂಕೇಶರನ್ನು ಕುರಿತು ಮಾತನಾಡಲು ಹಿರಿಯ ಲೇಖಕರನ್ನೋ ಅಥವಾ ಚಿಂತಕರನ್ನೋ ಕರೆಯುವ ಬದಲು ಪ್ರತಿಭಾವಂತ ಯುವ ಬರಹಗಾರ ಟಿ.ಕೆ. ದಯಾನಂದನನ್ನು ಆಹ್ವಾನಿಸಿದೆ. "ಹುಡುಗ, ನಮ್ಮ ಈ ವರ್ಷದ ಕಾರ್ಯಕ್ರಮ ನಿಮ್ಮ ಪೀಳಿಗೆಗೆ ಮೀಸಲು. ಅದಕ್ಕೆ ನೀನೇ ಬಂದು ಮಾತಾಡು" ಅಂದೆ. ಅದಕ್ಕೆ ದಯಾನಂದ "ಹೌದು ಕಣಕ್ಕ ನೀವೆಲ್ಲ ಮಾತಾಡಿದ್ದು ಸಾಕು. ನಮಗೂ ಛಾನ್ಸ್ ಕೊಡಿ" ಎಂದು ತಮಾಷೆ ಮಾಡಿದ. ಜೊತೆಗೆ 'ಸಮಕಾಲೀನ ಸಂದರ್ಭದಲ್ಲಿ ಲಂಕೇಶ್ ಚಿಂತನೆ' ಕುರಿತು ಮಾತನಾಡುವುದಾಗಿ ಹೇಳಿದ.

ದೆಹಲಿಯ ಶೆಹ್ಲಾ ರಶೀದ್, ಮೋಹಿತ್ ಪಾಂಡೆ ಮತ್ತು ಹೈದರಾಬಾದಿನ ಉಮಾಮಹೇಶ್ವರ್ ರಾವ್ ಜೊತೆಗೆ ನಮ್ಮ ರಾಜ್ಯದಲ್ಲೂ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಕೆಲಸ ಮಾಡುತ್ತಿರುವವರನ್ನೂ ಕರೆಯಬೇಕು ಅನ್ನಿಸಿತು. ನಮ್ಮ ಮಿತ್ರ ಮತ್ತು ಸಿಪಿಐ ಪಕ್ಷದ ಹಿರಿಯ ನಾಯಕ ಸಿದ್ದನಗೌಡ ಪಾಟೀಲರು ಸಂತೋಷ್ ಎಚ್.ಎಂ ಅವರ ಹೆಸರನ್ನು ಸೂಚಿಸಿದರು. ಹಾಗೆಯೇ ನಮ್ಮ ಇನ್ನೊಬ್ಬ ಮಿತ್ರ ಹಾಗೂ ಬಿಎಸ್‌ಪಿ ನಾಯಕ ಮಹೇಶ್ ಅವರು ಹರಿರಾಮ್ ಅವರನ್ನು ಸೂಚಿಸಿದರು. ಸರೋವರ ಬೆಂಕಿಕೆರೆ ಅವರ ಹೆಸರನ್ನು ಸೂಚಿಸಿದ್ದು ನಮ್ಮ ಅಂಕಣಕಾರ ಡಾ. ವಾಸು.

ಇತ್ತೀಚೆಗೆ ಖಾಸಗಿ ವಲಯದಲ್ಲೂ ಮೀಸಲಾತಿಯನ್ನು ಕೋರಿ ಬಿವಿಎಸ್ ದೊಡ್ಡ ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು. ಆಗ ಪೊಲೀಸರು ಆ ವಿದ್ಯಾರ್ಥಿ ಸಮೂಹದ ಮೇಲೆ ಲಾಠಿಚಾರ್ಜ್ ಮಾಡಿದರಲ್ಲದೆ ಅವರಲ್ಲಿ ಹಲವಾರು ಜನರನ್ನು ಬಂಧಿಸಿದ್ದರು. ಆಗ ಯುವ ವಕೀಲ ಅನಂತ್ ನಾಯಕ್ ಅವರೆಲ್ಲರಿಗೆ ಜಾಮೀನು ಕೊಡಿಸಿ ಬಂಧನಮುಕ್ತರನ್ನಾಗಿಸಿದ್ದರಿಂದ ಅವರನ್ನೂ ಆಹ್ವಾನಿಸಿದೆವು.

ಈ ಯುವಜನತೆ ಚರ್ಚಿಸಲಿರುವ 'ಆಜಾದಿ' ಎಂಬ ವಿಷಯ ಕುರಿತು ಪ್ರಾಸ್ತಾವಿಕ ಮಾತನ್ನಾಡಲು ಸೂಕ್ತ ವ್ಯಕ್ತಿ ಯಾರು ಎಂಬ ಜಿಜ್ಞಾಸೆ ಶುರುವಾಯಿತು. ಆಗ ಹಿಂದೊಮ್ಮೆ ಸ್ವತಃ ವಿದ್ಯಾರ್ಥಿ ಸಂಘಟನೆಯಲ್ಲಿದ್ದು ಆನಂತರ ಕ್ರಾಂತಿಕಾರಿ ಹೋರಾಟಕ್ಕೆ ಧುಮುಕಿದ್ದ ನೂರ್ ಶ್ರೀಧರ್ ಸೂಕ್ತ ವ್ಯಕ್ತಿ ಎಂದೆನಿಸಿ ಅವರನ್ನೂ ಕರೆಯಲಾಯಿತು.

ನೀವು ಸೂಕ್ಷ್ಮವಾಗಿ ಗಮನಿಸಿದರೆ, ನಮ್ಮ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವವರಲ್ಲಿ ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಇದ್ದಾರೆ. ಅಷ್ಟೇ ಅಲ್ಲ, ಅವರೆಲ್ಲ 'ಲಾಲ್ ಸಲಾಮ್' ಮತ್ತು 'ಜೈ ಭೀಮ್' ಎಂಬ ಎರಡೂ ಘೋಷಣೆಗಳಲ್ಲಿ ಮತ್ತು ಅವುಗಳ ಹಿಂದಿರುವ ಸಿದ್ಧಾಂತದಲ್ಲಿ ಅಪಾರ ನಂಬಿಕೆ ಇಟ್ಟಿರುವವರು. ಅದಕ್ಕೆಲ್ಲ ಸರಿಹೊಂದುವಂತೆ ಕನ್ಹಯ್ಯ ಜೈಲಿನಲ್ಲಿ ಗಮನಿಸಿದ ಎರಡು ಕಟೋರಿಗಳ ಬಣ್ಣಗಳಾದ ನೀಲಿ ಮತ್ತು ಕೆಂಪು ಈ ಬಾರಿಯ ಆಹ್ವಾನ ಪತ್ರಿಕೆಯ ಪ್ರಮುಖ ಬಣ್ಣಗಳಾಗಿವೆ. ಯಾಕೆಂದರೆ ಕನ್ಹಯ್ಯ ಸರಿಯಾಗಿಯೇ ಗುರುತಿಸಿರುವಂತೆ ಎಡಪಂಥೀಯ ಮತ್ತು ಅಂಬೇಡ್ಕರ್ ಚಿಂತನೆಗಳು ಜೊತೆಗೂಡಿದರೆ ಮಾತ್ರ ನಮ್ಮ ದೇಶದಲ್ಲಿ ಬದಲಾವಣೆ ಸಾಧ್ಯ. ಆ ನಿಟ್ಟಿನಲ್ಲಿ ನಮ್ಮ ಕಾರ್ಯಕ್ರಮವೂ ಕೆಂಪು ಮತ್ತು ನೀಲಿ ಬಣಗಳನ್ನು ಒಂದುಗೂಡಿಸುವ ಒಂದು ಹೆಜ್ಜೆ ಎಂದು ನಮ್ಮ ತಂಡ ನಂಬಿದೆ.

* * *

"ಈ ವರ್ಷ ನಾಟಕ ಇರ್ಲವ್ವಾ" ಎಂದು ಸೂಚಿಸಿದವರು ಬಿ.ಚಂದ್ರೇಗೌಡ. ಅಷ್ಟೇ ಅಲ್ಲ "ನಮ್ಮ ಸಾಸ್ವೇಹಳ್ಳಿ ಸತೀಶ 'ಮೈಥಿಲಿ' ಎಂಬ ನಾಟಕವನ್ನು ನಿರ್ದೇಶಿಸಿದ್ದಾನೆ. ಸುಪ್ರಿಯಾ ಎಂಬ ನಟಿ ಅದರಲ್ಲಿ ತುಂಬಾ ಚೆನ್ನಾಗಿ ನಟಿಸಿದ್ದಾಳೆ. ಸೀತೆ ಕುರಿತಾದ ಈ ನಾಟಕ ನೋಡಿದ ನನ್ನ ತಂಗಿ ಜಾನಕಿ 'ಚಂದ್ರಣ್ಣ, ಇನ್ನು ಮುಂದೆ ಆ ರಾಮನ್ನ ಪೂಜಿಸಲ್ಲ' ಎಂದಳು. ಅದನ್ನೇ ಆಡಿಸಿದರೆ ಈ ಸಂದರ್ಭದಲ್ಲಿ ಸರಿಯಾಗಿರುತ್ತೆ" ಎಂದರು. ಸರಿ ಎಂದು ಸಾಸ್ವೇಹಳ್ಳಿ ಸತೀಶರಿಗೆ ಫೋನ್ ಮಾಡಿ ಈ ವರ್ಷ ನೀವು ನಾಟಕವನ್ನು ಪ್ರದರ್ಶಿಸಿರಿ ಎಂದು ಕೋರಿದೆ.

ಹೀಗೆ ಎಲ್ಲೋ ಚಿಕ್ಕದಾಗಿ ನಡೆಯಬೇಕಿದ್ದ ಈ ಕಾರ್ಯಕ್ರಮ ಈಗ ದೊಡ್ಡದಾಗಿ ರೂಪುಗೊಂಡಿತು. ಆಗ ಇನ್ನೊಂದು ಸಮಸ್ಯೆ ಎದುರಾಯಿತು. ಇಂತಹ ಕಾರ್ಯಕ್ರಮಕ್ಕೆ ಸಾಹಿತ್ಯ ಪರಿಷತ್ತಿನ ಸಭಾಂಗಣ ಸಾಲದು ಎಂದು ದೊಡ್ಡ ಜಾಗಕ್ಕೆ ಹುಡುಕಲಾರಂಭಿಸಿದೆವು. ಆದರೆ ಯಾವುದೂ ಖಾಲಿ ಇರಲಿಲ್ಲ. ಕಲಾಕ್ಷೇತ್ರ, ಎಡಿಎ, ಅಂಬೇಡ್ಕರ್ ಭವನ, ಟೌನ್‌ಹಾಲ್ ಎಲ್ಲವೂ ಬುಕ್ ಆಗಿದ್ದವು. ಇನ್ನು ಸಂಸದ ಮೆಟ್ಟಿಲುಗಳ ಮೇಲೆ ಬೇಸಿಗೆಯ ಈ ದಿನಗಳಲ್ಲಿ ಹತ್ತು ನಿಮಿಷ ಕೂರುವುದೇ ನರಕಯಾತನೆ. ಆಗ ಪೆಡೆಸ್ಟ್ರಿಯನ್ ಪಿಕ್ಚರ್ಸ್‌ನ ದೀಪು ಮುಂದೆ ಬಂದು ತನ್ನ ಮಿತ್ರ ಪ್ರದೀಪ್ ಅವರ ಮೂಲಕ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿರುವ ಕ್ಸೇವಿಯರ್ ಹಾಲ್ ಬುಕ್ ಮಾಡಿಸಿಕೊಟ್ಟ. ಇನ್ನು ನಮ್ಮ ಪ್ರದ್ಯುಮ್ನ ಆಲನಹಳ್ಳಿ ಎಲ್ಲರಿಗೂ ಏರ್ ಟಿಕೆಟ್ ವ್ಯವಸ್ಥೆ ಮಾಡಿಸಿಕೊಟ್ಟ. ಹೀಗೆ ಬಹಳಷ್ಟು ಜನ ವಿವಿಧ ರೀತಿಯಲ್ಲಿ ನೆರವಾಗಿದ್ದರಿಂದ ಕೆಲವೇ ದಿನಗಳಲ್ಲಿ ಇಂತಹ ಒಂದು ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಧ್ಯವಾಯಿತು.

ಇನ್ನು ಈ ವರ್ಷ ಬಿಡುಗಡೆ ಆಗುತ್ತಿರುವ ಪುಸ್ತಕಗಳ ಬಗ್ಗೆ ಒಂದೆರಡು ಮಾತು ಹೇಳಬೇಕು. ಲಂಕೇಶ್ ಎಂಬ ಖನಿಜ ಇನ್ನೂ ಕನ್ನಡಿಗರಿಗೆ ಪುಸ್ತಕಗಳನ್ನು ಕೊಡುತ್ತಲೇ ಇದೆ. 'ಬಿಟ್ಟು ಹೋದ ಪುಟಗಳು - ಸಂಗ್ರಹ ಮೂರು' ಅದಕ್ಕೆ ಸಾಕ್ಷಿ. ಹೋದವರ್ಷ ತಮಿಳು ಲೇಖಕ ಪೆರುಮಾಳ್ ಮುರುಗನ್ ಅವರ 'ಅರ್ಧನಾರೀಶ್ವರ' ಕಾದಂಬರಿ ವಿರುದ್ಧ ಚೆಡ್ಡಿಗಳು ಮಸಲತ್ತು ಮಾಡಿದ್ದರು. ಆಗ ಆ ಕಾದಂಬರಿಯನ್ನು ಕನ್ನಡದಲ್ಲಿ ತರಬೇಕೆಂದು ನನಗೆ ಆಸೆ ಆಗಿತ್ತು. ಆದರೆ ಅದರ ಹಕ್ಕುಗಳು ಯಾರ ಬಳಿ ಇವೆ, ಪೆರುಮಾಳ್ ಅವರನ್ನು ಸಂಪರ್ಕಿಸುವುದು ಹೇಗೆ ಎಂದು ಗೊತ್ತಾಗದೆ ಸುಮ್ಮನಾಗಿದ್ದೆ. ಆದರೆ ಇತ್ತೀಚೆಗೆ ಕನ್ನಡಪ್ರಭದ ಸಂಪಾದಕ ಸುಗತ ಶ್ರೀನಿವಾಸರಾಜು ಅವರ ಮೂಲಕ ವಿನುತಾ ಮಲ್ಯ ಎಂಬ ಯುವತಿಯ ಪರಿಚಯವಾಯಿತು. ಆಕೆ ಇಂಗ್ಲಿಷ್ ಸಾಹಿತ್ಯ ವಲಯದಲ್ಲಿ ಇರುವುದರಿಂದ ಜಗತ್ತಿನಾದ್ಯಂತ ಆಕೆಗೆ ಸಂಪರ್ಕಗಳಿವೆ. ವಿನುತಾ ಮೂಲಕ 'ಅರ್ಧನಾರೀಶ್ವರ' ಪುಸ್ತಕದ ಇಂಗ್ಲಿಷ್ ಅವತರಣಿಕೆಯನ್ನು ಪ್ರಕಟಿಸಿದ್ದ ಕಣ್ಣನ್ ಅವರ ಸಂಪರ್ಕ ಸಿಕ್ಕಿತು. ಆದರೆ ತಮಿಳಿನಿಂದ ಅದನ್ನು ಕನ್ನಡಕ್ಕೆ ಅನುವಾದಿಸುವವರು ಯಾರು? ಆಗ ಕಣ್ಣನ್ ಮತ್ತು ತಮಿಳು ಲೇಖಕ ಪಾವಣ್ಣನ್ ಎಂಬುವವರು ನಲ್ಲತಂಬಿ ಅವರ ಹೆಸರನ್ನು ಸೂಚಿಸಿದರು. ಛಾಯಾಗ್ರಾಹಕರಾದ ನಲ್ಲತಂಬಿ ಎರಡು ವರ್ಷಗಳ ಹಿಂದೆ ನಮ್ಮ ಆಫೀಸಿಗೆ ಬಂದು ಅಪ್ಪನ ನೀಲು ಕವನಗಳನ್ನು ತಮಿಳಿಗೆ ಅನುವಾದಿಸಿ ಪ್ರಕಟಿಸಲು ಅನುಮತಿ ಕೋರಿದ್ದರು. ಆನಂತರ ಸುಮಾರು ನೂರು ನೀಲು ಪದ್ಯಗಳನ್ನು ಅನುವಾದಿಸಿ ಅವುಗಳೊಂದಿಗೆ ತಾವು ಸೆರೆಹಿಡಿದಿದ್ದ ಫೋಟೋಗಳನ್ನು ಹೊಂದಿಸಿ ತುಂಬಾ ಅಂದವಾದ ಪುಸ್ತಕವನ್ನು ಪ್ರಕಟಿಸಿ ನನಗೆ ಹಲವು ಪ್ರತಿಗಳನ್ನು ನೀಡಿದ್ದರು. ಅವರು ಜನವರಿ ತಿಂಗಳಲ್ಲಿ ಮತ್ತೆ ಬಂದಾಗ 'ಅರ್ಧನಾರೀಶ್ವರ' ಕಾದಂಬರಿಯನ್ನು ಅನುವಾದಿಸಿ ಕೊಡಲು ಕೇಳಿದೆ. ಸಮಯ ಕಡಿಮೆ ಇದ್ದಿದ್ದರಿಂದ ಅದು ಮಾರ್ಚ್ ಬರುವ ಮುನ್ನ ಸಿದ್ಧವಾಗುವ ಬಗ್ಗೆ ನನಗೆ ಅನುಮಾನಗಳು ಇದ್ದವು. ಆದರೆ ನಲ್ಲತಂಬಿ ತುಂಬ ಶಿಸ್ತಿನ ವ್ಯಕ್ತಿ. ಅವರು ಹೇಳಿದ್ದ ಸಮಯಕ್ಕೆ ಅನುವಾದ ಮಾಡಿಕೊಟ್ಟರು. ಜೊತೆಗೆ ಅವರು ಈ ಹಿಂದೆ ಕನ್ನಡಕ್ಕೆ ಅನುವಾದಿಸಿದ್ದ ಹತ್ತು ತಮಿಳು ಕತೆಗಳನ್ನೂ ಕೊಟ್ಟರು. ಹೀಗೆ 'ಅರ್ಧನಾರೀಶ್ವರ' ಮತ್ತು 'ಹತ್ತು ತಮಿಳು ಕತೆಗಳು' ಎಂಬ ಎರಡು ಪುಸ್ತಕಗಳು ಸಿದ್ಧವಾದವು.

ತಮ್ಮ ಜೀವನಪರ್ಯಂತ ಮಾನವ ಹಕ್ಕುಗಳಿಗಾಗಿ ಹೋರಾಡಿರುವ ಹಿರಿಯ ಚೇತನ ನಗರಿ ಬಾಬಯ್ಯ ಅವರು ಬಹಳ ಹಿಂದೆ ಬರೆದಿದ್ದ ಜೈಲಿನ ಅನುಭವದ ಪುಸ್ತಕ ಈಗ ಎಲ್ಲೂ ಲಭ್ಯವಿಲ್ಲ. ಹಿಂದೊಮ್ಮೆ ಅದರ ಜೆರಾಕ್ಸ್ ಕಾಪಿ ಓದಿದಾಗ ಅದನ್ನು ಮರು ಮುದ್ರಿಸಬೇಕು ಎಂದುಕೊಂಡಿದ್ದೆ. ಈ ವರ್ಷ ಅದು ಸಾಧ್ಯವಾಗಿದೆ. ಅಪ್ಪನ ಮಿತ್ರರೂ ಆಗಿದ್ದ ಮಾತೃಹೃದಯದ ಬಾಬಯ್ಯನವರಿಗೆ ಧನ್ಯವಾದಗಳನ್ನು ಈ ಪುಸ್ತಕದ ಮರುಮುದ್ರಣದ ಮೂಲಕ ನಮ್ಮ ತಂಡ ಸೂಚಿಸುತ್ತಿದೆ.

ನಮ್ಮ ಲಂಕೇಶ್, ಗೈಡ್ ಮತ್ತು ಜಾಬ್‌ನ್ಯೂಸ್ ಪತ್ರಿಕೆಗಳನ್ನು ಹೊರತರುವಲ್ಲಿ ನಮ್ಮೆಲ್ಲರಿಗಿಂತ ಹೆಚ್ಚು ಶ್ರಮ ಹಾಕುವ ಗಿರೀಶ್ ತಾಳಿಕಟ್ಟೆ ತಾವು ಬರೆದಿರುವ ಹಲವಾರು ಸಣ್ಣ ಕತೆಗಳನ್ನು ಸಂಕೋಚದಿಂದಲೇ ನನ್ನ ಕೈಗಿಟ್ಟರು. ಗಿರೀಶ್ ಬರೆದಿರುವ ಕತೆಗಳು ನನಗೆ ತುಂಬಾ ಇಷ್ಟವಾಗಿದ್ದರಿಂದ ಅದನ್ನು 'ಕಾಡುವ ಕತೆಗಳು' ಎಂದು ಪ್ರಕಟಿಸಲು ನಿರ್ಧರಿಸಿದೆ. ಟಿಪ್ಪು ಸುಲ್ತಾನನ ಸುತ್ತ ಹೋದ ವರ್ಷ ಗಲಾಟೆಯಾದಾಗ ನಾವು ಒಂದು ವಿಶೇಷ ಸಂಚಿಕೆಯನ್ನು ಪ್ರಕಟಿಸಿದ್ದೆವು. ಅದರಲ್ಲಿದ್ದ ಮತ್ತು ಇತರೆಡೆ ಪ್ರಕಟಗೊಂಡಿದ್ದ ಲೇಖನಗಳನ್ನೆಲ್ಲ ಸಂಗ್ರಹಿಸಿದ ಕುಮಾರ್ ಬುರಡಿಕಟ್ಟಿ 'ಹುಲಿಯ ಜಾಡು ಹಿಡಿದು' ಎಂಬ ಪುಸ್ತಕವನ್ನು ರೂಪಿಸಿದ. ಹಲವಾರು ಕೆಲಸಗಳನ್ನು ಹೊತ್ತು ಊರೂರು ತಿರುಗುವ ನೂರ್ ಶ್ರೀಧರ್ ಅವರನ್ನು ಒಂದು ಕಡೆ ಕೂರಿಸಿ 'ನನ್ನನುಭವದ ಸೂಫಿ' ಎಂಬ ಪುಸ್ತಕವನ್ನು ಸಿದ್ಧಪಡಿಸುವುದೇ ಒಂದು ಸಮಸ್ಯೆ ಆಯಿತು. ಈ ಬಾರಿ ಅದನ್ನು ಕೈಬಿಡಬೇಕೇನೋ ಅನ್ನಿಸಲಾರಂಭಿಸಿದಾಗ ಅವರು ಅದನ್ನು ರೆಡಿ ಮಾಡಿಕೊಟ್ಟರು.

ಈಗ ರೋಹಿತ್ ವೇಮುಲ ದುರಂತ ಮತ್ತು ಜೆಎನ್‌ಯು ಪ್ರತಿರೋಧದ ಸುತ್ತ ಚರ್ಚೆ ನಡೆಯುತ್ತಿದೆಯಲ್ಲದೆ ನೂರಾರು ಜನ ಅವುಗಳ ಸುತ್ತ ಅದ್ಭುತವಾದ ಮತ್ತು ಚಿಂತನೆಗೆ ಹಚ್ಚುವ ಲೇಖನಗಳನ್ನು ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ. ಅವನ್ನೆಲ್ಲ ಒಟ್ಟುಗೂಡಿಸಿದರೆ ಸಂದರ್ಭೋಚಿತವಾಗಿರುತ್ತದೆ ಎಂಬ ಐಡಿಯಾ ಕೊಟ್ಟವರು ನೂರ್ ಶ್ರೀಧರ್. ಆಗ ಲೇಖನಗಳನ್ನು ಆಯ್ಕೆ ಮಾಡಿ, ಅವುಗಳನ್ನು ಅನುವಾದಿಸಿ ಸಿದ್ಧ ಮಾಡುವ ಜವಾಬ್ದಾರಿಯನ್ನು ಹೊತ್ತದ್ದು ಹರ್ಷಕುಮಾರ್ ಕುಗ್ವೆ. ಆತನೆ ಹಲವು ಲೇಖನಗಳನ್ನು ಅನುವಾದಿಸಿದನಲ್ಲದೆ, ತನ್ನ ಹಲವಾರು ಮಿತ್ರರಿಗೂ ಕೊಟ್ಟು ಅವರೆಲ್ಲ ಆದಷ್ಟು ಬೇಗ ಅನುವಾದಿಸಿ ಕೊಡುವಂತೆ ನೋಡಿಕೊಂಡ. ಈ ಯುವ ತಂಡದ ಚಾಕಚಕ್ಯತೆ ಎಂತಹದಾಗಿತ್ತೆಂದರೆ ಕನ್ಹಯ್ಯ ಜೈಲಿನಿಂದ ಬಿಡುಗಡೆಗೊಂಡ ನಂತರ ಜೆಎನ್‌ಯು ಆವರಣದಲ್ಲಿ ತನ್ನ ಅಮೋಘ ಭಾಷಣವನ್ನು ಮುಗಿಸಿದ್ದು ರಾತ್ರಿ ಹನ್ನೊಂದುವರೆಗೆ. ಆದರೂ ಚೇತನಾ ತೀರ್ಥಹಳ್ಳಿ ಎಂಬ ಯುವ ಬರಹಗಾರ್ತಿ ಹಿಂದಿಯಲ್ಲಿದ್ದ ಆತನ ಇಡೀ ಭಾಷಣವನ್ನು ಮಾರನೆ ಬೆಳಗ್ಗೆ ಹನ್ನೊಂದು ಗಂಟೆಯೊಳಗೆ ಅನುವಾದಿಸಿ ಹರ್ಷನಿಗೆ ಕಳುಹಿಸಿದ್ದಳು. ಕೆಲಸದ ಒತ್ತಡದ ನಡುವೆ ಈ ಪುಸ್ತಕವನ್ನು ಹೊರತರಲು ಸಹಕರಿಸಿದ ಎಲ್ಲರಿಗೂ ಮುನ್ನುಡಿಯಲ್ಲಿ ಧನ್ಯವಾದಗಳನ್ನು ಹೇಳಲು ಮರೆತಿದ್ದರಿಂದ ಇಲ್ಲಿ ಅದನ್ನು ಹೇಳಲಿಚ್ಛಿಸುತ್ತೇನೆ. ಥ್ಯಾಂಕ್ಯು ಆಲ್!

ಇನ್ನೇನು ಹೇಳಲಿ? ಇಷ್ಟೇ: ಮಾರ್ಚ್ 12ರಂದು ಬೆಂಗಳೂರಿನಲ್ಲಿ ಒಂದು ಬಹುಮುಖ್ಯವಾದ ಮತ್ತು ಅದ್ಭುತವಾದ ಕಾರ್ಯಕ್ರಮ ನಡೆಯಲಿದೆ. ಅಂದು ನೀಲಿ ಬಾನಿನಲ್ಲಿ ಕೆಂಪು ಸೂರ್ಯ ಪ್ರಜ್ವಲಿಸಲಿದ್ದಾನೆ. ಪ್ರೀತಿಯಿಂದ ಆಹ್ವಾನಿಸುತ್ತಿದ್ದೇನೆ, ಬನ್ನಿ... ■

> ಕಣ್ಣಿಗೆ ಕಾಣಿಸದಷ್ಟು ಚಿಕ್ಕವನಾಗಿದ್ದ ನಾನು ಬೆಳೆದು ಅವ್ವನನ್ನು ಆಶೆಯಿಂದ ನೋಡುತ್ತಿದ್ದುದು ಅವಳ ಸೆರಗಲ್ಲಿ ಮಲಗಲು, ಅಂಗಾಂಗಗಳನ್ನು ಹಿಡಿದು ಎಳೆದಾಡಲು, ಆಕೆ ಇದ್ದಲ್ಲೇ ಇದ್ದು ಅವಳು ಹಾಲು ಕರೆಯುವುದು, ಹೆಪ್ಪು ಹಾಕುವುದು, ಆಕಳು ಮೇಯಿಸುವುದು, ಗದ್ದೆಯಲ್ಲಿ ಗೊಬ್ಬರ ಚೆಲ್ಲುವುದು, ಕೂರಿಗೆಯೊಂದಿಗೆ ಸಾಗಿ ಬಿತ್ತುವುದು, ಕಳೆ ಕೀಳುವುದು- ಇತ್ಯಾದಿಯನ್ನು ಸೋಜಿಗದಿಂದ ನೋಡುವುದಕ್ಕೆ.
>
> - ಪಿ. ಲಂಕೇಶ್

ಹೆಣ್ಣು ಮಕ್ಕಳ ನೆನೆದು...


ಇದೇ ತಿಂಗಳ ಮೂರನೇ ತಾರೀಖಿನಿಂದ ಹತ್ತು ದಿನ ಚೈನಾ ದೇಶದ ರಾಜಧಾನಿ ಬೀಜಿಂಗ್‌ನಲ್ಲಿ ನಲವತ್ತು ಸಾವಿರ ಹೆಣ್ಣುಮಕ್ಕಳು ಸೇರಿ ತಮ್ಮ ಸ್ಥಾನಮಾನದ ಬಗ್ಗೆ ಚರ್ಚಿಸಿದರು... ಅದನ್ನು ನೆನೆದು ಮಾಡಿದ ಒಂದು ಪುಟ್ಟ ಟಿಪ್ಪಣಿ.

ಗಂಡಿಗೆ ಹೆಣ್ಣು ಒಂದು ನಿಗೂಢ. ನಾನು ಗಂಡಸೆಂದುಕೊಂಡು ನನಗನ್ನಿಸಿದ್ದನ್ನು ಹೇಳುತ್ತಿದ್ದೇನೆ. ಕ್ಷಮಿಸಿ. ನನಗೆ ಅನ್ನಿಸಿದ್ದನ್ನು ನನ್ನೆಲ್ಲ ಕುತೂಹಲ, ಸಣ್ಣತನ, ತಮಾಷೆ ಮತ್ತು ವ್ಯಾಮೋಹದಿಂದ ಹೇಳಿಬಿಡುವುದು ಮೇಲು. ಅದು ಪ್ರಾಮಾಣಿಕ. ಆಮೇಲೆ ಬೇರೆಯವರಿಗೆ ಏನೆನ್ನಿಸುತ್ತದೆ, ಖುದ್ದು ಹೆಣ್ಣಿಗೇ ಏನೆನ್ನಿಸುತ್ತದೆ ಎಂದು ನೋಡಬಹುದು. ನಾನು ಮೊದಲು ನೋಡಿದ ಹೆಣ್ಣು ನನ್ನ ಅವ್ವ ಎಂದು ಕಾಣುತ್ತದೆ. ನಾನು ಐದನೆ ಮತ್ತು ಕೊನೇ ಮಗುವಾದ್ದರಿಂದ ನನ್ನವ್ವ ನಾನು ಚಿಕ್ಕವನಿದ್ದಾಗಲೇ ತಾರುಣ್ಯವನ್ನು ತೊರೆದ ಹೆಂಗಸಾಗಿದ್ದಳು. ಬೇರೆಯವರು ಆಮೇಲೆ ಹೇಳಿದ್ದರ ಪ್ರಕಾರ ನಾನು ಕಣ್ಣಿಗೆ ಕಾಣಿಸದಷ್ಟು ಸಣ್ಣಕಿದ್ದೆನಂತೆ; ನನ್ನನ್ನು ಹಡೆದ ದಿನದಿಂದಲೇ ಅವ್ವ ರೋಗ ಸೋಸತೊಡಗಿದಳಂತೆ. ನನ್ನ ಎದೆ ಮೇಲೆ ಹುಣ್ಣು, ಅವ್ವನಿಗೆ ಕಾಯಿಲೆ, ಹೀಗಾಗಿ ನಾನು ಅವ್ವನ ಎದೆಹಾಲು ಕುಡಿದದ್ದು ಆರು ತಿಂಗಳು ಮಾತ್ರವಂತೆ. ಇದು ಕೂಡ ಬೇರೆಯವರು ಹೇಳಿದ್ದು. ಕಣ್ಣಿಗೆ ಕಾಣಿಸದಷ್ಟು ಚಿಕ್ಕವನಾಗಿದ್ದ ನಾನು ಬೆಳೆದು ಅವ್ವನನ್ನು ಆಶೆಯಿಂದ ನೋಡುತ್ತಿದ್ದುದು ಅವಳ ಸೆರಗಲ್ಲಿ ಮಲಗಲು, ಅಂಗಾಂಗಗಳನ್ನು ಹಿಡಿದು ಎಳೆದಾಡಲು, ಆಕೆ ಇದ್ದಲ್ಲೇ ಇದ್ದು ಅವಳು ಹಾಲು ಕರೆಯುವುದು, ಹೆಪ್ಪು ಹಾಕುವುದು, ಆಕಳು ಮೇಯಿಸುವುದು, ಗದ್ದೆಯಲ್ಲಿ ಗೊಬ್ಬರ ಚೆಲ್ಲುವುದು, ಕೂರಿಗೆಯೊಂದಿಗೆ ಸಾಗಿ ಬಿತ್ತುವುದು, ಕಳೆ ಕೀಳುವುದು-ಇತ್ಯಾದಿಯನ್ನು ಸೋಜಿಗದಿಂದ ನೋಡುವುದಕ್ಕೆ. ಜಗಳ ಆಡುತ್ತಿದ್ದಳು. ಹಣ ಗಳಿಸುತ್ತಿದ್ದಳು.

ಅವ್ವ ಎನ್ನುವುದು ಎಷ್ಟು ಮುಖ್ಯ ಎಂಬುದು ಅವ್ವನನ್ನು ಕೂಸಾಗಿದ್ದಾಗಲೇ ಕಳೆದುಕೊಂಡವರಿಗೆ ಗೊತ್ತಿರುವುದಿಲ್ಲ. ಅವ್ವ ತನ್ನ ಹೆಣ್ಣು ಮಕ್ಕಳನ್ನು ಬೆಳೆಸುವುದು, ಗಂಡುಮಕ್ಕಳನ್ನು ರೂಪಿಸುವುದು, ಸವತಿಯರನ್ನು ದ್ವೇಷಿಸುವುದು, ನೆರೆಮನೆಯವರನ್ನು ಕುತೂಹಲದಿಂದ ನೋಡುವುದು, ಅವ್ವ ತನ್ನ ಪ್ರತಿಸ್ಪರ್ಧಿಗಳನ್ನು ನೋಡುತ್ತಿದ್ದಾಗಲೇ ಇಲ್ಲೇನೋ ನಡೆಯುತ್ತಿದೆ ಎಂದು ಅನುಮಾನವಾಗುತ್ತದೆ; ಮನುಷ್ಯನ ಪ್ರಯತ್ನವನ್ನು ಮೀರಿದ್ದು ಏನೋ ಇದೆ ಎಂದು ಅನ್ನಿಸುತ್ತದೆ. ಅವ್ವ ದೂರವಾದಂತೆಲ್ಲ ಹೆಣ್ಣುಗಳ ಲೋಕ ಎದುರಾಗುತ್ತದೆ. ನಾವೆಲ್ಲ ಇರುವುದು ಒಂದು ಸಂಪ್ರದಾಯದಲ್ಲಿ, ಅಪ್ಪ ಯಜಮಾನ, ಅವ್ವ ಯಜಮಾನಿ. ನಾನು ಚಿಕ್ಕವನಾಗಿದ್ದಾಗ ಅಪ್ಪ ಅವ್ವನಿಗಿಂತ ಮೇಲೆ, ಉತ್ತಮ ಎಂಬ ಭಾವನೆ ಬರುತ್ತಿರಲಿಲ್ಲ; ಅವ್ವ ಖಾಸಗಿಯಾಗಿ ಅಪ್ಪನನ್ನು ಕರೆಯುತ್ತಿದ್ದುದು ಏಕವಚನದಲ್ಲಿ; ಅವನೂ ಅವಳನ್ನು ಹಾಗೇ ಕರೆಯುತ್ತಿದ್ದ. ಅವರು ಎಂದೂ ತೀರಾ ವೈಯಕ್ತಿಕವಾಗಿ ಮಾತಾಡುತ್ತಿರಲಿಲ್ಲ; ಮಾತಾಡಿದರೂ ಅದು ಮಳೆ, ಬೆಳೆ, ಬತ್ತದ ರೇಟು, ಎಣ್ಣೆಯ ಬರ, ಬರಲಿರುವ ಸಂತೆಯಲ್ಲಿ ಕೊಂಡು ತರಬೇಕಾದ ಸಾಮಾನು ಇತ್ಯಾದಿಯ ಬಗ್ಗೆ ಮಾತ್ರ. ಅವ್ವನಿಗೆ ಆಳದಲ್ಲಿ ಇದ್ದಿರಬಹುದಾದ ಬೇರೆ ಗಂಡಸರನ್ನು ಕುರಿತ ಕನಸು ಅಥವಾ ಅಪ್ಪನಿಗೆ ಇದ್ದ ಸಂಬಂಧಗಳು-ಇವು ನನಗೆ ಗೊತ್ತಾಗುತ್ತಿದ್ದುದು ಅವರ ಜಗಳದ ಮಧ್ಯೆ ಮಾತ್ರ. ಇಲ್ಲಿ ಕೂಡ ಜಗಳ ಏಕಮುಖವಾದದ್ದು-ಅವ್ವ ಬಯ್ಯುವುದು, ಅಪ್ಪ ತಲೆತಪ್ಪಿಸಿಕೊಂಡು ಹೋಗುವುದು.

ಅವ್ವ ದೂರವಾಗಿ ನನ್ನ ಲೈಂಗಿಕ ಆಶೆಗಳು ಹುಟ್ಟಿನಿಂದಲೇ ಎಂಬಂತೆ ಉಲ್ಬಣಗೊಂಡು ಎಲ್ಲವೂ ದ್ವಂದ್ವಮಯವಾದವು. ನಮ್ಮ ಲೈಂಗಿಕ ಆಶೆ ಮತ್ತು ಕನಸು ಶುರುವಾದದ್ದು ಯಾವಾಗಿನಿಂದ ಎಂದು ಯಾರಾದರೂ ಹೇಳಬಲ್ಲರೆ? ಹೇಳಿದರೂ ಆ ತಾರೀಖು ಮತ್ತು ಸಂದರ್ಭ ಬೊಗಳೆಯಾಗುತ್ತದೆ. ಯಾಕೆಂದರೆ ಹುಡುಗ ಅಥವಾ ಹುಡುಗಿಯಲ್ಲಿ ಲೈಂಗಿಕತೆ ಹುಟ್ಟಿದ್ದು, ರಾತ್ರಿ ದಿನವಾಗಿದ್ದು, ಮೊಗ್ಗು ಹೂವಾಗಿ ಸುಗಂಧ ಪಡೆದದ್ದು-ಎಲ್ಲವೂ ಅಸ್ಪಷ್ಟ ಮತ್ತು ಇನ್ನೊಂದು ರೀತಿಯಲ್ಲಿ ಸ್ಪಷ್ಟ. ನಮ್ಮ ಹಸಿವೆ ಮತ್ತು ನಿದ್ರೆಯಂತೆಯೇ ಲೈಂಗಿಕತೆ. ಆದರೆ ಈ ಲೈಂಗಿಕತೆ ಕಾಮವೆನ್ನಿಸಿದ್ದು ಮತ್ತು ಈ ಕಾಮ ಪ್ರೇಮವಾಗಿದ್ದು ಯಾವಾಗ ಎಂದು ಯಾರೂ ಹೇಳಲಾಗುವುದಿಲ್ಲ. ಲೈಂಗಿಕತೆಯ ಅಗಾಧ ಒತ್ತಡವನ್ನು, ನೋವನ್ನು, ಖುಷಿ ಮತ್ತು ದುರಂತವನ್ನು ಅನುಭವಿಸಿದವನಿಗೆ ಮಾತ್ರ ಹೆಣ್ಣೆಂದರೆ ಏನೆಂದು, ಪ್ರೇಮವೆಂದರೆ ಏನೆಂದು ಗೊತ್ತಿರುತ್ತದೆ. ಈ ಬಗ್ಗೆ ನಾನು ಬಹಳ ಯೋಚಿಸಿದ್ದೇನೆ. ಆದ್ದರಿಂದ ಸ್ವಲ್ಪ ವಿವರವಾಗಿಯೇ ಹೇಳುತ್ತೇನೆ. ಲೈಂಗಿಕತೆಯನ್ನು ಬದುಕಿನ ಒಂದು ಭಾಗವನ್ನಾಗಿ ಮಾತ್ರ ನೋಡಿ ಎಲ್ಲರಂತೆ ಮದುವೆಯಾಗಿ ಕುಟುಂಬ ಕಟ್ಟಿಕೊಂಡು ಅನಾಯಾಸವಾಗಿ ವಾನಪ್ರಸ್ಥಾಶ್ರಮವನ್ನು ತಲುಪಿ ಸಂನ್ಯಾಸಿಯಾಗಬಲ್ಲವನು ಅವನಿಗೆ ನಿರಾಶೆಯಾಗುತ್ತದೆ. ಆತ ಆಕೆಯ ಬಗ್ಗೆ ಯೋಚಿಸಿದ್ದೆಲ್ಲ ನೆಲಕ್ಕೆ ಇಳಿಯುತ್ತದೆ.

ಹೆಣ್ಣು ಅಪ್ಸರೆ, ದೇವತೆ, ಪ್ರಕೃತಿ ಎಂದು ಹೇಳುವ ಗಂಡಸೇ 'ಹೆಂಗಸು ಗಂಡಸಿನ ತಲೆನೋವು' ಎಂದು ಹೇಳಿದರೆ ಅದು ಉದ್ಧಟತನ. ಆದರೆ ಅದು ನಿಜ. ಆಕೆ ಆತನ ತಲೆನೋವಾಗಿರುವುದೇ ಆಕೆ ಅನಿವಾರ್ಯವಾದ್ದರಿಂದ. ಆತನಿಂದ ಭಿನ್ನವಾದ್ದರಿಂದ, ಆತನ ಕ್ರಿಯಾಶೀಲತೆ ಮತ್ತು ಜಡತ್ವ ಎಲ್ಲಕ್ಕೆ ಕಾರಣವಾಗಿರುವುದರಿಂದ, ಹೆಣ್ಣನ್ನು ಆತ ಗುಲಾಮಳನ್ನಾಗಿ ಮಾಡಿಕೊಳ್ಳಲು ಯತ್ನಿಸುತ್ತಾನೆ; ಜಗತ್ತಿನ ಅತ್ಯಂತ ಪ್ರಾಚೀನ ವೃತ್ತಿಯಾದ ವೇಶ್ಯಾವೃತ್ತಿಯನ್ನು ಸಮರ್ಥಿಸಿ ಮಾತಾಡಲು ಯತ್ನಿಸುತ್ತಾನೆ; ತನಗೆ ಬೇಕಾದಂತೆ, ಬೇಕಾದ ರೀತಿಯಲ್ಲಿ ಬಳಸಿಕೊಳ್ಳಲು ಯತ್ನಿಸುತ್ತಾನೆ. ಇದನ್ನು ನಾನು ಸುಲಭವಾಗಿ ಖಂಡಿಸುವುದಿಲ್ಲ, ತನ್ನಿಂದ ಯಾವುದು ಸಾಧ್ಯವಾಗುತ್ತದೋ, ಸಂಪ್ರದಾಯ ಯಾವುದನ್ನು ಮಾಡಲು ಬಿಡುತ್ತದೋ ಅದನ್ನು ಆತ ಮಾಡೇ ಮಾಡುತ್ತಾನೆ. ಹಾಗೆ ಮಾಡುವುದರಿಂದ ತನ್ನ ಕಷ್ಟಗಳನ್ನೇ ಹೆಚ್ಚಿಸಿಕೊಳ್ಳುತ್ತಾನೆ. ಆಕೆ ತಿಳಿಯದವಳು, ಮುಗ್ಧೆ, ದುರ್ಬಲೆ ಇತ್ಯಾದಿಯಾಗಿ ಯೋಚಿಸುತ್ತಲೇ ಅದಕ್ಕೆ ತಕ್ಕಂತೆ ತನ್ನ ವರ್ತನೆಗಳನ್ನು



ಹೊಂದಿಸಿಕೊಳ್ಳುತ್ತಾನೆ. ಇದನ್ನು ಸರಳವಾಗಿ ಹೇಳೋಣ. ಹೆಣ್ಣನ್ನು ಕೀಳು ಎಂದು ಆತ ಹೇಳುವುದರಿಂದ ಹೆಣ್ಣನ್ನು ಹಾಗೆ ನಂಬಿಸುವುದು ದೊಡ್ಡ ದುರಂತಕ್ಕೆ ಎಡೆಮಾಡಿಕೊಡುತ್ತದೆ. ಸ್ವಾತಂತ್ರ್ಯ, ಜಾಣತನ, ಪ್ರತಿಭೆ ಇಲ್ಲದ ಹೆಣ್ಣುಮಗಳು ಆತನ ನೆಮ್ಮದಿ ಕೆಡಿಸುತ್ತಾ ಆತನ ವ್ಯಕ್ತಿತ್ವ ನಾಶಮಾಡುತ್ತಾಳೆ. ಅದಕ್ಕಿಂತ ದುರಂತಮಯವಾದದ್ದು ತನ್ನ ಕಷ್ಟಗಳಿಂದಾಗಿಯೇ ಆಕೆ ಪ್ರತಿಭಟನೆಯ ವ್ಯಕ್ತಿಯಾಗಿ ಬೆಳೆದು ಯಾವ ಸಂಬಂಧವನ್ನೂ ಒಪ್ಪದಂಥ ವ್ಯಕ್ತಿಯಾಗುತ್ತಾಳೆ. 'ನನ್ನಂತೆಯೇ ನೀನು' ಎಂದು ಆಕೆ ಆತನಂತೆಯೇ ಕೇಡಿಯಾಗಿ ವರ್ತಿಸತೊಡಗುತ್ತಾಳೆ. ಹೆಂಗಸು ಮತ್ತು ಗಂಡಸು ಒಂದೇ ಆದಾಗ ನನ್ನಂಥವರಿಗೆ ವ್ಯಥೆಯಾಗುತ್ತದೆ. ಜಗತ್ತು ವೈವಿಧ್ಯಮಯ ಎಂದು ಹೇಳುವುದಕ್ಕೆ ಮೊದಲ ಕಾರಣವೇ ಹೆಂಗಸರು ಮತ್ತು ಗಂಡಸರು. ಜೀವದ ಮೂಲವಾದ ಆಕೆ ನನ್ನನ್ನು ನೋಡಿದರೂ ಸಂತಾನಕ್ಕೆ ಸಂಬಂಧಿಸಿ ಯೋಚಿಸುವುದು ಮತ್ತು ಅವನು ಎಲ್ಲದರ ಉದ್ದೇಶದ ಬಗ್ಗೆ ಯೋಚಿಸುವುದು ಎಲ್ಲ ವೈವಿಧ್ಯತೆಯ ಮೂಲ. ಇಲ್ಲಿ ನಾನು ಅರ್ಧನಾರೀಶ್ವರ ಕಲ್ಪನೆಯನ್ನು ಚರ್ಚಿಸುವುದಿಲ್ಲ, ಗಂಡಿನಲ್ಲಿನ ಹೆಣ್ಣು ಮತ್ತು ಹೆಣ್ಣಿನಲ್ಲಿನ ಗಂಡು ಕುರಿತು ಬರೆಯುವುದಿಲ್ಲ, ಹೆಣ್ಣು ದೊಡ್ಡ ತಾಪತ್ರಯಗಳ ಮೂಲವಾದ್ದರಿಂದಲೇ ಜೀವದ ಮೂಲ ಎಂದು ಮಾತ್ರ ಹೇಳುತ್ತೇನೆ.

ಬರೀ ವ್ಯವಹಾರ ಮಟ್ಟದಲ್ಲಿ ಕೂಡ ಹೆಣ್ಣು ಒಂದು ಘಟನೆಗೆ ಸ್ಪಂದಿಸುವ ರೀತಿಗೂ ಗಂಡಸು ಸ್ಪಂದಿಸುವ ರೀತಿಗೂ ವ್ಯತ್ಯಾಸವಿದೆ. ಗಂಡಸು ಆಡಳಿತ ನಡೆಸುವುದಕ್ಕೆ, ಹೆಂಗಸು ಸ್ಟೆನೋ ಆಗಿರುವುದಕ್ಕೆ ಸರಿ ಎಂದು ಕೆಲವರು ತಿಳಿದಿದ್ದರು. ಅದು ಮೂರ್ಖ ತಿಳಿವಳಿಕೆ ಎಂದು ಎಲ್ಲರಿಗೆ ಅರ್ಥವಾಯಿತು. ಹೆಂಗಸು ಗಂಡಸಿನಂತೆ ಬೇಸಾಯ ಮಾಡಬಲ್ಲಳು, ಸೌದೆ ಕಡಿಯಬಲ್ಲಳು, ಗಾಡಿ ಹೊಡೆಯಬಲ್ಲಳು; ಹಾಗೆಯೇ ಆಕೆ ರಂಗೋಲೆ ಹಾಕಬಲ್ಲಳು, ಮಗುವಿಗೆ ಮೊಲೆ ಉಣ್ಣಿಸಬಲ್ಲಳು, ತಂದೆ ಕೊಡಲಾರದ ಮಡಿಲಿನ ಬಿಸಿ ಕೊಡಬಲ್ಲಳು, ಅವು ಹೆಂಗಸಿನ ಕೆಲಸವೆಂದು ನಾನು ಹೇಳುತ್ತಿಲ್ಲ, ವೈಶಿಷ್ಟ್ಯದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಹೆಂಗಸು ಮತ್ತು ಗಂಡಸು ನೋಡುವ ರೀತಿ ಭಿನ್ನ; ಹಾಗೆಯೇ ಮಾತಾಡುವ ರೀತಿ ಕೂಡ. ಆಲಿಸುವ, ನೆನಪುಗಳನ್ನು ಸಂಗ್ರಹಿಸುವ ರೀತಿ ಕೂಡ. ಹೆಂಗಸರಿಗೆ ಖುಷಿಯಾಗಲೆಂದು ಗೊಡ್ಡು ಸಮಾನತೆಯ ಬಗ್ಗೆ ಮಾತಾಡುವವ ಖಳ; ವೈಶಿಷ್ಟ್ಯದ ಬಗ್ಗೆ ಮಾತಾಡುವವನು ಸೂಕ್ಷ್ಮಜ್ಞ, ಈತ ತಾಯಿಯನ್ನು ಬಲ್ಲವನು, ಹೆಂಡತಿ ಮತ್ತು ಪ್ರೇಯಸಿಯನ್ನು ಬಲ್ಲವನು. ಎಲ್ಲ ಮನುಷ್ಯರ ಆಳದ ಸಮಾನ ನೋವುಗ... ಆತಂಕಗಳನ್ನು ಬಲ್ಲವನು. ಇದೆಲ್ಲ ತುಂಬ ಸಂಕೀ...

ಇವೆಲ್ಲ ಸಂಕೀರ್ಣತೆ ತಿಳಿಯಲಾರದವರು ನಾನಾ... ಯಲ್ಲಿ ಹೆಣ್ಣನ್ನು ತುಳಿದುಹಾಕುವುದನ್ನು, ... ನಾನಾರೀತಿಯಲ್ಲಿ ಹೋರಾಡುವುದನ್ನು ನೋಡುತ್ತಿ... ಮನುಷ್ಯ ಪ್ರಜ್ಞಾಪೂರ್ವಕವಾಗಿ ಕಟ್ಟಿಕೊಂಡಿರುವ ಸ... ಮತ್ತು ನಾಗರಿಕತೆ ಯಾವ ರೀತಿಯಲ್ಲಿ ಇವೆಯ... ಇಲ್ಲಿ ಹಣ, ಸ್ಥಾನ, ಖ್ಯಾತಿ, ಪ್ರಚಾರ ಮುಖ್ಯವಾಗಿಬಿ... 'ತಿಳಿವಳಿಕೆಯೇ ಪತನ' ಎಂದು ಕ್ರಿಶ್ಚಿಯನ್ ಪು... ಹೇಳುತ್ತದೆ; ವಿಜ್ಞಾನ ಇದನ್ನು ಹೆಣ್ಣುಗಂಡ... ಸಂಬಂಧದವರೆಗೆ ತಂದುಬಿಟ್ಟಿದೆ. ಇಡೀ ಜಗತ್ತಿನಲ್ಲಿ ... ವರ್ಷಕ್ಕೆ ಕೋಟ್ಯಂತರ ಕುಟುಂಬಗಳು ಗರ್ಭದಲ್ಲೇ ... ಹೆಣ್ಣೆಂದು ಕಂಡುಕೊಂಡು ಗರ್ಭಪಾತದ ಮೂ... ಕೊಂದುಹಾಕುತ್ತಿದ್ದಾರೆ. ಹೆಣ್ಣಿಗೆ ಶಿಕ್ಷಣ ಇಲ್ಲ, ಅಲ್ಜೀರಿಯ... ಹೆಣ್ಣುಮಕ್ಕಳಿಗೆ ಒಲಂಪಿಕ್ಸ್ ಸುವರ್ಣ ತಂದ ಹು... ಬೋಲ್‌ಮರ್ಕಾ ಅವಹೇಳನ ಅನುಭವಿಸಿ ನಿವೃತ್ತಳಾಗಿ... ಮದುವೆ, ಕ್ರೀಡೆ, ವೃತ್ತಿ, ಕಲೆ-ಎಲ್ಲ ಕಡೆ ಹೆಂಗ... ನಿರ್ಲಕ್ಷ್ಯ, ಅವಮಾನ ಕಾದಿರುತ್ತದೆ.

ಇದನ್ನೆಲ್ಲ ನಾನು ಹೇಳುತ್ತಿರುವುದು ವ... ಬೀಜಿಂಗ್‌ನಲ್ಲಿ ಮುಕ್ತಾಯಗೊಂಡ ಹೆಣ್ಣುಮ... ಸಮ್ಮೇಳನವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬೀಜಿ... ಚೈನಾದ ರಾಜಧಾನಿ; ಚೈನಾದ ಮಾವೋ ತನ್ನ ದೇ... ಹೆಣ್ಣುಮಕ್ಕಳಿಗೆ ಘನತೆ, ಸಮಾನತೆ ತಂದುಕೊಟ್ಟವ... ಅಂಥವನ ನಾಡಿನಲ್ಲಿ ನಡೆದ ಹೆಣ್ಣುಮಕ್ಕಳ ಸಮ್ಮೇಳನ... ಹೆಂಗಸರಿಗೆ ಅವಮಾನಕರ ರೀತಿಯ... ನಡೆದುಕೊಳ್ಳಲಾಯಿತು. ಗಂಡುಗೋವಿಗಳು ನಡೆ... ಯಾವುದೇ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಇ... ಸೌಕರ್ಯಗಳಲ್ಲಿ ಕೆಲವು ಕೂಡ ಅಲ್ಲಿರಲಿಲ್ಲ, ಕೆಲಸವಿ... ಹೆಂಗಸರು ಚೀರಾಡುತ್ತಿದ್ದಾರೆ ಎಂಬ ರೀತಿಯಲ್ಲಿ ಚ... ಸರ್ಕಾರ ವರ್ತಿಸಿತು. ಇದನ್ನು ನೋಡಿದ ಹೆಣ್ಣುಮಗಳೊ... ತಮಾಷೆಯಾಗಿ ಕೇಳಿದ್ದಾಳೆ- "ಸರಿಯಮ್ಮಾ, ವಿಶ್ವ... ಮೊನ್ನೆಯ ಮಹಿಳಾ ಸಮ್ಮೇಳನವನ್ನು ಎಲ್ಲಿ ನಡೆಸಿ... ಚೆನ್ನಾಗಿ ನಡೆಯುತ್ತಿತ್ತು? ವರದಕ್ಷಿಣೆಗಾಗಿ ಹೆಂಗಸ... ಸುಡುವ ಭಾರತದಲ್ಲಿಯೆ? ಮುಖ ತೋರಿಸಿದರೆ ಆ... ಹಾಕುವ ಸೌದಿ ಅರೇಬಿಯಾದಲ್ಲಿಯೆ? ಜೀತದಾಳುಗ... ದುಡಿಸುವ ಆಫ್ರಿಕಾದಲ್ಲಿಯೆ? ಮಂಚಕ್ಕೆ ಕಟ್ಟಿ ಸಾಯಿಸ... ಪಾಕಿಸ್ತಾನದಲ್ಲಿಯೆ? ಗರ್ಭಪಾತ ಕೂಡ ಮಾಡಿಸಲಾ... ಪೋಲೆಂಡ್‌ನಲ್ಲಿಯೆ? ನೌಕರಿ ಕೊಡಲು ಬಾಸ್ ಜೊ... ಮಲಗುವುದನ್ನು ಶರತ್ತಾಗಿ ಸೇರಿಸುವ ರಷ್ಯಾದಲ್ಲಿ... ಕ್ಷಣಾರ್ಧದಲ್ಲಿ ಅತ್ಯಾಚಾರ ಮಾಡಿ ಮಾಯವಾಗಿಸ... ಬ್ರೆಜಿಲ್‌ನಲ್ಲಿಯೆ? ಎಲ್ಲಿ? ಅಮೆರಿಕದಲ್ಲಿ? ಅಲ್ಲೇನಾ... ಗೊತ್ತ? ಅಮೆರಿಕದ ಅಧ್ಯಕ್ಷರ ಹೆಂಡತಿ ಹಿಲೇರಿ ಕ್ಲಿಂಟ... ದೊಡ್ಡ ನಾಯಕಿಯಂತೆ ಬೀಜಿಂಗ್ ಸಮ್ಮೇಳನದಲ್ಲಿ ಹೆಂಗ... ಪರವಾಗಿ ಚೀರಾಡಿದಳು. ಆದರೆ ಅಮೆರಿಕದಲ್ಲಿ ಮಹಿಳೆಯ... ಹಕ್ಕುಗಳನ್ನು ಕಾನೂನಾಗಿಸುವ ಸೂಚನೆ ಕಳೆದ ಹದಿನಾ... ವರ್ಷದಿಂದ ಮೂಲೆಗುಂಪಾಗಿ ಗೆಜ್ಜಲು ಹಿಡಿದಿ... ಇವತ್ತಿಗೂ ಅಮೆರಿಕದಲ್ಲಿ ಮಹಿಳೆಯರ ಹಕ್ಕಿನ ಬ... ಮಾತಾಡುವವಳು ತಾತ್ಸಾರಕ್ಕೊಳಗಾಗುತ್ತಾಳೆ, ಬಜಾ... ಅನ್ನಿಸಿಕೊಳ್ಳುತ್ತಾಳೆ."

ಜಗತ್ತಿನ ಎಲ್ಲ ಕಡೆಯೂ ಹೆಂಗಸೆಂದರೆ ಕೀಳೆಂ... ಹೇಳುತ್ತಲೇ ಹೆಂಗಸಿನ ಸವಾಲು ಮತ್ತು ಹೆಂಗ... ಅನಿವಾರ್ಯತೆಯನ್ನು ಗೌಣವಾಗಿಸುವ ಜನರಿದ್ದಾರೆ. ಇ... ಸ್ವಲ್ಪಮಟ್ಟಿಗೆ ಹೆಂಗಸರೂ ಕಾರಣವಾಗಿದ್ದಾರೆ. ಎರಡೂ... ಸಾವಿರ ವರ್ಷದ ಹಿಂದೆ ಗ್ರೀಸ್‌ನಲ್ಲಿ ಕ್ಲೈಟೆಮ್ನೆಸ್ಟ್ರಾ ಮ... ಕಲ್ಪನೆಗೆ ನಿಲುಕದ ಭೂತಕಾಲದಲ್ಲಿ ಭಾರತದಲ್ಲಿ ದ್ರೌಪ... ತೋರಿದ ದಿಟ್ಟತನದಲ್ಲಿ ಸ್ವಲ್ಪವಿದ್ದರೂ ಗಂಡಸರನ್ನು ದಾರಿ... ತರಬಹುದು. ಹೆಂಗಸರು ಗಂಡಸರಂತೆ... ಹಾಗಾಗದಿರುವುದೇ ಇಲ್ಲಿಯ ವಿಶೇಷ. ಈ ಭಿನ್ನತೆ... ಅಸ್ತ್ರವನ್ನು ಬಳಸುವುದನ್ನು ಹೆಂಗಸರು ತಿಳಿದೊಡನೆ ಗಂಡ... ತಾನು ಪೂಜಿಸುವ ಹೆಂಗಸರು ಜೀವಂತ ವ್ಯಕ್ತಿಗಳೆಂ... ತಿಳಿಯುತ್ತಾನೆ; ತಾನು ಕೀಳೆಂದು ಬಗೆದವಳು ನಿಜಕ... ಶ್ರೇಷ್ಠಳು ಎಂದು ಕಾಣುತ್ತಾನೆ. ಒಂದು ಉದಾಹರ... ಕೊಟ್ಟು ಸುಮ್ಮನಾಗುತ್ತೇನೆ. ತನ್ನ ಘನತೆ ಮತ್ತು ನೆಮ್ಮದಿ... ಹೊಂದಲಾರದ ಮದುವೆಯೇ ಬೇಡವೆಂದು ಸುಮ್ಮನಿರು... ಹೆಣ್ಣುಮಗಳ ಮೌನ ಅತ್ಯಂತ ಸ್ಫೋಟಕ; ಅದು ದಿ... ಪ್ರತಿಭಟನೆಯಾಗಬಲ್ಲದು. ಗಂಡಸರು ಸ್ವಾರ್ಥದಿಂದ ಮ... ಅಂಜಿಕೆಯಿಂದ ಒಬ್ಬಂಟಿಯಾಗಿರುತ್ತಾರೆ; ಅದನ್ನು ಯಾರು... ಪ್ರಶ್ನಿಸುವುದಿಲ್ಲ, ಹೆಂಗಸರು ಸಕಾರಣವಾಗಿ ಮೌನವಾಗಿದ್ದ... ಅದು ದೊಡ್ಡ ಚಳವಳಿಯಂತಿರುತ್ತದೆ.

ಅವ್ವ ರೇಗುತ್ತಿದ್ದುದು ನೆನಪಾಗುತ್ತಿದೆ......

ಸೆಪ್ಟೆಂಬರ್ 27, 199

(ಟೀಕೆ ಟಿಪ್ಪಣಿ-ಸಂಗ್ರಹ 3ರಿಂ

ನೆಮ್ಮದಿಯಾಗಿ ಅಥವಾ ನರಕವಾಗಿ!

ನಾವೆಲ್ಲ ನೋಡುವ ಮನುಷ್ಯ ನಾವೆಲ್ಲ ಒಳಗಡೆ ಆಗಿರುವ ಮನುಷ್ಯರಲ್ಲ. ಇದು ನಿಮಗೆ ಅರ್ಥವಾಗಬೇಕಾದರೆ ನೀವು ನಿಮ್ಮ ಬದುಕಿನ ಬಗ್ಗೆ ಭಾವಿಸುವುದನ್ನು ಕಲಿಯಬೇಕು. ನಾನು ಯಾವಾಗಲೂ ಅಸೂಯೆಯಿಂದ ಹೇಳುತ್ತಿರುತ್ತೇನೆ: ಮನಮೆಚ್ಚಿದ ಮಡದಿ, ಇಬ್ಬರು ಮಕ್ಕಳು, ಒಂದು ಕಾರು, ಅಚ್ಚುಕಟ್ಟಾದ ಮನೆ, ಗದ್ದಲವಿಲ್ಲದೆ ನಿವೃತ್ತನಾಗಿ ನಿರುಮ್ಮಳವಾಗಿರುವ ಗಂಡ ಮತ್ತು ಬಾಳಸಂಗಾತಿ. ಇದು ಹೀಗೇ ಇದ್ದಿದ್ದರೆ ಇಲ್ಲಿ ಎಲ್ಲವೂ ನೆಮ್ಮದಿಯಾಗಿ ಅಥವಾ ನರಕವಾಗಿ ಇರುತ್ತಿತ್ತು.

ಇದನ್ನು ಬೇಕೆಂತಲೇ ಹೇಳುತ್ತಿದ್ದೇನೆ. ಯಾವುದೂ ಆದರ್ಶಮಯವಾಗಿ ಇರುವುದಿಲ್ಲ, ರೋಗ, ಮುಪ್ಪು, ಸಾವುಗಳಿವೆ; ಬದುಕಿನಲ್ಲಿ ನನಸಾಗಿಸಬೇಕಾಗಿದ್ದ ಕನಸುಗಳು, ಎಂದೋ ಪಡೆದೂ ನಾನರಿಯದ ಯಶಸ್ಸು ಮತ್ತು ಮೂಲಭೂತ ಹತಾಶೆ ಇವೆ. ಪ್ರತಿಸ್ಪರ್ಧಿಗಳು ಮತ್ತು ಸ್ನೇಹಿತರು, ಪರಿಚಿತರು ಮತ್ತು ನಾನರಿಯದ ಅಸಂಖ್ಯಾತರು ಇದ್ದಾರೆ. ಇಲ್ಲಿ ಅಹಂನ ಪ್ರಶ್ನೆಯಾಗಿರುವಂತೆಯೇ ಶೂನ್ಯತೆಯ ಪ್ರಶ್ನೆ ಕೂಡ ಬರುತ್ತದೆ. ತರುಣನ ಕಾಮ, ಹರಯದ ಪ್ರೇಮ, ಮುದುಕರ ವ್ಯಾಮೋಹ-ಇವೆಲ್ಲವುಗಳ ಜೊತೆಗೆ ನಿರಾಶೆ, ರೋಗ ಮತ್ತು ಸಾವು ಕಾಡುತ್ತಿವೆ. ಇದು ಕಲಾವಿದನ ಲೋಕ. ಒಥೆಲೋ ಮತ್ತು ಡಸ್ಡಿಮೋನಾರಂತೆಯೇ ಸೀಸರ್ ಮತ್ತು ಕ್ಲಿಯೋಪಾತ್ರಾ ಎದುರಿಸಬೇಕಾದ ಲೋಕ. ಹೀಗೆ ನೋಡುತ್ತಾ ಹೋದಾಗಲೇ ಹೆಂಗಸಿನ ಬಗ್ಗೆ ನಾಲ್ಕು ಮಾತು ಹೇಳಬೇಕೆನ್ನಿಸುತ್ತದೆ. ಅವ್ವನಾಗಿದ್ದ ಹೆಂಗಸು, ತಂಗಿಯಾಗಿದ್ದ ಹೆಂಗಸು ನಮ್ಮೆದುರು ನಿಂತು ನಾವು ಕಳೆಯುವ ದಿನಗಳಿಗೆ ಸಂಕೇತವಾಗಿ ಅವಳು ಹೇಗಿದ್ದಾಳೆ, ಅವಳಿಗೆ ಸೌಖ್ಯ ಅನ್ನುವುದಿದೆಯೇ ಎಂದು ನೋಡಬೇಕಾಗುತ್ತದೆ. ಒಬ್ಬಳು ನನ್ನೆದುರು ನಿಂತು 'ನಿನ್ನಂತೆಯೇ ನಾನು ಮನುಷ್ಯಜೀವಿ. ರಕ್ತಮಾಂಸವುಳ್ಳವಳು. ಆತ್ಮಗೌರವ ಉಳ್ಳವಳು. ನೀನು ಯೋಚಿಸಿದಂತೆಯೇ ಯೋಚಿಸಬಲ್ಲೆ, ನೀನು ಮಾಡಿದ್ದನ್ನೆಲ್ಲ ನಾನು ಮಾಡಬಲ್ಲೆ' ಎಂದು ಹೇಳುತ್ತಾಳೆ. "ನೀನು ಎಲ್ಲದರಲ್ಲೂ ನನ್ನಂತೆಯೇ ಇದ್ದರೆ ನಿನಗಾಗಿ ನಾನು ಯಾಕೆ ಕಾತರಿಸಬೇಕು?" ಎಂದು ಕೇಳಬಯಸಿ ನಾನು ಕೇಳುವುದಿಲ್ಲ; ಆ ಪ್ರಶ್ನೆ ನಿರರ್ಥಕವಾದದ್ದು, ಆದರೆ ಅದರಲ್ಲಿ ನನ್ನ ನಿರಾಶೆ ಇದೆ. "ನಾನು ನಿನಗೆ ಸಮ, ನಾನು ನಿನ್ನೊಂದಿಗೆ ಸಮಾನತೆಗಾಗಿ ಹೋರಾಡುತ್ತಿದ್ದೇನೆ" ಎಂದು ಇನ್ನೊಬ್ಬಳು ಹೇಳುತ್ತಾಳೆ. ಆಕೆ ತನಗಿಂತ ಉತ್ತಮ ಎಂದು ತಿಳಿದಿದ್ದ

ಚಿಲಿದೇಶದ ಪಾಬ್ಲೊ ನೆರೂಡ ವಿಲಕ್ಷಣ ಕವಿಯಾಗಿದ್ದಾನೆ. ಪ್ರೇಮ ಮತ್ತು ಕ್ರಾಂತಿ ಒಂದು ರೀತಿಯ ಡೆಡ್ಲಿ ಕಾಕ್‌ಟೇಲ್. ಅದು ಓದುಗನ ತಲೆಸುತ್ತುವಂತೆ ಮಾಡುತ್ತದೆ. ನೆರೂಡ ರಕ್ತ ಮತ್ತೇರುವ ಹಾಗೆ ಪ್ರೇಮ ಕವನಗಳನ್ನು ಬರೆದ, ಹಾಗೆಯೇ ರಕ್ತ ಕುದಿಯುವ ಹಾಗೆ ಕ್ರಾಂತಿ ಕವನಗಳನ್ನು ಬರೆದ, ಅಂತೆಯೇ ತಣ್ಣಗಿನ, ವ್ಯಥಿತ ಧ್ವನಿಯಲ್ಲಿ ಶೋಷಿತರ ಬದುಕನ್ನು ದಾಖಲಿಸಿದ. ಅವನ 'ದ ಪೀಪಲ್' ಎನ್ನುವ ಕವನ, ಅವನ ಕಾವ್ಯ ಸೃಷ್ಟಿಯ ಅದ್ಭುತ ವಜ್ರವೆಂದೇ ಕರೆಯಲ್ಪಡುತ್ತದೆ. ಅದನ್ನು ಕವಯತ್ರಿ ಜ.ನಾ.ತೇಜಶ್ರೀಯವರು, ಇದೀಗ ಪ್ರಕಟಿಸಿರುವ ನೆರೂಡನ ಕವಿತೆಗಳ ಅನುವಾದದ ಸಂಗ್ರಹ, 'ನನ್ನೊಳಗೆ ನಿನ್ನ ನಡಿಗೆ'ಯಲ್ಲಿ 'ಜನ' ಶೀರ್ಷಿಕೆಯ ಅಡಿ ಸಶಕ್ತವಾಗಿ, ಮೂಲಕ್ಕೆ ಸಮವರ್ತಿಯಾಗಿ, ಅದರ ಭಾವಕೋಶದ ಒಟ್ಟು ಉಸಿರಿನೊಂದಿಗೆ ಅನುವಾದಿಸಿದ್ದಾರೆ. ಇಂಥ ಕವಿತೆ ಎಲ್ಲಾ ಕಾಲಕ್ಕೂ ಸಲ್ಲುವ, ಎಲ್ಲ ಕಾಲದ ಬಡವರ ಒಳಬದುಕನ್ನು ಅನಾವರಣಗೊಳಿಸುವ ಸತ್ಯಶೋಧನೆಯಾಗಿದೆ. ವಿಶೇಷವಾಗಿ ಇಲ್ಲಿ ಅದನ್ನು 'ಪತ್ರಿಕೆ'ಯ ಓದುಗರಿಗಾಗಿ ಕೊಡಲಾಗಿದೆ.

ಜನ

ೆ ಮನುಷ್ಯನ ನೆನಪಿದೆ ನನಗೆ, ಎರಡು ಶತಮಾನಗಳು
ರುಳಿರಬೇಕು ನಾನವನ ನೋಡಿ ಕಡೆಯ ಬಾರಿ;
ದುರೆಯೇರಿ ಹೋದವನಲ್ಲ ಅವನು, ಚಕ್ಕಡಿಗಾಡಿ ಹತ್ತಿದವನೂ ಅಲ್ಲ,
ಲುಗಳೇ ಅವನ ವಾಹನ, ದೂರವನ್ನಳಿಸುವ ಸಾಧನ,
ತ್ತಿ ಹಿಡಿದವನಲ್ಲ ಅವನು ಬೇರಾವ ಆಯುಧ ಹಿಡಿದವನಲ್ಲ
ರುತ್ತದೆ ಬಲೆಯೋ, ಕೊಡಲಿಯೋ, ಸುತ್ತಿಗೆಯೋ
ದ್ದಲಿಯೋ ಅವನ ಹೆಗಲ ಮೇಲೆ;
ೋರಾಡಿದವನಲ್ಲ ಅವನು ಇನ್ನೊಬ್ಬ ಮನುಷ್ಯನ ಜೊತೆ-
ವನ ಗುದ್ದಾಟವೇನಿದ್ದರೂ ನೀರು, ಭೂಮಿಯ ಜೊತೆ,
ವನ ಹೋರಾಟ ಬ್ರೆಡ್ಡಾಗುವಂತೆ ಗೋಧಿಯ ಜೊತೆ,
ರಮುಟ್ಟಾಗಿ ಒದಗುವಂತೆ ದೈತ್ಯ ಮರಗಳ ಜೊತೆ,
ೋಡೆಗಳಾಗುವಂತೆ ಮರಳಿನ ಜೊತೆ,
ಾಗಿಲಿಗೆಡೆಗೊಡುವಂತೆ ಗೋಡೆಯ ಜೊತೆ,
ಸದುಂಬಿದ ಫಲ ಕೊಡುವಂತೆ ಕಡಲಿನ ಜೊತೆ.

ನಗವನು ಗೊತ್ತು, ಕಾಡುತ್ತಾನೆ ಇಲ್ಲದೆ ಹೊತ್ತುಗೊತ್ತು

ವಾರಿಬಂಡಿ ಚೂರುಚೂರಾಗಿ ಚಕ್ಕೆಯೆದ್ದಿದೆ,
ುದ್ಧವು ಗೋಡೆ ಹೆಬ್ಬಾಗಿಲುಗಳ ಕುಟ್ಟಿ ಪುಡಿಮಾಡಿದೆ,
ೂರಿಗೂರೇ ಅಂಗೈಹಿಡಿಯಷ್ಟು ಬೂದಿಯಾಗಿದೆ,
ೊಟ್ಟು ಬಟ್ಟೆಯೆಲ್ಲ ನಡುನಡುಗಿ ಮಣ್ಣುಗೂಡಿದೆ,
ದರೆ, ನನ್ನೊಳಗೆ ಅವನ ಜೀವ ಹಾಗೇ ಉಳಿದಿದೆ,
ದುಕಿದ್ದಾನೆ ಅವನು ಮರಳ ಕಣದಲ್ಲಿ,
ವನೊಬ್ಬನ ಹೊರತು ಉಳಿದೆಲ್ಲವೂ
ರಂಜೀವಿ ಎನ್ನಿಸಿತ್ತು ಮೊದಲು ಇಲ್ಲಿ,

ಷ್ಟು ಪೀಳಿಗೆಗಳು ಅದೆಷ್ಟು ಕುಟುಂಬಗಳು ಆಗಿಹೋದವೋ,
ಮ್ಮೆ ಅವನು ನನ್ನ ತಂದೆಯಾಗಿದ್ದ ಮತ್ತೊಮ್ಮೆ ಬಂಧು,
ನ್ನೊಮ್ಮೆ ಎಂದೂ ಮನೆಗೆ ಮರಳಿ ಬಾರದವನು,
ಂಗಿಬಿಟ್ಟಿರಬೇಕು ನೀರೋ ಭೂಮಿಯೋ ಅವನನ್ನ
ುಂತ್ರವೋ ಮರವೋ ಕೊಂದಿರಬೇಕು ಅವನ,
ಥವಾ ಆಗಿರಬಹುದು ಅವನು ಈ ಶವಪೆಟ್ಟಿಗೆಯ ಹಿಂದೆಹಿಂದೆ
ಡೆಯುತ್ತಿರುವ ನೀರು ಬತ್ತಿದ ಕಣ್ಣುಗಳ ಬಡಗಿ,
ಗಿರಲೂಬಹುದು ಅವನು ಹೆಸರೇ ಇಲ್ಲದ ಮನುಷ್ಯ
ಟ್ಟಿಂದರೆ ಲೋಹಗಳಂತೆ ಮರಗಳಂತೆ, ಅವನದೆ ಅಲ್ಲದ ಹೆಸರು
ೋಡಿರಬೇಕು ಇತರರು ಅವನನ್ನು ಮೇಲಿನಿಂದ ಮಾತ್ರ,
ಮನಿಸದೆ ಇರುವೆಯನ್ನು
ೋಡುವಂತೆ ನಾವು ಹುತ್ತವನ್ನು;
ಶ್ಚಲವಾದವು ಜಡಗೊಂಡು ಅವನ ಕಾಲುಗಳು
ಾಪದವನು ಅವನು ಬಹಳ ದಣಿದವನು,
ದೆಗೂ ನೋಡಲೇ ಇಲ್ಲ ಜನರು ತಮ್ಮ ಕಣ್ಣುಗಳಿಗೆ
ಗ್ಗಿಲ್ಲದ ಸಂಗತಿಯನ್ನು-
ೆ ಹೊತ್ತಿಗಾಗಲೆ ನಡೆಯತೊಡಗಿದ್ದವು
ವನ ಹೆಜ್ಜೆಗಳಲ್ಲಿ ಬೇರೆ ಪಾದಗಳು.

ೆ ಬೇರೆ ಪಾದಗಳೂ ಆಗಿದ್ದವು ಅವನವೇ,
ೆ ಬೇರೆ ಕೈಗಳೂ ಆಗಿದ್ದವು ಅವನವೇ,
ುನುಷ್ಯ ಉಳಿದಿದ್ದ,
ವನ ಕಾಲ ಮುಗಿಯಿತೆನ್ನುವ ಹೊತ್ತಿಗೆ
ುತ್ತೆ ಅವನು ಹೊಸತಾಗಿದ್ದ
ುತ್ತೊಮ್ಮೆ ಅವನು, ನೆಲದ ಅಗೆಯುತ್ತಿದ್ದಾನೆ.
ಂಗಿ ತೊಡದ ಮೈಯಲ್ಲಿ ಬಟ್ಟೆ ಕತ್ತರಿಸುತ್ತಿದ್ದಾನೆ,
ವನು ಅಲ್ಲಿದ್ದ ಮತ್ತು ಇರಲಿಲ್ಲ ಕೂಡ, ಹಾಗೇ ಮೊದಲ ಹಾಗೆ
ವನು ಹೊರಟುಹೋಗಿದ್ದ, ಮತ್ತೆ ಮರಳಿ ಬಂದಿದ್ದ

ಅವನಿಗೆಂದೇ ಸ್ಮಶಾನವಿರಲಿಲ್ಲ, ಗೋರಿಯಿರಲಿಲ್ಲ,
ಬೆವರು ಸುರಿಸಿ ಅವನು ಗಣಿಯಿಂದ ಕತ್ತರಿಸಿ ತೆಗೆದಿದ್ದ
ಹಾಸುಗಲ್ಲಿನ ಮೇಲೆ ಅವನ ಹೆಸರಿರಲಿಲ್ಲ,
ಅವನು ಭೂಮಿಗೆ ಬಂದದ್ದು ಯಾವಾಗ ಅದು ಯಾರಿಗೂ ಗೊತ್ತಿಲ್ಲ
ಅವನು ಯಾವಾಗ ಸತ್ತನೋ ಅದೂ ತಿಳಿದಿಲ್ಲ,
ಸಾಧ್ಯವಾದಾಗಲೆಲ್ಲ ಬಡಮನುಷ್ಯ ಹಿಂತಿರುಗಿ ಬರುತ್ತಾನೆ ಬದುಕಿಗೆ
ಯಾವ ಸುಳುಹನ್ನೂ ಕೊಡದೆ ಹೀಗೆ.

ಅವನು ಸಮತೂಕದ ಮನುಷ್ಯ,
ತನ್ನದೆನ್ನುವ ಆಸ್ತಿಯಿಲ್ಲ ಅವನಿಗೆ, ಹಸುಕರುಗಳಿಲ್ಲ,
ಕುಟುಂಬ ಬಿರುದಾವಳಿಗಳ ಲಾಂಛನವಿಲ್ಲ,
ಇತರರಿಂದ ಬೇರೆಯಾಗಿ ಅವನೆಂದೂ ನಿಲ್ಲಲಿಲ್ಲ,
ಆ ಇತರರೂ ಅವನೇ ಆಗಿದ್ದರು;
ಮೇಲಿಂದ ನೋಡಿದರೆ ಅವನು ಕಾಣುತ್ತಿದ್ದ ಕಳೆಗಟ್ಟವನ ಹಾಗೆ
ಜೇಡಿಮಣ್ಣಿನ ಹಾಗೆ,
ಕಾಣುತ್ತಿದ್ದ ಅವನು ಮಂಕಾಗಿ ತೊಗಲಿನ ಹಾಗೆ,
ಗೋಧಿಕೊಯ್ಲು ಮಾಡುವಾಗ ಅವನ ಬಣ್ಣ ಹಳದಿ
ಗಣಿಯೊಳಗೆ ದುಡಿಯುವಾಗ ಕಡುಗಪ್ಪು ಅವನು,
ಭವ್ಯಕೋಟೆಯ ಕಲ್ಲುಬಣ್ಣದವನು ಅವನು
ಮೀನು ದೋಣಿಯಲ್ಲಿ ಮೀನಿನ ಬಣ್ಣದವನು,
ಹುಲ್ಲುಬಯಲಿನಲ್ಲಿ ಅವನು ಕುದುರೆ ಬಣ್ಣದವನು-
ಅವನ ಮೈಯೊಳಗೆ ಮನೆಮಾಡಿವೆ
ಮಣ್ಣು ಕಡಲು ಇದ್ದಿಲು,
ಬೇರೆ ಮಾಡುವುದು ಹೇಗೆ ಪಂಚಭೂತಗಳಿಂದ ಅವನನ್ನು
ಅವನೇ ಭೂಮಿಯ ಒಕ್ಕಲು



ಅವನು ಇದ್ದೆಡೆಯಲ್ಲೆಲ್ಲ ಚಿಗುರುತ್ತಿತ್ತು
ಮುಟ್ಟಿದ್ದೆಲ್ಲ ಅರಳುತ್ತಿತ್ತು-
ಅವನ ಕೈಯೊಳಗೆ ಚೂರಾಗುತ್ತಿದ್ದ
ಪೆಡಸು ಕಲ್ಲುಗಳು ಸಾಲುನಿಲ್ಲುತ್ತ
ಆಕಾರ ತಳೆಯುತ್ತಿದ್ದವು,
ಒಂದಾದ ಮೇಲೊಂದು ಕಲ್ಲುಗಳು ಕುಳಿತು
ಕಟ್ಟಡದ ರೂಪ ಪಡೆಯುತ್ತಿದ್ದವು;
ತನ್ನ ಕೈಯ್ಯಾರೆ ಬ್ರೆಡ್ಡು ತಯಾರಿಸಿದ ಅವನು
ಟ್ರೈನುಗಳು ಓಡುವಂತೆ ಮಾಡಿದ;
ಅಂತರವನ್ನು ತುಂಬಿಕೊಂಡವು ಪಟ್ಟಣಗಳು,
ಹುಟ್ಟಿಕೊಂಡರು ಇನ್ನಷ್ಟು ಮತ್ತಷ್ಟು ಜನ
ಎಲ್ಲಿಂದಲೋ ಹಾರಿಬಂದವು ಜೇನುಗಳು,
ಸೃಷ್ಟಿಸುವ ಮತ್ತು ಸ್ವತಃ ತಾನೂ ಬೆಳೆಯುವ
ಮನುಷ್ಯನ ದುಡಿಮೆಯಿಂದ
ಬೇಕರಿ-ಪಾರಿವಾಳಗಳ ನಡುವೆ ಅಲೆದಾಡಿತು
ಮಾರುಕಟ್ಟೆಯಲ್ಲಿ ವಸಂತ.

ಆದರೆ, ಮರೆತುಹೋದನು ರೊಟ್ಟಿ ಮಾಡಿದವನು,
ಕಷ್ಟಕೋಟಲೆಗಳನ್ನು ಜಗ್ಗಿಸಿ ಕುಗ್ಗಿಸಿ ಹೊಡೆದು ನುಚ್ಚುನೂರಾಗಿಸಿ
ಹೊಸಹಾದಿಗಳ ತೆರೆದ ಅವನನ್ನು ಮರೆತರು ಜನರು,
ಲೋಕದಲ್ಲಿ ಉಳಿದೆಲ್ಲವೂ ಅಸ್ತಿತ್ವಕ್ಕೆ ಬಂದಾಗ, ಆ ಮನುಷ್ಯ ಬದುಕುಳಿದಿರಲಿಲ್ಲ
ಅಂತಿಮವಾಗಿ ಬಿಟ್ಟುಕೊಟ್ಟು ಅವನು ತನ್ನಸ್ತಿತ್ವವನ್ನು
ಹೊರಟುಹೋದ ಎಲ್ಲಿಗೋ ಅರಸುತ್ತ ಕೆಲಸವನ್ನು,
ಕೊನೆಯಲ್ಲಿ, ನಡೆದ ಅವನು ಸಾವಿನೆಡೆಗೆ

ಉರುಳುತ್ತ ಉರುಳುತ್ತ ನದಿಯೊಳಗಿನ ಕಲ್ಲಿನ ಹಾಗೆ;
ಕರೆದೊಯ್ಯಿತು ಸಾವು ಅವನನ್ನು ಕಣಿವೆ ಕೊರಕಲಿನೊಳಗೆ.

ಗೊತ್ತಿದ್ದ ನನಗವನು, ನೋಡನೋಡುತ್ತ ಕೆಳಕ್ಕಿಳಿದು ಹೋದ
ಕೆಳಗಿಳಿದು ಕೆಳಗಿಳಿದು ಕಡೆಗೆ ಅವನುಳಿಸಿ ಹೋದದ್ದರಲ್ಲಿ ಮಾತ್ರ
ಜೀವಂತವಿರುವಂತೆ ಕೆಳಗಿಳಿದು ಹೋದ-
ಅವನಿಲ್ಲಿ ಬಿಟ್ಟದ್ದು ಅವನಿಗೇ ಗುರುತು ಪರಿಚಯ ಸಿಗದ ಬೀದಿಗಳು,
ಎಂದೂ ಅವನದ್ದಾಗದ ಮನೆಗಳು.

ಮರಳಿ ಬರುತ್ತೇನೆ ನಾನು ಕಾಣಲು ಅವನನ್ನು,
ಕಾಯುತ್ತೇನೆ ಪ್ರತಿದಿನ ಅವನಿಗಾಗಿ

ನೋಡುತ್ತೇನೆ ಗೋರಿಗಳಲ್ಲಿ, ನೋಡುತ್ತೇನೆ ಅವನ ಪುನರುತ್ಥಾನವನ್ನು,

ಗುರುತಿಸುತ್ತೇನೆ ಅವನಿಗೆ ಸಮನಾದವರ ನಡುವೆ ಅವನನ್ನು
ಗೊತ್ತು ನನಗೆ ಹಾಗಾಗಲಾರದೆಂದು,
ಈ ಬಾರಿ ನಮ್ಮನ್ನು ಎಲ್ಲಿಗೂ ಕೊಂಡೊಯ್ಯುವುದಿಲ್ಲ
ಹೀಗೆ ಮುಂದುವರೆಯುವುದರಲ್ಲಿ ಯಾವ ಘನತೆಯೂ ಇಲ್ಲ,



ಆ ಸ್ವರ್ಗವು ಇವನನ್ನು ಒಳಗೊಳ್ಳಬೇಕು
ಕಪ್ಪ, ಕಿರೀಟ ತೊಡಿಸಿ ಪೊರೆಯಬೇಕು.

ಇಷ್ಟೆಲ್ಲವನ್ನು ಮಾಡಿದವರು
ಎಲ್ಲವುದರ ಒಡೆಯರಾಗಲೇಬೇಕು
ಬ್ರೆಡ್ಡನ್ನು ಮಾಡುವವರು ಅದನ್ನು ತಿನ್ನಲೇಬೇಕು.

ಗಣಿಯನ್ನಗೆಯುವವರಿಗೆ ಬೆಳಕಿರಬೇಕು.
ದುಡಿದು ನವೆದವರು ಇಷ್ಟು ಕಾಲ ಸೆರೆಯಲ್ಲಿದ್ದುದು ಸಾಕು!
ಬಳಲಿ ಕಳೆದುಹೋದವರೆ, ಇನ್ನು ಇದೆಲ್ಲ ಸಾಕು!
ಇನ್ನೊಬ್ಬನೇ ಒಬ್ಬನೂ ಒಡೆಯನಲ್ಲದೆ ಮತ್ತೇನೂ ಆಗಕೂಡದು.
ಒಬ್ಬ ಹೆಂಗಸೂ ಕಿರೀಟವಿಲ್ಲದೆ ಇರಕೂಡದು.
ಎಲ್ಲರ ಕೈಯಿಗೂ ಇರಲಿ ಚಿನ್ನದ ಗವಸು.
ಕತ್ತಲಲ್ಲಿರುವವರಿಗೆಲ್ಲ ಬೆಳಕಿನ ಹಣ್ಣು!

ನನಗವನು ಗೊತ್ತಿದ್ದ,
ನನ್ನ ಕಣ್ಣುಗಳು ನನ್ನವೇ ಆಗಿ ಉಳಿದಿದ್ದಾಗ
ನನ್ನ ಗಂಟಲಲ್ಲಿ ಇನ್ನೂ ದನಿಯ ಪಸೆಯಿದ್ದಾಗ,
ನಾನವನ ಹುಡುಕಿದೆ ಗೋರಿಗಳ ನಡುವಿಂದ
ಇನ್ನೂ ಧೂಳು ಮೆತ್ತಿರದ ಅವನ ಕೈಗಳ ಹಿಡಿದು ಹೇಳಿದೆ:
"ಇಲ್ಲಿ ಎಲ್ಲವೂ ಕಳೆದುಹೋಗುತ್ತದೆ, ನೀನು ಮಾತ್ರ ಬದುಕಿರುತ್ತೀಯ.
ನೀನು ಬದುಕಿಗೆ ಬೆಂಕಿಯ ತಿದಿಯೊತ್ತುತ್ತೀಯ.
ನಿನ್ನದೇನಿದೆಯೋ ನೀನದನ್ನು ಮಾಡಿದ್ದೀಯ"


ಹಾಗಾಗಿ ಕಂಗೆಡಬೇಡಿ ಯಾರೂ
ಒಂಟಿಯಾಗಿ ಕಾಣಿಸಿದರೂ ನಾನು ಒಂಟಿಯಲ್ಲ
ಎಲ್ಲರ ದನಿ ನಾನು, ನನ್ನೊಂದಿಗೆ ಯಾರೂ ಕಾಣುವುದಿಲ್ಲ,


ಕೇಳುತ್ತಾರೆ ಕೆಲವರು ಸುಮ್ಮನೆ ಅರಿಯದೆ ಹಾಡಿನ ಹುರುಳನ್ನು
ಆದರೆ, ನನ್ನ ಹಾಡಿನ ವಸ್ತುವಾದವರು, ಅದರ ತಿರುಳ ತಿಳಿದವರು
ಮತ್ತೆಮತ್ತೆ ಹುಟ್ಟುತ್ತಲೇ ಇರುತ್ತಾರೆ
ತುಂಬಿ ತುಳುಕಿಸುತ್ತಾರೆ ಅವರು ಈ ಲೋಕವನ್ನು.





ಕವಿತೆ ಶೀರ್ಷಿಕೆ: 'ದ ಪೀಪಲ್' *Fully Empowered*
ಕೃತಿಯಿಂದ ಅನುವಾದ: *Alastair Reid*
ಕನ್ನಡಕ್ಕೆ: ತೇಜಶ್ರೀ

ಬಾಗಲಕೋಟೆ: ಕುಸಿದ ಕಾಂಗ್ರೆಸ್ಸಿಗರ ಐಲಾಟಗಳು









ಕೂಸು ಹುಟ್ಟೋ ಮುನ್ನ ಕುಲಾವಿ ಹೊಲಿಯೋ ಕಾಂಗ್ರೆಸ್ಸಿಗರ ಐಲಾಟಗಳನ್ನು ಕಂಡ ಬಾಗಲಕೋಟೆಯ ಮಂದಿ ಕಿಸಿಕಿಸಿ ನಗಾಡಲಾರಂಭಿಸಿದ್ದಾರೆ. ಹಾಗೆ ನೋಡಿದರೆ, ಮೊನ್ನೆ ನಡೆದ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಅತಿಹೆಚ್ಚು ಸೀಟುಗಳನ್ನು ಗೆದ್ದಿರೋದು ಬಿಜೆಪಿ; ಆದರೆ ಅಧ್ಯಕ್ಷಗಾದಿ ಹಿಡಿಯುವ ಹರಕತ್ತುಗಳು ಶುರುವಾಗಿರೋದು ಮಾತ್ರ ಕಾಂಗ್ರೆಸ್ಸಿನಲ್ಲಿ! ಜಿಲ್ಲೆಯ ಒಟ್ಟು 36 ಜಿಲ್ಲಾ ಪಂಚಾಯ್ತಿ ಸ್ಥಾನಗಳಲ್ಲಿ ಬಿಜೆಪಿ 18 ಗೆದ್ದರೆ, ಕಾಂಗ್ರೆಸ್ 17 ಸ್ಥಾನ ಜಯಿಸಿಕೊಂಡಿದೆ. ಇನ್ನೊಂದು ಸ್ಥಾನ ರೈತ ಸಂಘದ ಪಾಲಾಗಿದೆ. ಅಧಿಕಾರ ಹಿಡಿಯುವ ಮ್ಯಾಜಿಕ್ ನಂಬರ್ (19) ಮುಟ್ಟಲು ಬಿಜೆಪಿಗೆ 1 ಸ್ಥಾನದ ಕೊರತೆಯಿದ್ದರೆ, ಕಾಂಗ್ರೆಸ್‌ಗೆ ಬರೋಬ್ಬರಿ ಎರಡು ಸ್ಥಾನಗಳು ಬೇಕು. ರೈತ ಸಂಘದ ಮುತ್ತಪ್ಪ ಕುಮಾರ್ ಒಂದೊಮ್ಮೆ ಕಾಂಗ್ರೆಸ್‌ಗೆ ಬೆಂಬಲ ನೀಡಿದರೂ ಆಗ ಕಾಂಗ್ರೆಸ್‌ನ ಬಹುಮತ 18ಕ್ಕೆ ಏರಿಕೆಯಾಗಲಿದೆ. ಅರ್ಥಾತ್ ಬಿಜೆಪಿ ಸ್ಥಾನಗಳಿಗೆ ಸಮವಾಗಲಿದೆ. ಇಂತಹ ಡ್ರಾ ಸಂದರ್ಭಗಳಲ್ಲಿ ಲಾಟರಿ ಮೂಲಕ ಯಾವ ಪಕ್ಷದವರು ಅಧಿಕಾರ ಹಿಡಿಯಬೇಕು ಎನ್ನುವುದನ್ನು ನಿರ್ಧರಿಸಲಾಗುತ್ತೆ. ಅದೆಲ್ಲ ಅದೃಷ್ಟದ ಆಟ. ಆಕಸ್ಮಾತ್ ಅಷ್ಟರೊಳಗೇ ರೈತಸಂಘದ ಮುತ್ತಪ್ಪ ಬಿಜೆಪಿಗೇ ಜೈ ಅಂದುಬಿಟ್ಟರೆ ಕಾಂಗ್ರೆಸ್ ಅಧಿಕಾರದಿಂದ ದೂರವೇ ಉಳಿಯಬೇಕಾಗುತ್ತೆ. ಇಷ್ಟೆಲ್ಲಾ ಲೆಕ್ಕಾಚಾರಗಳು ಇದ್ದಾಗ್ಯೂ ಕಾಂಗ್ರೆಸ್ಸಿಗರು ಆದಾಗಲೇ ಜಿಲ್ಲಾ ಪಂಚಾಯ್ತಿ ಗದ್ದುಗೆ ನಮ್ಮದೇ ಅಂತ ಬೊಂಬಡಾ ಬಜಾಯಿಸಿಕೊಂಡು, ಅಧ್ಯಕ್ಷರು ಯಾರಾಗಬೇಕೆನ್ನುವ ಜಿದ್ದಾಜಿದ್ದಿಗೆ ಬಿದ್ದಿದ್ದಾರೆ.

ಕಾಂಗ್ರೆಸ್ಸಿಗರ ಪ್ರತಾಪ ಎಂಥದ್ದೆಂದರೆ ಬಾಗಲಕೋಟೆ ಜಿಲ್ಲೆಯಲ್ಲಿರುವ ಒಟ್ಟು ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಆರರಲ್ಲಿ ಕೈ ಶಾಸಕರೇ ರಾರಾಜಿಸುತ್ತಿದ್ದಾರೆ. ಹಾಗಿದ್ದೂ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆಯುವಲ್ಲಿ ವಿಫಲರಾಗಿದ್ದಾರೆ. ಇಂಥ ಭರ್ಜರಿ ಮುಖಭಂಗ ಅನುಭವಿಸಿದ್ದರೂ ಈಗ ನಾಚಿಕೆ ಇಲ್ಲದೆ ಅಧ್ಯಕ್ಷಗಾದಿಗಾಗಿ ಸ್ವಪಕ್ಷೀಯರ ಕಾಲೆಳೆದಾಟಕ್ಕೆ ಪಂಚೆ ಏರಿಸಿ ಸಜ್ಜಾಗಿದ್ದಾರೆ. ಅಸಲಿಗೆ ಕಾಂಗ್ರೆಸ್ಸಿಗರ ಇಂತಹ ಒಳರಾಜಕಾರಣವೇ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಮುಗ್ಗರಿಸಲು ಕಾರಣ. ಆಷ್ಟಾದರೂ ಇವರಿಗೆ ಬುದ್ಧಿ ಬಂದಂತೆ ಕಾಣುತ್ತಿಲ್ಲ.

ಅದೇನೇ ಇರಲಿ, ಸದ್ಯಕ್ಕೆ ಅಧ್ಯಕ್ಷಗಾದಿ ತಮ್ಮ ಪಕ್ಷಕ್ಕೇ ಅಂತ ಫಿಕ್ಸ್ ಆಗಿರುವ ಕಾಂಗ್ರೆಸ್‌ನ ರೇಸ್‌ನಲ್ಲಿ ಮುಂಚೂಣಿಯಲ್ಲಿರೋದು ಬಾಗಲಕೋಟೆ ಶಾಸಕ ಹುಲ್ಲಪ್ಪ ಮೇಟಿಯ ಮಗಳು ಬಾಯಕ್ಕ ಮೇಟಿ, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನ ಮಡದಿ ವೀಣಾ ಕಾಶಪ್ಪ, ಮಾಜಿ ಮಂತ್ರಿ ಆರ್.ಬಿ.ತಿಮ್ಮಾಪುರನ ಸೋದರಿ ಕವಿತಾ ಹೆಸರುಗಳು. ಹೊಸದಾಗಿ ತಿದ್ದುಪಡಿಯಾದ ಗ್ರಾಮ ಸ್ವರಾಜ್ ಮಸೂದೆ-2015ರ ಪ್ರಕಾರ ಒಮ್ಮೆ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದರೆ ಐದು ವರ್ಷ ನಿರಾತಂಕ ಅಧಿಕಾರ ನಡೆಸಬಹುದು ಮತ್ತು ಜಿ.ಪಂ ಅಧ್ಯಕ್ಷರಿಗೆ ಸಂಪುಟ ದರ್ಜೆಯ ಸ್ಥಾನಮಾನ ಸಿಗಲಿದೆ ಎನ್ನುವ ಅಂಶಗಳೇ ಇವರನ್ನೆಲ್ಲ ಹೆಚ್ಚು ಕ್ರಿಯಾಶೀಲರನ್ನಾಗಿಸಿರೋದು. ಇದೇ ಆಸೆಗೆ ಬಿದ್ದೇ ಬಾದಾಮಿಯ ಶಾಸಕ ಬಿ.ಬಿ. ಚಿಮ್ಮನಕಟ್ಟಿಯೂ ತನ್ನ ಮಗನನ್ನು ಕಣಕ್ಕಿಳಿಸಿದ್ದು. ಆದರೆ ಮತದಾರ ಮಾತ್ರ ನಿನ್ನಪ್ಪನ ಹಾವಳಿಯೇ ಸಾಕು ಅಂತ ಮಗನನ್ನು ಮನೆಗೆ ಕಳಿಸಿದ್ದಾರೆ.

ಫಲಿತಾಂಶ ಹೊರಬೀಳುವುದಿರಲಿ, ನಾಮಪತ್ರ ಸಲ್ಲಿಸುವುದಕ್ಕೆ ಮೊದಲೇ 'ನನ್ನ ಮಗಳೇ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯಾಗೋದು' ಅಂತ ಹುಲ್ಲಪ್ಪ ಮೇಟಿ ಡಂಗೂರ ಸಾರಿಕೊಂಡು ಓಡಾಡುತ್ತಿದ್ದರು. ಹಾಗೆ ನೋಡಿದರೆ, ಕಳೆದ ಬಾರಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷನಾಗಿ ಮೆರೆದದ್ದು ಇದೇ ಹುಲ್ಲಪ್ಪ ಮೇಟಿಯ ಮೊಮ್ಮಗ ಬಸವಂತಪ್ಪ ಮೇಟಿ. ಅವತ್ತೂ ಸಹ ಅಧಿಕಾರಕ್ಕೇರಲು ಇದೇ ಅತಂತ್ರ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ ಬಿಜೆಪಿ ಸದಸ್ಯರನ್ನೇ ಖರೀದಿಸಿದ ಮೇಟಿ, ಮೊಮ್ಮಗನನ್ನು ಅಧ್ಯಕ್ಷನನ್ನಾಗಿಸಿದ್ದರು. ಆದರೆ ಬಸಂತಪ್ಪ ಮೇಟಿಯ ಗೆಬರಿಕೆ ಕಂಡು ಖುದ್ದು ಜಿಲ್ಲೆಯ ಜನ ಲಬೋಲಬೋ ಅಂತ ಬಾಯಿ ಬಡಿದುಕೊಳ್ಳುವಂತಾಗಿತ್ತು. ಜೂನಿಯರ್ ಮೇಟಿಯ ತಿನ್ನಾಟ ಕಂಡು ಹೌಹಾರಿದ ಸಿಇಓ ನಕುಲ ತಿರುಗಿ ನೋಡದೇ ಓಡಿಹೋದ. ಅವನ ಅವಧಿಯಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಅಧಿಕಾರಿಯಾಗಿ ಬರಲೂ ಯಾರೊಬ್ಬರೂ ಸುತಾರಾಂ ಒಪ್ಪಲಿಲ್ಲ. ಆ ಅವಧಿಯಲ್ಲಿ ಆದ ಹಗರಣಗಳ ಬಗ್ಗೆ ತನಿಖೆ ನಡೆದರೆ ಒಂದು ವಿಶೇಷ ಕೋರ್ಟ್ ಬೇಕಾಗಬಹುದೇನೋ. ಮೊಮ್ಮಗನ ಭಾನ್ಗಡಿಗಳಿಂದಾಗೇ ಜಿಲ್ಲೆಯಲ್ಲಿ ಹೆಸರು ಕೆಡಿಸಿಕೊಂಡ ಮೇಟಿ ಈ ಬಾರಿ ಮೊಮ್ಮಗನ ಬದಲು ಮಗಳನ್ನು ನಿಲ್ಲಿಸಿದ್ದು.


ಆದಾಗ್ಯೂ, ಹುಲ್ಲಪ್ಪ ಮೇಟಿ ಮಗಳನ್ನು ಅಧ್ಯಕ್ಷಗಾದಿಯಲ್ಲಿ ಕೂರಿಸಲು ಪ್ರತ್ಯಕ್ಷ ಕಸರತ್ತುಗಳನ್ನೇನೂ ನಡೆಸುತ್ತಿಲ್ಲ. ಅದಕ್ಕೂ ಒಂದು ಕಾರಣವಿದೆ. ತಾನು ಮುಖ್ಯಮಂತ್ರಿ ಸಿದ್ದರಾಮಯ್ಯನ ಕುಲಬಾಂಧವ ಕಂ ಆಪ್ತ ಎಂಬ ನಂಬಿಕೆಯಲ್ಲಿರುವ ಮೇಟಿ, ಮುಂದಾಗುವ ಸಂಪುಟ ಪುನರ್‌ರಚನೆಯಲ್ಲಿ ತನಗೆ ಮಂತ್ರಿಗಿರಿ ಗ್ಯಾರಂಟಿ ಎಂಬ ಕನವರಿಕೆಯಲ್ಲಿದ್ದಾರೆ. ಒಂದೊಮ್ಮೆ ಜಿಲ್ಲಾ ಪಂಚಾಯ್ತಿ ಅಧ್ಯಕ್ಷಗಾದಿ ತನ್ನ ಕುಟುಂಬಕ್ಕೇ ಬೇಕು ಅಂತ ಪಟ್ಟುಹಿಡಿದು ಕೂತರೆ ಮಂತ್ರಿಯಾಗುವ ಅವಕಾಶ ಬಂದಾಗ ಜಿಲ್ಲೆಯ ಇನ್ನುಳಿದ ಶಾಸಕರು ತಮ್ಮ ವಿರುದ್ಧ ತಿರುಗಿಬೀಳಬಹುದೆನ್ನುವ ಲೆಕ್ಕಾಚಾರದಲ್ಲಿ ಎಲೆಕ್ಷನ್‌ಗೂ ಮುನ್ನ ಒದರಾಡುತ್ತಿದ್ದ ಮಾತನ್ನು ಬದಲಿಸಿ ಮುಧೋಳದಲ್ಲಿ ಮೂರುಬಾರಿ ಸೋತಿರುವ ತಿಮ್ಮಾಪುರನ ಸೋದರಿ ಕವಿತಾರನ್ನು ಜಿ.ಪಂ ಅಧ್ಯಕ್ಷೆಯನ್ನಾಗಿಸೋಣ ಅಂತ ಮಾತಾಡಿಕೊಂಡು ಓಡಾಡುತ್ತಿದ್ದಾನೆ. ತಿಮ್ಮಾಪುರ ಮಾದಿಗ ಜನಾಂಗಕ್ಕೆ ಸೇರಿದವರಾದ್ದರಿಂದ ಆ ಜನಾಂಗದ ಬೆಂಬಲ ಗಿಟ್ಟಿಸುವ ಜೊತೆಗೆ ತನ್ನ ಮಂತ್ರಿಗಿರಿ ದಾರಿಯನ್ನು ಸಲೀಸು ಮಾಡಿಕೊಳ್ಳುವುದು ಮೇಟಿ ಹುನ್ನಾರ. ಆದರೆ ಬೀಳಗಿ ಕ್ಷೇತ್ರದಿಂದ ಆಯ್ಕೆಯಾಗಿರುವ ಕಸ್ತೂರಿಬಾಯಿ ಲಿಂಗಣ್ಣ… ಮತ್ತು ಹುನಗುಂದ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಕಸ… ಜಾದವ ಕೂಡಾ ದಲಿತರೇ ಆಗಿದ್ದು, ಬೀಳಗಿ… ಜೆ.ಟಿ.ಪಾಟೀಲ್ ಮತ್ತು ಹುನಗುಂದದ ಕಾಶಪ್ಪ ತ… ಈ ಬೆಂಬಲಿಗರನ್ನೇ ಅಧ್ಯಕ್ಷರನ್ನಾಗಿಸಿ ಅವರ ಮೂ… ಅಧಿಕಾರದ ಚುಕ್ಕಾಣಿ ಹಿಡಿಯುವ ಕನಸು ಕಾಣ… ಸಾಧ್ಯತೆಯೂ ಉಂಟು. ಹಾಗೆ ಅವರೇನಾದರು ಅಡ್ಡಬಂದ… ಆಗ ತಿಮ್ಮಾಪುರನನ್ನು ಗಾಳವಾಗಿಟ್ಟು ಗೊಂದ… ಹುಟ್ಟಿಸೋದು ಮತ್ತು ಆ ಮೂಲಕ ವಿಜಯಾನಂ… ಕಾಶಪ್ಪನನ್ನು ಹುಚ್ಚಪ್ಯಾಲಿ ಮಾಡೋದು ಮೇಟಿ… ಹಿಕಮತ್ತು. ಅಂದಹಾಗೆ, ತನ್ನ ಮಗಳೇ ಅಧ್ಯಕ್ಷೆಯಾಗ… ಎನ್ನುವ ಆಸೆ ಮೇಟಿಯೊಳಗೆ ಇನ್ನೂ ಸಂಪೂರ್ಣವಾ… ಬತ್ತಿಲ್ಲ. ಯಾಕೆಂದರೆ ಹುಲ್ಲಪ್ಪ ಮೇಟಿ ಪಕ್ಕಾ ಕುಟುಂ… ರಾಜಕಾರಣಿ. ಡಿಸಿಸಿ ಬ್ಯಾಂಕ್‌ನಿಂದ, ಅಪೆಕ್ಸ್ ಬ್ಯಾಂಕ್… ಸದಸ್ಯ, ಚೇರ್‌ಮನ್‌ಗಿರಿತನಕ ಎಲ್ಲವೂ ತಮಗೇ ಬೇಕೆನ್ನು… ಹಂಬಲದವ. ಇತ್ತ ಮೇಟಿಯದು ಇಂತೆಲ್ಲ ಲೆಕ್ಕಾಚಾರಗ… ಚಾಲೂ ಇದ್ದರೆ ಅತ್ತ ವಿಜಯಾನಂದ ಕಾಶಪ್ಪ 'ನನ್ನನಂತೂ… ಮಂತ್ರಿ ಮಾಡ್ಲಿಲ್ಲ, ಕಡೀಕೆ ನನ್ನ ಹೆಣ್ತಿನಾದ್ರೂ ಜಿ.ಪ… ಅಧ್ಯಕ್ಷಿಣಿ ಮಾಡ್ರಲಾ' ಅನ್ನೋ ಸ್ಲೋಗನ್ ಹಿಡಿದ… ಸಿದ್ದರಾಮಯ್ಯನವರನ್ನು ಎಡತಾಕುತ್ತಿದ್ದಾನೆ.

ಕಾಂಗ್ರೆಸ್‌ನಲ್ಲಿ ಈ ಪರಿ ಕದಲಿಕೆಗಳು ಶುರುವಾಗಿದ್ದ… ಬಿಜೆಪಿ, ಎಲ್ಲಿ ಕಳೆದ ಬಾರಿ ತನ್ನ ಸದಸ್ಯರು ಬಿಕರಿಯಾದರ… ಈ ಬಾರಿಯೂ ಬಿಕರಿಯಾಗುತ್ತಾರೋ ಅನ್ನೊ ಭಯದ… ಎಲ್ಲಾ 18 ಸದಸ್ಯರನ್ನು ತುಂಬಿಕೊಂಡು ನಿಗೂ… ರೆಸಾರ್ಟ್‌ನಲ್ಲಿ ಠಿಕಾಣಿ ಹೂಡಿದೆ. ಮೂಲಗಳ ಪ್ರಕಾ… ತಮ್ಮದೇ ಸರ್ಕಾರ ಅಧಿಕಾರದಲ್ಲಿರುವ ಗೋವಾದ… ಬಿಜೆಪಿಗಳು ಮಜಾ ಉಡಾಯಿಸುತ್ತಿದ್ದಾರಂತೆ.

ಅಧ್ಯಕ್ಷ ಆಯ್ಕೆ ಕಸರತ್ತಿನ ಸೆಂಟರ್ ಆಫ್ ಅಟ್ರ್ಯಾಕ್ಷನ… ಅಂದ್ರೆ ಅದು ರೈತ ಸಂಘದಿಂದ ಆಯ್ಕೆಯಾಗಿರೋ ಮುತ್ತ… ಕುಮಾರ. ಈತ ಜಾತಿಯಿಂದ ಲಿಂಗಾಯತ ಗಾಣಿ… ರೈತಪರ ಹೋರಾಟಗಾರ, ಕಬ್ಬು ಬೆಳೆಗಾರರ ಸಂಘ… ಅಧ್ಯಕ್ಷನೂ ಆಗಿರುವ ಮುತ್ತಪ್ಪನ ನಿರ್ಣಯದ ಮೇಲೆಯೆ… ಎಲ್ಲವೂ ನಿಂತಿದೆ. ಈತ ಕಾಂಗ್ರೆಸ್‌ಗೆ ಬೆಂಬಲಿಸಿದರು… ಕೈಪಾರ್ಟಿಗೆ ಪ್ರತ್ಯಕ್ಷ ಲಾಭವಿಲ್ಲ. ಹೆಚ್ಚೆಂದರೆ ಡ್ರಾ ಮೂಲ… ಅಧಿಕಾರ ದಕ್ಕಬಹುದೆನ್ನುವ ನಿರೀಕ್ಷೆ ಇಟ್ಟುಕೊಳ್ಳಬಹುದಷ್ಟೆ… ಆದರೆ ಬಿಜೆಪಿಗೆ ಬೆಂಬಲ ನೀಡಿದರೆ ಕಮಲಕ್ಕೆ ಅಧಿಕಾ… ಗ್ಯಾರಂಟಿ, ಆಗ ಆತನಿಗೆ ಒಳ್ಳೆಯ ಹುದ್ದೆ ಲಭಿಸುತ್ತ… ಅನ್ನೋ ಆಮಿಷಗಳೂ ಮುತ್ತಪ್ಪನ ಸುತ್ತ ಹರಿದಾಡುತ್ತಿವ… ಜೊತೆಗೆ ಇದೇ ಕಾಂಗ್ರೆಸ್ ಸರ್ಕಾರದಲ್ಲಿ ರೈತರ ಅತಿಹೆಚ… ಆತ್ಮಹತ್ಯೆಗಳು ನಡೆದರೂ 30% ಜನರಿಗೂ ಪರಿಹಾ… ಸಿಕ್ಕಿಲ್ಲ; ಕಬ್ಬಿನ ಬಾಕಿ ಬಿಲ್ ಪಾವತಿಸಿಲ್ಲ. ಹೀಗಿರುವಾ… ಅದೇ ಸರ್ಕಾರಕ್ಕೆ ಬೆಂಬಲ ಕೊಡುವುದು ಎಷ್ಟು ಸರಿ… ಯಾವ ನಿಟ್ಟಿನಿಂದ ನೋಡಿದರೂ ಬಿಜೆಪಿ ಜೊ… ಹೋಗುವುದೇ ಲೇಸು ಎಂಬ ಬ್ರೈನ್‌ವಾಶಿಂಗ್ ಕಮ… ಪಾಳಯದಿಂದ ನಡೆಯುತ್ತಲೇ ಇದೆ. ಆದರೆ ಆತ ಇನ್ನೂ… ತನ್ನ ನಿರ್ಧಾರವನ್ನು ಅಧಿಕೃತವಾಗಿ ಪ್ರಕಟಿಸಿಲ್ಲ; ಆದರೇನಂತ… ಕಾಂಗ್ರೆಸ್‌ನ ಒಳಕದಲಿಕೆಗಳು ದಿನದಿಂದ ದಿನಕ… ಜೋರಾಗುತ್ತಲೇ ಬರುತ್ತಿವೆ.







■ ಮೇಘರಾಜ್…

ಕಾಂಗ್ರೆಸ್ ಶವಪೆಟ್ಟಿಗೆಗೆ 'ಜೋಡಿ' ಮೊಳೆ

ಜಿಲ್ಲೆಯಲ್ಲಿರೋ ಏಳು ವಿಧಾನಸಭೆ ಕ್ಷೇತ್ರದಲ್ಲಿ ಆರು ಕಾಂಗ್ರೆಸ್‌ನವರೆ. ಮುಧೋಳ ಮೀಸಲು ಕ್ಷೇತ್ರದಲ್ಲಿ ಬಿಜೆಪಿಯ ಗೋವಿಂದ ಕಾರಜೋಳರನ್ನು ಬಿಟ್ಟರೆ ಉಳಿದಂತೆ ಸರ್ವಂ ಕಾಂಗ್ರೆಸ್‌ಮಯ. ಆದಾಗ್ಯೂ ಜಿ.ಪಂ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ಗೆ ಭಾರೀ ಮುಖಭಂಗವೇ ಆಗಿದೆ. ಬಾಗಲಕೋಟ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮೂರು ಜಿ.ಪಂ. ಸ್ಥಾನಗಳಲ್ಲಿ ಮೂರು ಕಾಂಗ್ರೆಸ್ ಗೆದ್ದರೆ ಒಂದು ಬಿಜೆಪಿಯ ಪಾಲಾಗಿದೆ. ಬೀಳಗಿ ವಿಧಾನಸಭಾ ಕ್ಷೇತ್ರದ 7 ಜಿ.ಪಂ ಸ್ಥಾನಗಳಲ್ಲಿ ಆರು ಕಾಂಗ್ರೆಸ್ ಗೆದ್ದರೆ ಒಂದು ಬಿಜೆಪಿಯದ್ದು. ಇವೆರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಸಾಧನೆ ಪರವಾಗಿಲ್ಲ. ಆದರೆ ಜಮಖಂಡಿಯ ಫಲಿತಾಂಶವೇ ಕೈ ಪಾಲಿಗೆ ದೊಡ್ಡ ದುರಂತ. ಯಾಕೆಂದರೆ ಇಲ್ಲಿ ಕಾಂಗ್ರೆಸ್ಸಿನ ಸಿದ್ದು ನ್ಯಾಮಗೌಡ ಶಾಸಕರಾಗಿದ್ದರೂ 6 ಜಿ.ಪಂ. ಸ್ಥಾನಗಳಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನದಲ್ಲೂ ಜಯಗಳಿಸಿಲ್ಲ. ಎಲ್ಲವೂ ಬಿಜೆಪಿ ಪಾಲಾಗಿವೆ. ಹಾಗೇ ಕೈ ಪಾರ್ಟಿಯ ಬಿಬಿ ಚಿಮ್ಮನಕಟ್ಟಿ ಶಾಸಕನಾಗಿರೊ ಬಾದಾಮಿಯಲ್ಲೂ ಆರು ಸ್ಥಾನಗಳ ಪೈಕಿ ಐದು ಬಿಜೆಪಿ ಪಾಲಾಗಿದ್ದರೆ ಕಾಂಗ್ರೆಸ್ ಒಂದಕ್ಕಷ್ಟೇ ಸೀಮಿತಗೊಂಡಿದೆ. ಜಮಖಂಡಿ ಮತ್ತು ಬಾದಾಮಿಗಳಲ್ಲಿ ಕಾಂಗ್ರೆಸ್ ಮಕಾಡೆ ಮಲಗಿದ್ದಕ್ಕೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕಿತ್ತು. ಆದರೆ ಜಮಖಂಡಿಯ ಸಿದ್ದು ನ್ಯಾಮಗೌಡ, ಬಾದಾಮಿಯ ಚಿಮ್ಮನಕಟ್ಟಿ ತಮ್ಮ ನಾಯಕತ್ವಗಳ ಸೋಲನ್ನು ಕಂಡಕಂಡವರ ಹೆಗಲಿಗೆ ಹೊರಿಸಿ ಹೈಕಮಾಂಡ್‌ಗೆ ದೂರು ನೀಡುತ್ತಿದ್ದಾರೆ.


ಜಮಖಂಡಿಯ ಶಾಸಕ ಸಿದ್ದು ನ್ಯಾಮಗೌಡ ಕಾರ್ಯಕರ್ತರ ಬಗ್ಗೆ ಕಾಳಜಿಯನ್ನು ಹೊಂದಿದ್ದರೆ ತಾಲೂಕಿನಲ್ಲಿ ಕಾಂಗ್ರೆಸ್ ಈ ಪಾಟ ತೋಪೆದ್ದು ಹೋಗುತ್ತಿರಲಿಲ್ಲ. ಇಡೀ ತಾಲ್ಲೂಕಿನ ಮಾತು ಒತ್ತಟ್ಟಿಗಿರಲಿ, ನ್ಯಾಮಗೌಡರ ಸ್ವಂತ ಊರಾದ ಕಡಕೋಳದಲ್ಲಿ ಅವರ ಜನಾಂಗದ ಲಿಂಗಾಯತ ಗಾಣಿಗರೇ ಹೆಚ್ಚು, ಸರಿಸುಮಾರು ಆರೂವರೆ ಸಾವಿರ ಮತಗಳಿವೆ. ಅದು ಹುನ್ನೂರ ಜಿ.ಪಂ. ಮತಕ್ಷೇತ್ರಕ್ಕೆ ಬರುತ್ತದೆ. ಆ ಕ್ಷೇತ್ರದಿಂದ ಲಿಂಗಾಯತ ಪಂಚಮಸಾಲಿಯ ಮುತ್ತಪ್ಪ ಹಿಪ್ಪರಗಿಯನ್ನು ನ್ಯಾಮಗೌಡ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಿದ್ದರು. ಅವನ ಊರಲ್ಲೇ ಬಿಜೆಪಿಗೆ 700 ಮತಗಳ ಲೀಡ್ ಹರಿದುಹೋಗಿವೆ!

ಬಾದಾಮಿಯಲ್ಲಿ ಚಿಮ್ಮನಕಟ್ಟಿ ನೆಪಕ್ಕಷ್ಟೇ ಶಾಸಕ, ಅವನ ಹೆಂಡತಿಯೇ ಅಧಿಕೃತ ಶಾಸಕಿ. ಶಾಸಕಗಿರಿ ಇರೋದೆ ವಸೂಲಿಗೆಂದು ತಿಳಿದಿರುವ ಅವನ ಹೆಂಡತಿ ರತ್ನಾಬಾಯಿ, ಮಗ ಭೀಮಸೇನ ಅಲಿಯಾಸ್ ರಾಜಾ ಪ್ರತಿ ಕಾಮಗಾರಿಯಲ್ಲೂ ಕಮೀಷನ್‌ಗೆ ಗಂಟುಬೀಳುತ್ತಾರೆ. ಮಗನನ್ನು ಮುಂಚೂಣಿಗೆ ತರಬೇಕೆಂಬ ಧೃತರಾಷ್ಟ್ರ ಪ್ರೇಮಕ್ಕೆ ಬಿದ್ದಿರುವ ಚಿಮ್ಮನಕಟ್ಟಿ ಎಲ್ಲರ ವಿರೋಧದ ನಡುವೆಯೂ ಮಗನನ್ನು ಕಣಕ್ಕಿಳಿಸಿದ್ದ. ಭೀಮಸೇನನಂತ ಮಗನನ್ನು ಗೆಲ್ಲಿಸಿ, ಜಿ.ಪಂ. ಅಧ್ಯಕ್ಷಗಾದಿಯಲ್ಲಿ ಕೂರಿಸಿ ಆರಾಮತ್ತು ಜಿಲ್ಲೆಯನ್ನೇ ಟೆಂಡರ್ ಕರೆಯಬೇಕೆನ್ನುವ ಚಿಮ್ಮನಕಟ್ಟಿ ದುರಾಸೆಗೆ ಮತದಾರ ಭರ್ಜರಿ ಏಟನ್ನೇ ಕೊಟ್ಟ. ಚಿಮ್ಮನಕಟ್ಟಿಯ ಮಗ ಅಧ್ಯಕ್ಷನಾಗುವುದು ಇರಲಿ, ಎಲೆಕ್ಷನ್‌ನಲ್ಲಿ ಗೆಲ್ಲಲಾಗದೆ ಬೋರಲು ಬಿದ್ದ.

ಪಂಚಾಯ್ತಿ ಎಲೆಕ್ಷನ್‌ನಲ್ಲಿ ಗೆಲ್ಲುವ ನಿಷ್ಠಾವಂತ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವುದು ಬಿಟ್ಟು ಇಂತಿಷ್ಟು ರೇಟಿಗೆ ಮಾರಾಟ ಮಾಡಿಕೊಂಡಿದ್ದ ಚಿಮ್ಮನಕಟ್ಟಿ ಈಗ ತನ್ನ ಮಗನ ಸೋಲಿನ ಹೊಣೆ ಹೊರಿಸಲು ತನಗಾಗದವರ ಲಿಸ್ಟೇ ರೆಡಿ ಮಾಡಿದ್ದಾನೆ. ಆ ಲಿಸ್ಟಿನಲ್ಲಿ ಸಿದ್ರಾಮಯ್ಯನ ಹತ್ತಿರದಂಟ ಡಾ. ದೇವರಾಜ ಪಾಟೀಲ್, ಎಸ್.ಡಿ. ಜೋಗಿನ, ಹನುಮಂತ ಮಾವಿನಮರದವರಂತಹ ನೂರಾರು ಹೆಸರುಗಳಿವೆ. ಇವರೆಲ್ಲ ಕಾಂಗ್ರೆಸ್‌ನಲ್ಲಿದ್ದು ಇವನ ಗೆಲುವಿಗೆ ಶ್ರಮಿಸಿದವರೆ. ಆದರೆ ದೇವರಾಜ್ ಪಾಟೀಲ್ ಮುಂದಿನ ಬಾರಿ ಎಂಎಲ್‌ಎ ಟಿಕೆಟ… ಪಡೆಯಲು ಓಡಾಡುತ್ತಿರೋದು ಮತ್ತು ಆ ಪಟ್ಟಿಯಲ್ಲಿರೋ ಎಲ್ಲರೂ ಪಾಟೀಲ… ಬೆಂಬಲಕ್ಕೆ ನಿಂತಿರೋದು ಚಿಮ್ಮನಕಟ್ಟಿಗೆ ನುಂಗಲಾರದ ತುತ್ತಾಗಿದೆ. ಹಾಗಾ… ಅವರನ್ನು ಪಕ್ಷದಿಂದಲೇ ಹೊರಹಾಕಿ ನಿಟ್ಟುಸಿರುಬಿಡೋದು ಚಿಮ್ಮನಕಟ್ಟಿಯ… ಹುನ್ನಾರ. ಅದಕ್ಕೆ ಈ ಸೋಲನ್ನು ಬಳಸಿಕೊಳ್ಳುತ್ತಿದ್ದಾನೆ. ಅಂದಹಾಗೆ, ಯಾರ್ಯಾರನ… ಪಕ್ಷದಿಂದ ಉಚ್ಚಾಟಿಸಬೇಕೆಂದು ಚಿಮ್ಮನಕಟ್ಟಿಗೆ ಲಿಸ್ಟ್ ತಯಾ… ಮಾಡಿಕೊಟ್ಟಿರೋದು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ್ ಯಲಿಗಾರ… ವಿಪರ್ಯಾಸ ಹೇಗಿದೆಯೆಂದರೆ, ಈ ಮಹಾಂತೇಶ್ ಯಲಿಗಾರ್‌ನ ಸ್ವಕ್ಷೇತ್ರದಲ್ಲಿ… ಕಾಂಗ್ರೆಸ್ ಅಭ್ಯರ್ಥಿ ಎಂ.ಎಚ್. ಛಲವಾದಿ ಬರೋಬ್ಬರಿ 5000 ಮತಗ… ಲೀಡ್‌ನಿಂದ ಬಿಜೆಪಿಯೆದುರು ಸೋತಿದ್ದಾನೆ. ಇಡೀ ಬಾಗಲಕೋಟೆ ಜಿಲ್ಲೆಯ… ಈ ಬಾರಿ ದಾಖಲಾದ ಅತ್ಯಂತ ದೊಡ್ಡ ಅಂತರದ ಸೋಲು ಇದು! ತ… ಕ್ಷೇತ್ರದಲ್ಲೇ ಕಾಂಗ್ರೆಸ್‌ಗೆ ಮತ ಕೊಡಿಸಲಾರದವ ಬೇರೊಬ್ಬರ ಮೇಲೆ ಗೂಬ… ಕೂರಿಸಿ, ಪಕ್ಷದಿಂದ ಹೊರಹಾಕಬೇಕೆಂದು ಶಿಫಾರಸ್ಸು ರೆಡಿ ಮಾಡಿದ್ದಾನೆ!!

ಅತ್ತ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನೂ ಇಂತದೇ ಆಪಾದನೆ… ಮುಂದಾಗಿದ್ದಾನೆ. ಹೆಂಡತಿ ವೀಣಾಳನ್ನು ಕಣಕ್ಕಿಳಿಸಿದ್ದ ಕಾಶಪ್ಪ ತಾನೇ ಖುದ್ದಾ… ಠಿಕಾಣಿ ಹೂಡಿ ರಿಗ್ಗಿಂಗ್ ಮಾಡಿಸಿ ಗೆಲ್ಲಿಸಿಕೊಂಡಿದ್ದ. ಆದರೆ ಉಳಿದ ಕ್ಷೇತ್ರಗಳಲ… ಕಾಂಗ್ರೆಸ್ ಅಭ್ಯರ್ಥಿಗಳು ಸೋತಿದ್ದಾರೆ. ಇದಕ್ಕೆ ಮಾಜಿ ಶಾಸಕ, ಹಾಲಿ ಹೌಸಿಂಗ… ಬೋರ್ಡ್‌ನ ನಂಜಯ್ಯನಮಠನೇ ಕಾರಣ ಅಂತ ಕಾಶಪ್ಪ ಆರೋಪಿಸುತ್ತಿದ್ದಾನೆ… ನಂಜಯ್ಯನ ಮಠನ ಸ್ವಂತ ಊರು ಸೂಳಿಭಾವಿ ಸೇರಿಕೊಳ್ಳುವ ಗೂಡೂರು… ಪಂಚಾಯ್ತಿ ಕ್ಷೇತ್ರದಲ್ಲಿ ತನ್ನ ಪರಮವೈರಿ ಶಶಿಕಾಂತ ಪಾಟೀಲ್ ಬಿಜೆಪಿಯಿಂದ… ಗೆದ್ದಿರೋದನ್ನೆ ಉದಾಹರಣೆ ಕೊಡುತ್ತಿರುವ ಕಾಶಪ್ಪ, ನಂಜಯ್ಯನ ಮೇಲ… ಆಪಾದನೆ ಹೊರಿಸುತ್ತಿದ್ದಾನೆ. ಸೋಲಿಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಬದಲು… ಒಬ್ಬರ ಮೇಲೊಬ್ಬರು ಕೆಸರೆರಚಿಕೊಳ್ಳಲು ಹಾತೊರೆಯುತ್ತಿರುವುದು ನಿಜಕೂ… ಕಾಂಗ್ರೆಸ್ ಪಾಲಿಗೆ ಪಾಲಿಗೆ ಒಳ್ಳೆಯ ಬೆಳವಣಿಗೆಯೇನಲ್ಲ.

ಮಂತ್ರಿಗಿರಿಗಾಗಿ ಅನಂತ್ಮಾಣಿಯ 'ಮುಸ್ಲಿಂ ಬಾಂಬ್'!!


ಅನಂತಕುಮಾರ್ ಹೆಗಡೆ

ಹಿಂಸಾತ್ಮಕ ಹಿಂದೂತ್ವದ ಹಿಡನ್ ಅಜೆಂಡಾ ಸಂವಿಧಾನ ಮಾಡಿಕೊಂಡಿರುವ ಢೋಂಗಿ ದೇಶಭಕ್ತ ಸಂಸದ ಅನಂತಕುಮಾರ್ ಹೆಗಡೆ ಉರುಫ್ ಅನಂತ್ಮಾಣಿ ಪೂರ್ವಾಶ್ರಮದ ಪರಾಕ್ರಮ ಪ್ರದರ್ಶನಕ್ಕೆ ಇಳಿದಿದ್ದಾನೆ! ಕಳೆದ ಪಾರ್ಲಿಮೆಂಟ್ ಚುನಾವಣೆ ಆಗುತ್ತಿದ್ದಂತೆಯೇ ನಾಪತ್ತೆಯಾಗಿದ್ದ ಈ ಕರ್ಮಗೇಡಿ ಎಂಪಿಗೆ ಕೇಂದ್ರ ಮಂತ್ರಿಗಿರಿ ಹುಕ್ಕಿ ಹೊಕ್ಕಿದ್ದೇ ತಡ, ಕೋಮು ಕಿತಾಪತಿಯ ಅಪಲಾಪ ಶುರು ಹಚ್ಚಿಕೊಂಡು ಬಿಟ್ಟಿದ್ದಾನೆ. ಮುಸ್ಲಿಮರ ಮೂದಲಿಸುವ ಮೂಲಕ ಮತೀಯ ಸಂಘರ್ಷದ ಬೆಂಕಿ ಹಾಕಿದರೆ ಆ ಬೆಳಕಲ್ಲಿ ತಾನು ಮೋದಿ ಮಹಾತ್ಮನ ಕಣ್ಣಿಗೆ ಬೀಳಬಹುದೆಂಬ ಪಾತಕ ಲೆಕ್ಕಾಚಾರ ಮಾಣಿಯದು.


ಕಳೆದ ಒಂದೂವರೆ ವರ್ಷದಿಂದ ಉತ್ತರ ಕನ್ನಡದ ಕೇಸರಿ ಕರಾಮತ್ತಿನ ಸಂಸದ ಅನಂತ್ಮಾಣಿ ಆರೋಗ್ಯ ಕೆಟ್ಟಿದೆ ಎಂದು ಸುದ್ದಿಗಳು ಬರುತ್ತಲೇ ಇದೆ. ಕೆಲವರು ಆತನಿಗೆ ಬೆನ್ನುಹುರಿ ನೋವೆಂದರೆ, ಮತ್ತೊಂದಿಷ್ಟು ಮಂದಿ ಹೈಶುಗರ್ ಪೇಷಂಟ್ ಎಂದರು; ಇನ್ನೊಂದು ಗುಲ್ಲಿನಂತೆ 1990ರ ದಶಕದ ಭಟ್ಕಳದ ಭೀಭತ್ಸ ಕೋಮು ಗಲಭೆಯ ಕೈದಿಯಾಗಿದ್ದ ಅನಂತ್ಮಾಣಿಗೆ ಅಂದು ಪೊಲೀಸರು ಬೆಂಡೆತ್ತಿದ್ದರ ಅಡ್ಡ ಪರಿಣಾಮದಿಂದಾತ ಹಾಸಿಗೆ ಹಿಡಿದಿದ್ದನಂತೆ. ಒಟ್ಟಿನಲ್ಲಿ ಮಾಣಿ ಬೆಂಗಳೂರು, ಕೋಲ್ಕತ್ತಾ, ದಿಲ್ಲಿ, ಕೇರಳದ ತರಹೇವಾರಿ ಆಸ್ಪತ್ರೆಗಳಲ್ಲಿ ಮಲಗಿದ್ದಾನೆಂಬ ಥ್ರಿಲ್ಲರ್ ಧಾರಾವಾಹಿಗಳು ಜಿಲ್ಲೆಯಲ್ಲಿ ಕೇಳಿಬರುತ್ತಲೇ ಇತ್ತು. ಕ್ಷೇತ್ರದ ಜನರ ಪಾಲಿಗೆ ಇದ್ದೂ ಸತ್ತಂತಾಗಿದ್ದ ಅನಂತ್ಮಾಣಿ ಕಳೆದವಾರ ಇದ್ದಕ್ಕಿದ್ದಂತೆ ಶಿರಸಿಯಲ್ಲಿ ಪ್ರತ್ಯಕ್ಷನಾಗಿದ್ದ. ಅಂದು ಅನಂತ್ಮಾಣಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಹುಚ್ಚುಚ್ಚಾಗಿ ಹಲುಬಿದ ಪರಿ ಕಂಡವರಿಗೆ 'ಈತನ ಆರೋಗ್ಯವಷ್ಟೇ ಅಲ್ಲ, ತಲೆಯೂ ಕೆಟ್ಟಿದೆ' ಎಂಬುದು ಖಾತ್ರಿಯಾಗಿ ಹೋಯ್ತು!


ಜನದ್ರೋಹ, ದುರಹಂಕಾರ, ಅಧಿಕ ಪ್ರಸಂಗದಿಂದ ಜಿಲ್ಲೆಯಲ್ಲಿ ನೆಲೆ-ಬೆಲೆ ಕಳಕೊಂಡಿರುವ ಅನಂತ್ಮಾಣಿಗೆ ಸ್ವಪಕ್ಷ ಬಿಜೆಪಿಯಲ್ಲೂ ಮೂಸಿ ನೋಡೋರಿಲ್ಲ! ಪಾರ್ಟಿಯ ಹಿರಿಯರ ತಲೆ ಮೇಲೆ ಕುರ್ಚಿ ಎತ್ತಿ ಬಿಸಾಡುವ ಪ್ರವೃತ್ತಿಯ ಮಾಣಿಯ ಪ್ರಾಮಾಣಿಕತೆ, ದೇಶಪ್ರೇಮ, ಹಿಂದೂತ್ವದ ಅಸಲಿಯತ್ತು ಜನರಿಗೆ ಅರ್ಥವಾಗಿಹೋಗಿದೆ. ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ್ ಜೋಶಿ, ಕೇಂದ್ರ ಮಂತ್ರಿ ಅನಂತಕುಮಾರ್, ಉತ್ತರ ಕನ್ನಡದ ಅಳಿದುಳಿದ ಬಿಜೆಪಿಯ ನಾಯಕಾಗ್ರೇಸ ಕಾಗೇರಿ ಹೆಗಡೆಗಳಂಥ ಸ್ವಜಾತಿ ಬ್ರಾಹ್ಮಣ ಮುಂದಾಳುಗಳನ್ನೇ ಎದುರು ಹಾಕಿಕೊಂಡಿರುವ ಅನಂತ್ಮಾಣಿಯ ಅಡ್ಡ ಕಸಬುಗಳು ಜನರಲ್ಲಿ ವಾಕರಿಕೆ ಮೂಡಿಸಿಬಿಟ್ಟಿದೆ. ಕಂಡಕಂಡಲ್ಲಿ ಕಾರು, ಸೈಟು, ಬಂಗ್ಲೆ ಕೊಂಡುಕೊಂಡಿರುವ ಅನಂತ್ಮಾಣಿಯ ಸಿರಿವಂತಿಕೆಯ ತನಿಖೆಯಾಗಿದ್ದರೆ ಆತನ ದೇಶಭಕ್ತಿ ಅನಾವರಣ ಆಗೋದು ಗ್ಯಾರಂಟಿ.

ದೇಶಭಕ್ತಿ, ನೀತಿ, ನೈತಿಕತೆ ಮೈವೆತ್ತಂತೆ ಉದ್ದುದ್ದ ಭಾಷಣ ಬಿಗಿಯುವ ಈ ದಗಲುಬಾಜಿ ಎಂಪಿ ಮಾಣಿ ಹತ್ತಾರು ಎಕರೆ ದೇಶದ ಆಸ್ತಿಯಾದ ಅರಣ್ಯವನ್ನೇ ಲೂಟಿ ಮಾಡಿದ್ದಾನೆ. ಶಿರಸಿಯ ಮತ್ತೀಘಟ್ಟ ಕಾಡಿನ ಜಾಗದಲ್ಲಿ ಸಮೃದ್ಧ ಅಡಿಕೆ ತೋಟ ಮಾಡಿಕೊಂಡಿದ್ದಾನೆ. ಒಂದು ಕಾಲದಲ್ಲಿ ಬುತ್ತಿ ಕಟ್ಟಿಕೊಂಡು ಕಮ್ಯುನಲ್ ಬೈಠಕ್‌ಗೆ ಹೋಗುತ್ತಿದ್ದ ಅನಂತ್ಮಾಣಿ ಇವತ್ತು ಹಲವು ಕೋಟಿಗೆ ತೂಗುತ್ತಾನೆ. ಆತನ 'ಕದಂಬ ಇಂಟ್ರಾಕ್' ಸಂಸ್ಥೆಯ ಗೋಲ್‌ಮಾಲ್‌ಗಳು ಒಂದೆರಡಲ್ಲ, ಕದಂಬದ ವಹಿವಾಟಿನ ಹೆಸರಿನಲ್ಲಿ, ಡಾಂಬರ್ ಅವ್ಯವಹಾರ ಅನಂತ್ಮಾಣಿ ಮತ್ತು ಆತನ ಧರ್ಮಪತ್ನಿ ರೂಪಾರನ್ನು ಕಳ್ಳ ಕುಳಗಳನ್ನಾಗಿಬಿಟ್ಟಿದೆ. ಸಂದರ್ಭ ಸಿಕ್ಕಾಗೆಲ್ಲ ಸಾಬರ ಬೈದು ತೀಟೆ ತೀರಿಸಿಕೊಳ್ಳುವ ಅನಂತ್ಮಾಣಿ ಗಲ್ಫ್‌ನಿಂದ ಡಾಂಬರ್ ತರಿಸಿ ರಸ್ತೆ ಕಾಮಗಾರಿ ಕಂಟ್ರಾಕ್ಟರ್‌ಗಳಿಗೆ ಮಾರುವುದೊಂದೇ ಸಾಕು ಈತ ಅದೆಂಥ ಸೋಗಲಾಡಿ ಎಂಬುದನ್ನು ಸಾಬೀತುಮಾಡಲಿಕ್ಕೆ!

ಮಲೆನಾಡಿನ ರೈತರಿಗೆ ಸಾಂಬಾರ ಬೆಳೆ, ವೆನಿಲ್ಲಾ, ಅಗರ್‌ವುಡ್ ಎಂದೆಲ್ಲ ಮುಗಿಲಮಲ್ಲಿಗೆ ತೋರಿಸಿದ ಅನಂತ್ಮಾಣಿ ತಾನು ಮಾತ್ರ ಈ 'ದಂಧೆ'ಯಲ್ಲಿ ದುಡ್ಡು ದೋಚಿದ್ದೇ ದೋಚಿದ್ದು! ಕಾಮಗಾರಿಯಲ್ಲೂ ಪರ್ಸೆಂಟೇಜ್ ಹೊಡೆಯುವ ಈ ಕೇಸರಿ ಕಂಠೀರವ ಜನಸಾಮಾನ್ಯರ ಸಮಸ್ಯೆ-ಸಂಕಟಕ್ಕೆ ಸ್ಪಂದಿಸಿದ ಒಂದೇ ಉದಾಹರಣೆ ಆತನ ಎಂಪಿಗಿರಿಯ ಒಂದೂವರೆ ದಶಕದ ದರ್ಬಾರಿನಲ್ಲಿ ರಾವುಗನ್ನಡಿ ಹಿಡಿದು ಹುಡುಕಿದರೂ ಕಾಣಿಸದು. ಜನಸಾಮಾನ್ಯರ ಕಷ್ಟ-ನೋವು ಹೇಳಿಕೊಂಡು ಹೋದರೆ 'ಹುಚಾ' ಗುಡುವ ಅನಂತ್ಮಾಣಿ ಒಣ ದೊಡ್ಡಸ್ತಿಕೆಯ ಬಡಿವಾರ ತೋರಿಸುವುದು ನಾಚಿಕೆಗೇಡು. "ಇದೆಲ್ಲ ಎಮ್ಮೆಲ್ಲೆ, ಜಿಪಂ ಸದಸ್ಯ ಕೆಲ್ಸಾನಪ್ಪ... ನಂದೇನಿದ್ರೂ ದಿಲ್ಲೀಲಿ ಕುಂತು ಕಾನೂನು ಮಾಡೋದು, ಶಾಸನ ಮಾಡೋ ಜವಾಬ್ದಾರಿ..." ಎಂದು ಹಾರಾಡುವ ಅನಂತ್ಮಾಣಿಗೆ ಹಿಂದೂತ್ವದ ಗುದುಮುರಿಗೆ ಬಿಟ್ಟರೆ ಬೇರೇನೂ ಗೊತ್ತಿಲ್ಲ. ಸಂಸದನೊಬ್ಬನ ಕರ್ತವ್ಯ ಹೊಣೆಗಾರಿಕೆ, ಜನಪರ ಪ್ರಜಾತಂತ್ರದ ಗಂಧಗಾಳಿಯೇ ಈ ಹಿಂದೂ ಭಯೋತ್ಪಾದಕನಿಗೆ ಇಲ್ಲ!


ಡಾ. ಚಿತ್ತರಂಜನ್


ಮೋದಿ


ಪ್ರಹ್ಲಾದ್ ಜೋಶಿ

1990ರ ದಶಕದಲ್ಲಿ ಬರೋಬ್ಬರಿ ಒಂದು ವರ್ಷ ಭಟ್ಕಳದಲ್ಲಿ ನಡೆದ ಕೋಮು ಗಲಭೆಯ ಸೂತ್ರಧಾರ ಈ ಅನಂತ್ಮಾಣಿ. ನ್ಯಾಯಾಲಯಗಳಲ್ಲಿ ಕಚೇರಿಗಳಲ್ಲಿ ಆತನ ಮೇಲಿನ ಕೇಸುಗಳು ಬಿದ್ದುಹೋಗಿರಬಹುದು. ಆದರೆ ಅನಂತ್ಮಾಣಿ ಭಟ್ಕಳದಲ್ಲಿ ಭೂಗತನಾಗಿ ಆಡುತ್ತಿದ್ದ ರಕ್ತಪಿಪಾಸು 'ಆಟ' ಇವತ್ತಿಗೂ ಜನರು ಮರೆತಿಲ್ಲ! ನವಾಯತ ಮುಸ್ಲಿಮರು ಗಣನೀಯವಾಗಿರುವ ಭಟ್ಕಳದ ಹಿಂದೂತ್ವದ ಪಿತಾಮಹನಂತಿದ್ದ ಡಾ. ಚಿತ್ತರಂಜನ್‌ರ ನಿಗೂಢ ಹತ್ಯೆಯನ್ನೇ ಬಂಡವಾಳ ಮಾಡಿಕೊಂಡು ಸಂಸದನಾದ 'ಸಾಹಸ' ಅನಂತ್ಮಾಣಿಯದು. ಎಂಪಿಯಾಗುತ್ತಿದ್ದಂತೆಯೇ ಮಾಣಿ ಬಣ್ಣ ಬಯಲಾಗಿಬಿಟ್ಟಿತು. ಜನರಿಗ್ಯಾಕೋ ಅನಂತ್ಮಾಣಿ ಬಗ್ಗೇ ಡೌಟುಗಳು ಶುರುವಾದವು. ಚಿತ್ತರಂಜನ್‌ರ ಪುಣ್ಯತಿಥಿ ದಿನದಂದು ಭಟ್ಕಳದ ಗೋಡೆಗಳ ಮೇಲೆ "ಡಾ. ರಂಜನ್ ಕೊಲೆಗಾರ ಅನಂತ್‌ಕುಮಾರ್" ಎಂಬ ಭಿತ್ತಿಪತ್ರಗಳು ರಾರಾಜಿಸತೊಡಗಿದವು. ಹೀಗೆ ಸತತ ಮೂರ್ನಾಲ್ಕು ವರ್ಷವೂ ಅನಂತ್ಮಾಣಿಯನ್ನು ಅನುಮಾನಿಸುವ ಪೋಸ್ಟರ್ ಅಂಟಿಸಲಾಗಿತ್ತು. ಅನಂತನ ಚೆಡ್ಡಿ ಕಾರ್ಯಾಚರಣೆ ಹತ್ತಿರದಿಂದ ನೋಡಿದ ಆತನ ಬಳಗದವರೇ ಈ ಭಿತ್ತಿ ಪತ್ರದ ಸೃಷ್ಟಿಕರ್ತರೆಂಬ ಚರ್ಚೆಗಳೂ ನಡೆದಿದ್ದವು.

ಅಷ್ಟೇ ಅಲ್ಲ, ಗುರು ಪತ್ನಿ (ಡಾ. ರಂಜನ್ ಹೆಂಡತಿ)ಯನ್ನು ಆತ ಬಳಸಿಕೊಳ್ಳುತ್ತಿದ್ದ ರೀತಿಯ ಬಗ್ಗೂ ಆಕ್ಷೇಪಾರ್ಹ ಗುಸುಗುಸು ಹಬ್ಬಿತ್ತು. ಖುದ್ದು ರಂಜನ್‌ರ ವಯೋವೃದ್ಧ ತಂದೆಯೇ ಅನಂತ್ಮಾಣಿ ಹೊತ್ತಲ್ಲದ ಹೊತ್ತಲ್ಲಿ ತನ್ನ ಸೊಸೆಯನ್ನು ಕರೆದೊಯ್ಯುವ ಬಗ್ಗೆ ಬೇಸರ-ಬೇಗುದಿ ಹೊರಹಾಕಿದ್ದರು! ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಸಿಬಿಐನಿಂದ ಡಾ. ರಂಜನ್ ಹತ್ಯೆಗಾರರನ್ನು ಹಿಡಿಯಲು ಸಾಧ್ಯವಾಗಿಲ್ಲ! ಇದೊಂದು ಪತ್ತೆಯಾಗದ 'ಸಿ' ರಿಪೋರ್ಟ್ ಕೇಸ್ ಆಗಲು ಅನಂತನ ಜಾದೂವೇ ಕಾರಣ ಎಂಬ ಮಾತೂ ಇವತ್ತಿಗೂ ನಿಷ್ಠಾವಂತ ಚೆಡ್ಡಿಗಳ ವಲಯದಲ್ಲಿ ಗುಂಯ್‌ಗುಡುತ್ತಲೇ ಇದೆ!! ತಮಾಷೆಯೆಂದರೆ ಇಂಥ ಅನುಮಾನಾಸ್ಪದ ಅನಂತ್ಮಾಣಿ ಹಿಂದೂತ್ವದ ಬೆದರು ಬೊಂಬೆಯಾಗಿ ಪಾರ್ಲಿಮೆಂಟ್‌ಗೆ ಆಯ್ಕೆಯಾಗುತ್ತಲೇ ಇದ್ದಾನೆ. ಐದು ಬಾರಿ ಗೆದ್ದಿರುವ ಅನಂತ್ಮಾಣಿಯಿಂದ ಮೂರು ಬಿಲ್ಲಿ ಪ್ರಯೋಜನ ಉತ್ತರ ಕನ್ನಡಿಗರಿಗಾಗಲಿ, ರಾಜ್ಯಕ್ಕಾಗಲಿ ಆಗಲಿಲ್ಲ ಎಂಬುದು ಬೇರೆ ಮಾತುಬಿಡಿ!

ಇಂತಿಪ್ಪ ಇತಿಹಾಸ-ಭೂಗೋಳದ ದಂಡಪಿಂಡ ಪುಢಾರಿ ಅನಂತ್ಮಾಣಿಯ ಖಾಲಿ ಬುರುಡೆಗೆ ಅಭಿವೃದ್ಧಿ ಪರ ರಾಜಕಾರಣ ಚಿಂತನೆ ಅಥವಾ ಜನಹಿತ ಯೋಜನೆ ಹೇಗೆ ಹೊಳೆಯಲು ಸಾಧ್ಯ?! ಆತನದೇನಿದ್ದರೂ ಮುಸ್ಲಿಮ್-ಕ್ರಿಶ್ಚಿಯನ್ನರ ಬೈದು, ಹೀಯಾಳಿಸಿ ಪೆದ್ದು ಹಿಂದೂ ಶೂದ್ರರ ಕೆರಳಿಸಿ ಬೇಳೆ ಬೇಯಿಸಿಕೊಳ್ಳುವ ಹೀನಸುಳಿ! ಹಿಂದಿನ ಅವಧಿಯಲ್ಲೇ ಈ ಮೈಗಳ್ಳ-ಭ್ರಷ್ಟ ಎಂಪಿಗೆ ಜನರು ಛೀ... ಥೂ... ಎಂದು ಉಗಿಯಹತ್ತಿದ್ದರು. ಆದರೆ ಸಂದರ್ಭದ ಪಿತೂರಿಯಿಂದ ಅನಂತ್ಮಾಣಿ ಅಚಾನಕ್ ಗೆದ್ದಿದ್ದು ಖುದ್ದು ಆತನನ್ನೇ ಬೆಚ್ಚಿಬೀಳಿಸಿತ್ತು. ಮೋದಿ ಗಾಳಿಗಿಂತಲೂ ಹೆಚ್ಚಾಗಿ ಉತ್ತರ ಕನ್ನಡದಲ್ಲಿ ಬೀಸಿದ ದೇಶಪಾಂಡೆಯ ಪಾಳೆಗಾರಿ ವಿರೋಧಿ ಅಲೆ ಅಬ್ಬರ ಅದಾಂತರಕಾರಿ ಅನಂತನನ್ನು ಮತ್ತೆ ಸಂಸದನನ್ನಾಗಿ ಮಾಡಿತ್ತು. ಎಂಪಿಯಾಗುವ ಯಾವ ಯೋಗ್ಯತೆಯೂ ಇಲ್ಲದ ತನ್ನನ್ನು ಗೆಲ್ಲಿಸಿದ ಜನರ ಋಣ ತೀರಿಸಬೇಕೆಂಬ ಕನಿಷ್ಠ ನಿಯತ್ತೂ ಈ ಗಂಡಾಗುಂಡಿ ಭೂಪನಿಗೆ ಇಲ್ಲದೇಹೋಯ್ತು.

ಗೆದ್ದು ಹಾರ ಹಾಕಿಸಿಕೊಂಡವನೆ ಕಣ್ಮರೆಯಾಗಿ ಹೋದ; ಐಷಾರಾಮಿ ಜೀವನದಲ್ಲಿ ಮೈಮರೆತ ಅನಂತ್ಮಾಣಿ ಜನರಿಗೆ ಸದಾ ನಾಟ್‌ರಿಚೇಬಲ್ ಎಂಪಿಯಾದ! ಈತ ಜಿಲ್ಲೆಯ ಆಗುಹೋಗುಗಳ ಬಗ್ಗೆ ಸ್ಪಂದಿಸದ ಕೊರಡಂತಾಗಿ ಹೋದ. ಎಂಪಿ ಎಲ್ಲಿದ್ದಾನೆಂಬುದು ಜಿಲ್ಲಾಡಳಿತಕ್ಕೂ ಗೊತ್ತಾಗದಂತಾಯ್ತು. ಅನಂತ್ಮಾಣಿ ಅದೆಂಥ ಕೃತಘ್ನನೆಂದರೆ ಕುಮಟಾದ 'ಬರ್ಗಿ' ಎಂಬಲ್ಲಿ ಐಓಸಿಯ ಇಂಡೇನ್ ಗ್ಯಾಸ್‌ಟ್ಯಾಂಕರ್ ಉರುಳಿ ಊರಿಗೆ ಊರೇ ಸುಟ್ಟು ಕರಕಲಾಯ್ತು; ಡಜನ್‌ಗಟ್ಟಲೆ ಜನರು, ಅಸಂಖ್ಯ ಜಾನುವಾರು, ಜೀವಜಾಲ ಭಸ್ಮವಾದರು. ಆದರೂ ಈ 'ಕೇಂದ್ರ ದೊರೆ' ಬರಲೇ ಇಲ್ಲ. ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ ಜೋಶಿ ಬಂದರೂ ನಾಲಾಯಕ್ ಅನಂತ್ಮಾಣಿಯ ಅಡ್ರಸ್ಸೇ ಇಲ್ಲದಾಯ್ತು! ಅನಂತ್ಮಾಣಿ ಹೊಣೆಗೇಡಿತನ, ಬುದ್ಧಿಪೂರ್ವಕ ಅಸಡ್ಡೆ ಅಮಾನವೀಯತೆ ಕಂಡು ಜನರು ಬಿಡಿ, ಬಿಜೆಪಿಗರೇ ಹಿಡಿಶಾಪ ಹಾಕತೊಡಗಿದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷೆಯಾಗಿದ್ದ ಮಹಿಳೆಯೊಬ್ಬರು ಗ್ಯಾಸ್ ದುರಂತಕ್ಕೆ ಬಲಿಯಾಗಿದ್ದರು; ಈಕೆ ಅನಂತ್ಮಾಣಿಯ ಕಟ್ಟಾ ಬೆಂಬಲಿಗಳಾಗಿದ್ದರು; ಆದರೂ ಪಾಪಿ ಅನಂತ್ಮಾಣಿಯ ಕಲ್ಲು ಹೃದಯ ಮಾತ್ರ ಕರಗಲೇ ಇಲ್ಲ.

ಆಳುವ ಪಾರ್ಟಿಯ ಸಂಸದನಾಗಿದ್ದೂ ಗ್ಯಾಸ್ ದುರಂತದ ಬಗ್ಗೆ ಉದಾಸೀನ ಪ್ರದರ್ಶಿಸಿದ ಅನಂತನ ಅವಾಂತರ ಬಿಜೆಪಿಯ ದಿಲ್ಲಿ ದರ್ಬಾರಿನಲ್ಲೂ ಚರ್ಚೆಗೀಡಾಯ್ತು. ರಾಜ್ಯ ಅಧ್ಯಕ್ಷ ಪ್ರಹ್ಲಾದ್ ಜೋಶಿಯಂತೂ ಅನಂತ್ಮಾಣಿ ಅಧಿಕಪ್ರಸಂಗದ ಬಗ್ಗೆ ಕೆಂಡಾಮಂಡಲ ಆಗಿಹೋದರು. ಈ ಬೆಂಕಿಗೆ ಅನಂತ್ಮಾಣಿಯ ಹಿತಶತ್ರು ಕಾಗೇರಿ ಹೆಗಡೆ ಲೀಟರ್‌ಗಟ್ಟಲೆ ಪೆಟ್ರೋಲ್ ಸುರಿದರು. ಶಿರಸಿಯಿಂದ

▶▶09

ಸೆಟ್ಲ್‌ಮೆಂಟ್ ಸಂಸದ

ಅನಂತ್ಮಾಣಿ ಲೋಕಸಭಾ ಸದಸ್ಯನಾಗಿ ಹೆಚ್ಚುಕಮ್ಮಿ ಒಂದೂವರೆ ದಶಕ ಕಳೆದಿದ್ದಾನೆ. ಈ ಅವಧಿಯಲ್ಲಿ ಆತ ಸೆಟ್ಲಮೆಂಟ್, ಸೆಟ್ಟಿಂಗ್, ಫಿಕ್ಸಿಂಗ್, ಪರ್ಸೆಂಟೇಜ್, ಕಿಕ್‌ಬ್ಯಾಕ್ ದಂಧೆಗಳಲ್ಲಿ ನುರಿತ ಸಂಸದನಾಗಿದ್ದಾನೆ. ಎಂಪಿ ಆಗುವಾಗ ಅನಂತ್ಮಾಣಿ ಎಂದರೆ ಶುದ್ಧ ತಿರಬೋಕಿ. ಶಿರಸಿಯ ಸಿಟಿ ಬಸ್‌ಗೂ ಕಾಸಿಲ್ಲದೇ ಒದ್ದಾಡುತ್ತಿದ್ದ ಈತ ಇವತ್ತು ಐಷಾರಾಮಿ ಕಾರಲ್ಲಿ, ವಿಮಾನದಲ್ಲಿ ಓಡಾಡುತ್ತಿರುವುದು ಪ್ರಜಾಪ್ರಭುತ್ವದ ಪವಾಡ. ಯಾವ ತತ್ವ ಸಿದ್ಧಾಂತವೂ ಈತನಿಗೆ ಗೊತ್ತಿಲ್ಲ. ಹಿಂದೂತ್ವಕ್ಕೂ ಈತ ನಿಷ್ಠನಲ್ಲ. ದೇಶಭಕ್ತ ಉದರ ನಿಮಿತ್ತದ ವೇಷ; ದುಡ್ಡು ಮಾಡೋದೇ ಧ್ಯೇಯ! ಇದಕ್ಕೆಲ್ಲ ಸಾಕ್ಷಿ ಆತನ ಅಕ್ರಮ ಅರಣ್ಯ ಕಬಳಿಕೆ-ಕಾನೂನುಬಾಹಿರ ವೈಭೋಗದ ಜೀವನ. ನಿಜ ದೇಶಭಕ್ತ ಇಂಥ ಕಳ್ಳತನ-ಅನೈತಿಕತೆಗೆ ಕೈಹಾಕುತ್ತಾನಾ?

ಈ ಅನಂತ್ಮಾಣಿಯ ದೇಶ ಭೋಗಿ ಹಿಂದೂತ್ವಕ್ಕೆ ಒಂದು ಸಣ್ಣ ಸ್ಯಾಂಪಲ್ ಇಲ್ಲಿದೆ. 'ಕದಂಬ' ಎಂಬ ಹಿಂದೂ ಸಂಸ್ಥಾನದ ಹೆಸರಲ್ಲಿ ಈತ ತರಹೇವಾರಿ 'ಬಿಸ್ನೆಸ್' ನಡೆಸುತ್ತಿದ್ದಾನೆ. ಈತನ ಒಂದು ಕದಂಬದ ಕರಾಳ ಕತೆ ಒಂದು ಪುರಾಣದಷ್ಟಿದೆ! ಸಂಸದ ಸಾಹೇಬರ ಧರ್ಮಪತ್ನಿ ರೂಪಾ ಹೆಗಡೆ ಪಕ್ಕಾ ವ್ಯಾಪಾರಸ್ಥೆ. ಈಕೆಯ ಕದಂಬ ಇಂಟ್ರಾಕ್ ಪ್ರೈವೇಟ್ ಲಿಮಿಟೆಡ್ ವಹಿವಾಟು ದೇಶ-ವಿದೇಶಕ್ಕೆ ಹಬ್ಬಿದೆ. ಡಾಂಬರ್, ಲೂಬ್ರಿಕೆಂಟ್ಸ್ ಹೊರದೇಶದಿಂದ ತರಿಸಿ ಮಾರಾಟ ಮಾಡುವ ದಂಧೆ. ವೆನಿಲ್ಲಾ, ಸಾಂಬಾರ ಪದಾರ್ಥ, ಗೃಹ ನಿರ್ಮಾಣದಂಥ ಹತ್ತಾರು ಗೋಲ್‌ಮಾಲ್ ದಂಧೆ ಸಂಸದರ ಪರಿವಾರದ ಕದಂಬ ನಡೆಸುತ್ತಿದೆ. ಕದಂಬ ಸೊಸೈಟಿಯ ದಗಲುಬಾಜಿ ದಂಧೆ ಸಹಿಸದ ಮಾನವಂತರು ಹೊರಬಿದ್ದು ಹೋಗಿದ್ದಾರೆ. ಕೆಲವು ಸಂಸ್ಥೆಯಿಂದ ಮಾಣಿ ಮತ್ತವನ ಮಡದಿಯನ್ನು ಒದ್ದೋಡಿಸಿದ್ದಾರೆ.


ಕದಂಬದ ವಹಿವಾಟಿಗೆ ರಾಷ್ಟ್ರೀಕೃತ ಬ್ಯಾಂಕಿಂದ ಪಡೆದ ಸಾಲಕ್ಕೂ ಪಂಗನಾಮ ಹಾಕುವ 'ಸಾಹಸ' ಪರಿಸ್ಥಿತಿ ಸಂಸದನಿಗೆ ಬಂದಿರುವುದು ನಾಚಿಕೆಗೇಡು. ಅದೂ ದೇಶಭಕ್ತ ಹಿಂದೂ ಸರದಾರ ಸರ್ಕಾರದ-ದೇಶದ ಹಣಕ್ಕೆ ಸುಳ್ಳು ಸಬೂಬು ಹೇಳಿ ನಾಲಿಗೆ ಚಾಚುತ್ತಾನೆಂದರೆ ಅದು ಇನ್ನೂ ಗಲೀಜು ಸಂಗತಿ! ಅನಂತ್ಮಾಣಿಯ ಹೆಂಡತಿ ರೂಪಾ ಒಡೆತನದ ಕದಂಬ ಇಂಟ್ರಾಕ್ ಪ್ರೈವೇಟ್ ಲಿಮಿಟೆಡ್ ಶೆಲ್ ಕಂಪನಿ ಜತೆ ಒಪ್ಪಂದ ಮಾಡಿಕೊಂಡು ಲೂಬ್ರಿಕಂಟ್ ಪೂರೈಕೆ ದಂಧೆ ಶುರು ಮಾಡಿತ್ತು. ಈ ಬಿಸ್ನೆಸ್‌ಗೆಂದು ಕದಂಬದ 'ರಾಣಿ' ಶಿರಸಿಯ ಸಿಂಡಿಕೇಟ್ ಬ್ಯಾಂಕ್ ಶಾಖೆಯಿಂದ 1.74 ಕೋಟಿ ಸಾಲ ಪಡೆದಿತ್ತು.


2012 ಸೆಪ್ಟೆಂಬರ್‌ನಲ್ಲಿ ಸಾಲ ಪಡೆದ ಕದಂಬ ಕೆಲವೇ ತಿಂಗಳಲ್ಲಿ ವ್ಯವಹಾರದಲ್ಲಿ ಹಾನಿಯಾಯ್ತೆಂದು ಕಂತು ಕಟ್ಟುವುದನ್ನು ನಿಲ್ಲಿಸಿದೆ. ಈ ಸಾಲಕ್ಕೆ ಬಡ್ಡಿಯೂ ಸೇರಿ ಅದು 1.95 ಕೋಟಿಯಾದಾಗ ಕದಂಬಕ್ಕೆ ಬ್ಯಾಂಕಿಂದ ನೋಟಿಸ್ ಜಾರಿಯಾಗುತ್ತದೆ. ಆಗ ಸಂಸದ ಸಾಹೇಬ ಅನಂತ್ಮಾಣಿ ತನ್ನ ಅಧಿಕಾರ ಬಲ ಬಳಸಿ ಒನ್ ಟೈಮ್ ಸೆಟ್ಲಮೆಂಟ್‌ಗೆ ಒತ್ತಡ ಹಾಕುತ್ತಾನೆ. ಸಾಲ ತುಂಬುವ ಶಕ್ತಿಯಿದ್ದರೂ ವಂಚನೆಗೆ ಕೈಹಾಕುತ್ತಾನೆ. ರೂಪಾ ಹೆಗಡೆ ಹೆಸರಲ್ಲಿರುವ ಶಿರಸಿಯ ಲಂಡಕನಹಳ್ಳಿ ಜಾಗ ಸದ್ರಿ ಸಾಲಕ್ಕೆ ಭದ್ರತೆಯಾಗಿ ನೀಡಿದ್ದರೂ ಬ್ಯಾಂಕಿನವರು ಸುಮ್ಮನುಳಿಯುತ್ತಾರೆ. ಬಡವರ ಸಾವಿರ ಚಿಲ್ಲರೆ ಸಾಲಕ್ಕೆ ಅವರ ಮನೆ-ಹೊಲ ಹರಾಜು ಹಾಕುವ ಬ್ಯಾಂಕಿನವರು ಸಂಸದರ ಹೆಂಡತಿಯ ಜಮೀನು ಮುಟ್ಟುವ ಧೈರ್ಯ ತೋರಿಸುವ ಉಸಾಬರಿಗೆ ಹೋಗುವುದಿಲ್ಲ.


ಇದೇ ಶಿರಸಿ ಸಿಂಡಿಕೇಟ್ ಶಾಖೆಯಲ್ಲಿ ಅನಂತ್ಮಾಣಿಯದು 3.40 ಲಕ್ಷದ ಮತ್ತೊಂದು ಸಾಲವಿದೆ; ಗೃಹಸಾಲವೆಂದು 50 ಲಕ್ಷ ಪಡೆದಿದ್ದಾನೆ. ಇಂಥ ಪ್ರಾಣಿಕನಿಗೆ ಒನ್ ಟೈಮ್ ಸೆಟ್ಲಮೆಂಟ್ ಕೊಡಲು ಬ್ಯಾಂಕ್ ದೊರೆಗಳು ಅಣಿಯಾಗುತ್ತಾರೆ. ಒಂದು ನಾಮಕಾವಾಸ್ತೆ ವಿಚಾರಣಾ ಸಮಿತಿ ರಚಿಸಲಾಗುತ್ತದೆ. ಈ ಸಮಿತಿ "ಅನಂತಕುಮಾರ್ ಹೆಗಡೆ ಉ.ಕನ್ನಡ ಸಂಸದನಾಗಿರುವುದರಿಂದ ಆತನ ಅಥವಾ ಆತನ ಹೆಂಡತಿಯ ಕದಂಬದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು ಅಪಾಯಕಾರಿ. ಇದರಿಂದ ಜಿಲ್ಲೆಯ ಇತರ ಸಿಂಡಿಕೇಟ್ ಬ್ಯಾಂಕ್ ಶಾಖೆಯ ವ್ಯವಹಾರದ ಮೇಲೆ ವ್ಯತಿರಿಕ್ತ ಪರಿಣಾಮ ಆಗುವ ಸಾಧ್ಯತೆಯಿದೆ..." ಎಂದು ಬ್ಲ್ಯಾಕ್‌ಮೇಲ್ ಭೀತಿಗೆ ಒಳಗಾದಂತೆ ರಿಪೋರ್ಟ್ ಕೊಡುತ್ತೆ.

ಈ ವರದಿ ಆಧಾರದ ಮೇಲೆ ಸಂಸದ ಅನಂತ್ಮಾಣಿಯ ಕದಂಬಕ್ಕೆ ಬರೋಬ್ಬರಿ 22,98,000 ರಿಯಾಯಿತಿ ನೀಡಲಾಗುತ್ತದೆ. ಸುಳ್ಳು ನೆಪ ಹೇಳಿ, ಎಂಪಿ ಪ್ರಭಾವ ಬಳಸಿ ದೇಶದ ಹಣ ಹೊಡೆದ ಅನಂತ್ಮಾಣಿ ಅದೆಂಥ ದೇಶಭಕ್ತನೆಂದು ನೀವೇ ಹಾಳಿ ನೋಡಿ. "ಭೋಲೋ ಭಾರತ್ ಮಾತಾಕೀ ಜೈ" ಎನ್ನುತ್ತಲೇ ದೇಶದ್ರೋಹ ಮಾಡುವುದು, ದೇಶ ಲೂಟಿ ಮಾಡುವುದೇ ಅಸಲಿ ಹಿಂದೂತ್ವ ತಾನೆ?!

ಮಲ್ಯನನ್ನು ಜೈಲಿಗೆ ಹಾಕಿ–ಆಸ್ತಿ ಹರಾಜು ಹಾಕಿ







ಇಂಥದೊಂದು ಬೇಡಿಕೆಯನ್ನು ಮುಂದಿಟ್ಟು ಸಾರ್ವಜನಿಕರು ಚಳವಳಿ ಮಾಡಬೇಕಾದ ಅನಿವಾರ್ಯತೆ ಇಂದು ಎದುರಾಗಿದೆ. ಸಾವಿರಾರು ಕೋಟಿಗಳ ಸರದಾರ ವಿಜಯ್ ಮಲ್ಯ ಸರ್ಕಾರಿ ಬ್ಯಾಂಕುಗಳಿಂದ 8159 ಕೋಟಿಗಳಷ್ಟು ಹಣವನ್ನು ಸಾಲ ಎತ್ತಿ ಗುಳುಂ ಮಾಡಿ ಕಾಲ್ಕೀಳಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾನೆ! ಅಂತಿಮವಾಗಿ ಆ ಹಣ ಯಾರದ್ದು ಅಂತೀರಿ? ನಮ್ಮ ನಿಮ್ಮೆಲ್ಲರದ್ದು.

ಕಳೆದ ವಾರ ಒಂದು ಕುತೂಹಲಕಾರಿ ಸುದ್ದಿ ಹೊರಬಿದ್ದಿತ್ತು, ತನ್ನ ಒಡೆತನದ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಕಂಪನಿಯ ಚೇರ್ಮನ್ ಸ್ಥಾನದಿಂದ ಇಳಿಯುವುದಾಗಿ ಕಳೆದ ವಾರ ಮಲ್ಯ ಘೋಷಿಸಿದ. ಇದರ ಹಿಂದಿನ ಕಾರಣಗಳನ್ನು ಕೆದಕಿದಾಗ, ಇಂಗ್ಲೆಂಡ್ ಮೂಲದ ಡಯಾಜಿಯೋ ಪಿಎಲ್‌ಸಿ ಎಂಬ ಕಂಪನಿ ಮಲ್ಯನ ಕೈಯಲ್ಲಿರುವ ಷೇರುಗಳನ್ನೂ ಒಳಗೊಂಡಂತೆ ಕಂಪನಿಯ ಬಹುಪಾಲು ಷೇರುಗಳನ್ನು ಕೊಂಡುಕೊಂಡಿದ್ದು, ಹೀಗೆ ತನ್ನ ಷೇರುಗಳು ಮತ್ತು ಸ್ಥಾನವನ್ನು ತೆರವು ಮಾಡುತ್ತಿರುವ ಪ್ರತಿಫಲವಾಗಿ ಮಲ್ಯ ಸಾಹೇಬರು 75 ಮಿಲಿಯನ್ ಡಾಲರ್ ಅಂದರೆ ಸುಮಾರು 515 ಕೋಟಿಗಳನ್ನು ಪಡೆದುಕೊಳ್ಳುವುದಾಗಿ ಒಪ್ಪಂದ ಆಗಿರುವುದೂ ಬೆಳಕಿಗೆ ಬಂತು.

ಯುಬಿ ಕಂಪನಿ ನಂಬಿ ಸಾಲ ಕೊಟ್ಟ ಬ್ಯಾಂಕುಗಳು ಇಂಥಾ ಸುದ್ದಿ ಕೇಳಿ, ತಡವಾಗಿ ಎಚ್ಚೆತ್ತುಕೊಂಡವು. ಯಾಕೆಂದರೆ ಮಲ್ಯನ ಒಡೆತನವನ್ನು ಬೇರೆ ಕಂಪನಿಗೆ ಕಾನೂನುಬದ್ಧವಾಗಿ ವರ್ಗಾಯಿಸಿದ ನಂತರ ಬ್ಯಾಂಕುಗಳು ಕೊಟ್ಟ ಸಾಲ ವಸೂಲಾಗುವ ಯಾವ ಭರವಸೆಯೂ ಇರೋದಿಲ್ಲ, ಈಗಾಗಲೇ ಕೆಲವು ಬ್ಯಾಂಕುಗಳು ಮಲ್ಯನನ್ನು 'ವಿಲ್‌ಫುಲ್ ಡಿಫಾಲ್ಟರ್' ಅಂದರೆ ಉದ್ದೇಶಪೂರ್ವಕ ಸುಸ್ತಿದಾರನೆಂದು ಘೋಷಿಸಿವೆ. ಮಲ್ಯನಿಂದ ಹಣ ವಸೂಲಿ ಮಾಡಲು ಸಾಲ ವಸೂಲಾತಿ ಟ್ರಿಬ್ಯೂನಲ್‌ನಲ್ಲಿ ಕೇಸುಗಳು ಹಲವಾರು ವರ್ಷಗಳಿಂದ ತೆವಳುತ್ತಲೇ ಇವೆ. ಮಲ್ಯ ಜೀವಂತವಾಗಿರುವ ವೇಳೆಯಲ್ಲೇ ಆ ತೀರ್ಪು ಹೊರಬೀಳುವ ಸಾಧ್ಯತೆ ತೀರಾ ಕಡಿಮೆ. ಯಾಕೆಂದರೆ ಸಾರ್ವಜನಿಕ ಬ್ಯಾಂಕುಗಳ ಹಣವನ್ನು ನುಂಗುತ್ತಿರುವ ಕಾರ್ಪೋರೇಟ್ ಕಂಪನಿಗಳ ಬಗ್ಗೆ ನಮ್ಮ ಸರ್ಕಾರಗಳು ವ್ಯವಹರಿಸುತ್ತಿರುವ ರೀತಿಯೇ ಹಾಗೆ.

ಹೀಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನೇತೃತ್ವದಲ್ಲಿ ಈ ವ್ಯವಹಾರಕ್ಕೆ ತಡೆಯಾಜ್ಞೆ ನೀಡುವಂತೆ ಕರ್ನಾಟಕ ಹೈಕೋರ್ಟ್‌ನ ಮೊರೆಹೋದವು. ಮಲ್ಯನನ್ನು ಬಂಧಿಸಬೇಕೆಂಬುದು ಮತ್ತು ಆತ ದೇಶ ಬಿಟ್ಟುಹೋಗದಂತೆ ಪಾಸ್‌ಪೋರ್ಟ್ ಸೀಜ್ ಮಾಡಬೇಕೆಂಬುದೂ ಕೂಡ ಬ್ಯಾಂಕುಗಳ ಮತ್ತೊಂದು ಬೇಡಿಕೆಯಾಗಿದೆ. ಸದ್ಯಕ್ಕೆ ಹಣ ಪಾವತಿಸದಂತೆ ಕೋರ್ಟ್ ಡಯಾಜಿಯೊ ಕಂಪನಿಗೆ ಸೂಚನೆ ನೀಡಿರುವುದರಿಂದ ತಾತ್ಕಾಲಿಕ ಸಮಾಧಾನ ತಂದಿದೆ.

ಮಲ್ಯನ ಹುಚ್ಚು ಪುರಾಣ

ಒಂದೊಮ್ಮೆ ಫೋರ್ಬ್ಸ್ ಪಟ್ಟಿಯಲ್ಲಿ ಶತ ಕೋಟ್ಯಾಧೀಶರ ಪಟ್ಟಿಯಲ್ಲಿದ್ದ ಮಲ್ಯ ರಾರಾಜಿಸುತ್ತಿದ್ದ. ಈತನ ಯುಬಿ ಕಂಪನಿಯ ಬಿಯರ್‌ಗಳು 52 ದೇಶಗಳಲ್ಲಿ ಮಾರುಕಟ್ಟೆಯನ್ನು ಹೊಂದಿವೆ. ಜಗತ್ತಿನ ಅತಿದೊಡ್ಡ ಬಿಯರ್ ತಯಾರಕ ಎಂಬ ಹೆಗ್ಗಳಿಕೆಯಿದೆ.

ಸಾಹಸೋಪೇತ ಉದ್ಯಮಿಯೆಂದು ಮಾಧ್ಯಮಗಳಲ್ಲಿ ಅದೆಷ್ಟೋ ಸ್ಟೋರಿಗಳು ಪ್ರಕಟಗೊಂಡಿವೆ. ಈತನ ಯಶಸ್ವಿ ಉದ್ಯಮಗಾಥೆಯನ್ನು ಹಾಡಿ ಹೊಗಳಿದವರಿಗೂ ಲೆಕ್ಕವಿಲ್ಲ. ಹೀಗೆ ಸುಮಾರು ಮೂರು ದಶಕಗಳ ಕಾಲ ಭಾರತದ ಮದ್ಯದ ದೊರೆಯೆಂದು ಖ್ಯಾತನಾಗಿದ್ದ ಮಲ್ಯ ಇದೀಗ ಫೋರ್ಬ್ಸ್ ಪಟ್ಟಿಯಲ್ಲಿ ಸ್ಥಾನ ಕಳೆದುಕೊಂಡಿದ್ದಾನೆ. ಈತನ ಸಾಲಗಳು ಸಾವಿರಾರು ಕೋಟಿಗಳ ಲೆಕ್ಕದಲ್ಲಿ ಬೆಳೆದು ನಿಂತಿವೆ. ಈತನ ಆಸ್ತಿಪಾಸ್ತಿ ಹರಾಜು ಹಾಕಿ ಸಾಲ ವಸೂಲಿ ಮಾಡಬೇಕೆಂಬ ಕೂಗು ಕೂಡ ಅಲ್ಲಲ್ಲಿ ಕೇಳಿಬರುತ್ತಿದೆ.

ತನ್ನ ತಂದೆ ವಿಠಲ್ ಮಲ್ಯ 1983ರಲ್ಲಿ ತೀರಿಕೊಂಡಾಗ ವಿಜಯ್‌ಮಲ್ಯನಿಗೆ ಕೇವಲ 28 ವರ್ಷ. ಆ ವಯಸ್ಸಿನಲ್ಲಿ ಯುಬಿ ಸಾಮ್ರಾಜ್ಯದ ಚೇರ್ಮನ್ ಆಗಿ ಪ್ರತಿಷ್ಠಾಪಿತನಾದ ಮಲ್ಯ ಕೆಲವು ದಶಕಗಳ ಕಾಲ ತನ್ನ ಮದ್ಯದ ಬ್ಯುಸಿನೆಸ್ಸನ್ನು ದೊಡ್ಡ ಮಟ್ಟಕ್ಕೆ ವಿಸ್ತರಣೆ ಮಾಡಿದ, ಬೇರೆ ಬೇರೆ ಕ್ಷೇತ್ರಗಳಿಗೆ ವಿಸ್ತರಣೆ ಮಾಡಿ ನಾನಾ ಕಂಪನಿಗಳನ್ನು ಕೊಳ್ಳುವುದನ್ನೇ ಶೋಕಿಯಾಗಿಸಿಕೊಂಡ.

ಮಲಬಾರ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಂಪನಿಯನ್ನು ಕೊಂಡು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಂಪನಿ ಮರುನಾಮಕರಣ ಮಾಡಿ ಒಂದಷ್ಟು ಕಾಲ ನಡೆಸಿದ ನಂತರ ಅದು ಬರಕತ್ತಾಗದೆ ಹಾಲಿ ಜುವಾರಿ ಕಂಪನಿಯ ವಶವಾಗಿದೆ. ಪತ್ರಿಕಾರಂಗಕ್ಕೂ ಪದಾರ್ಪಣೆ ಮಾಡಿದ ಶ್ರೀಯುತರು ಏಷ್ಯನ್ ಏಜ್ ಎಂಬ ಆಂಗ್ಲ ದಿನಪತ್ರಿಕೆಯ ಮಾಲಿಕರಾದರು. ಹಾಗೇ ಸಿನಿ ಬ್ಲಿಜ್ ಎಂಬ ಬಾಲಿವುಡ್ ಮ್ಯಾಗಜೈನನ್ನೂ ಖರೀದಿಸಿದರು. ಕೆಲವು



ಇಂಜಿನಿಯರಿಂಗ್ ಕಂಪನಿಗಳನ್ನೂ, ಪ್ಲಾಸ್ಟಿಕ್ ಕೈಗಾರಿಕೆಗಳನ್ನೂ ಟೇಕ್ ಓವರ್ ಮಾಡಿದರು. ಬರ್ಗರ್ ಪೈಂಟ್ಸ್ ಎಂಬ ಬಣ್ಣದ ಕಂಪನಿಯನ್ನೂ ಕೊಂಡುಕೊಂಡರು.

ಭಾರೀ ಸುದ್ದಿ ಮಾಡಿದ್ದ ಶಾ ವಾಲೇಸ್ ಕಂಪನಿಯ ಖರೀದಿ ವ್ಯವಹಾರ ಎಲ್ಲಕ್ಕಿಂತಲೂ ಕುತೂಹಲಕಾರಿಯಾಗಿದೆ. ಇದು ನಡೆದದ್ದು ಹೀಗೆ. 1986ರಲ್ಲಿ ವಿದೇಶಿ ವಿನಿಮಯದ ನಿಯಮ ಉಲ್ಲಂಘನೆಯ ಆರೋಪದಡಿಯಲ್ಲಿ ಮಲ್ಯ ಅರೆಸ್ಟ್ ಆದರು. ಇದೇ ಸಂದರ್ಭದಲ್ಲಿ ಶಾ ವಾಲೇಸ್ ಎಂಬ ಮದ್ಯ ತಯಾರಿಕಾ ಕಂಪನಿಯನ್ನು ಕೊಂಡುಕೊಳ್ಳಲು ಮಲ್ಯ ಮತ್ತು ದುಬೈ ಮೂಲದ ಉದ್ಯಮಿ ಮನು ಛಾಬ್ರಿಯಾ ಇಬ್ಬರೂ ಪೈಪೋಟಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಮಲ್ಯನ ಬಂಧನವನ್ನು ಛಾಬ್ರಿಯಾನ ಪೈಪೋಟಿಯೊಂದಿಗೆ ತಳಕು ಹಾಕಲಾಗಿತ್ತು, ಅಂತಿಮವಾಗಿ ಶಾ ವಾಲೇಸ್ ಛಾಬ್ರಿಯಾನ ಕೈವಶವಾಯಿತು. ಆದರೆ ವಿಷಯ ಅಷ್ಟಕ್ಕೇ ಮುಗಿಯಲಿಲ್ಲ, 2002ರಲ್ಲಿ ಮನು ಛಾಬ್ರಿಯಾ ತೀರಿಕೊಂಡ ನಂತರ ಕಣಕ್ಕಿಳಿದ ಮಲ್ಯ ಸಾಹೇಬರು ಅವರ ಕುಟುಂಬ ವರ್ಗದವರಿಂದ ಇದೇ ಕಂಪನಿಯನ್ನು 1300 ಕೋಟಿಗಳಷ್ಟು ದುಬಾರಿ ಬೆಲೆಗೆ ಖರೀದಿಸಿ ಮೀಸೆ ತಿರುವಿದ್ದರು.

ಹೀಗಿದ್ದಾಗ ಇದ್ದಕ್ಕಿದ್ದಂತೆ ಮಲ್ಯ ಸಾಹೇಬರಿಗೆ ರಾಜ್ಯಸಭೆಯ ಸೀಟಿನಲ್ಲಿ ಕೂರುವ ಆಸೆಯಾಯ್ತು, ಈ ಆಸೆ ಬಂದಿದ್ದೇ ತಡ ಅವರು ಕಾರ್ಯಪ್ರವೃತ್ತರಾಗಿ ತಮ್ಮ ಯೋಜನೆಯನ್ನು ಜಾರಿ ಮಾಡಿಯೇ ಬಿಟ್ಟರು. ಹೀಗೆ 2002ರಿಂದ 2008ರ ಅವಧಿಯಲ್ಲಿ ಒಮ್ಮೆ, ಮತ್ತೆ 2010ರಲ್ಲಿ ಎರಡನೇ ಬಾರಿಗೆ ಆಯ್ಕೆಯಾಗಿ ಹಾಲಿ ರಾಜ್ಯಸಭಾ ಸದಸ್ಯರಾಗಿದ್ದಾರೆ. ಈ ಸ್ಥಾನವನ್ನು ಪೈಪೋಟಿಯಲ್ಲಿ ಕೊಂಡುಕೊಳ್ಳಲು ಆತ ಸುರಿದ ನೂರಾರು ಕೋಟಿ ಹಣದಿಂದ ರಾಜಕಾರಣಿಗಳ ತಿಜೋರಿ ಭರ್ತಿಯಾಯ್ತು ಎಂಬುದನ್ನು ಬಿಟ್ಟರೆ ಈ ದಂಡಪಿಂಡ ರಾಜ್ಯಸಭೆಗೆ ಹೋಗಿ ಏನು ಕಡಿದು ಗುಡ್ಡೆಹಾಕಿದೆ ಎಂಬುದು ಮಾತ್ರ ಬಹಳ ನಿಗೂಢ. ಈ ದೇಶದ ಬಡಬೋರೇಗೌಡನ ದುರಾದೃಷ್ಟ ಹೇಗಿದೆ ನೋಡಿ. ಮಲ್ಯನಂಥವರ ಇಂಥಾ ತೆವಲಿಗೂ ವೆಚ್ಚವಾಗುತ್ತಿರುವುದು ಬಡವರ ಬೆವರಿನ ಹಣವೇ, ನಮ್ಮ ಬ್ಯಾಂಕುಗಳಿಂದ ಹರಿದ ಹಣವೇ ಎಂಬುದು.

ಹೀಗೇ ಮಲ್ಯನ ದಂಡಯಾತ್ರೆ ಮುಂದುವರೆಯಿತು.

ಹೆಂಡದ ವ್ಯಾಪಾರದಲ್ಲಿ ಭಾರೀ ಲಾಭ ಗಳಿಸುತ್ತಿದ್ದ ಮಲ್ಯ 2003ರಲ್ಲಿ ಕ್ಯಾಪ್ಟನ್ ಗೋಪಿನಾಥ್ ಒಡೆತನದ ಏರ್‌ಡೆಕ್ಕನ್ ಕಂಪನಿಯನ್ನು ಕೈವಶ ಮಾಡಿಕೊಂಡು ವಿಮಾನಯಾನ ಕ್ಷೇತ್ರಕ್ಕೆ ಕಾಲಿರಿಸಿದ. ಕಿಂಗ್‌ಫಿಷರ್ ಎಂಬ ತನ್ನ ಮದ್ಯದ ಬ್ರಾಂಡ್‌ನೇಮ್ ಬಳಸಿಕೊಂಡೇ ವಿಮಾನಯಾನ ಉದ್ಯಮ ಶುರುವಾಯ್ತು, ವಿಮಾನಯಾನ ಉದ್ಯಮ ಸ್ಥಾಪಿಸುವ ಯಾರೇ ಆದರೂ ಆ ಕ್ಷೇತ್ರದಲ್ಲಿ ನುರಿತ ತಂತ್ರಜ್ಞರನ್ನು ಮೊದಲಿಗೆ ನೇಮಕ ಮಾಡಿಕೊಳ್ಳಲು ಆದ್ಯತೆ ನೀಡುತ್ತಾರೆ. ನಂತರ ಮ್ಯಾನೇಜ್‌ಮೆಂಟ್ ಸಿಬ್ಬಂದಿಯನ್ನೂ, ಅನುಭವಿ ಪೈಲಟ್‌ಗಳನ್ನೂ ಆರಿಸಲು ಆದ್ಯತೆ ನೀಡುತ್ತಾರೆ. ನಂತರ ಏರ್‌ಹೋಸ್ಟೆಸ್ ಮುಂತಾದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುತ್ತಾರೆ. ಆದರೆ ನಮ್ಮ ಹೆಂಡದ ದೊರೆಯ ಆದ್ಯತೆಗಳೆಲ್ಲಾ ಉಲ್ಟಾಪಲ್ಟಾ. ಆತ ಎಲ್ಲಕ್ಕಿಂತ ಮೊದಲಿಗೆ ಆರಿಸಿದ್ದು ಸೆಕ್ಸೀ ಏರ್ ಹೋಸ್ಟೆಸ್‌ಗಳನ್ನು! ಈ ಗಗನಸಖಿಯರ ನೇಮಕಾತಿಗಾಗಿ ಖುದ್ದಾಗಿ ಮಲ್ಯ ಸಾಹೇಬರೇ ಕುಂತಿದ್ದರಂತೆ! ಅದನ್ನು ತಮ್ಮ ಜಾಹಿರಾತಿನಂತೆಯೂ ಬಳಸಿಕೊಂಡಿದ್ದರು.

ನಂತರ ಇತರ ಕಂಪನಿಗಳೊಂದಿಗೆ ದರ ಪೈಪೋ… ಇಳಿದ ಮಲ್ಯ ಮಧ್ಯಮ ವರ್ಗದ ಜನರಿಗೂ ವಿಮಾ… ಏರುವ ಭಾಗ್ಯ ಕಲಿಸಿಕೊಟ್ಟಿದ್ದು ಸುಳ್ಳಲ್ಲ, ಲಾಭ ನ… ಪರಿವೆಯೇ ಇಲ್ಲದೇ ತನ್ನ ಕಂಪನಿಯ ಸೇವೆಗಳ… ವಿಸ್ತರಿಸುತ್ತಲೇ ಹೋದ ಕಂಪನಿಗೆ ಸುಮಾರು … ವಿಮಾನಗಳ ಸೇರ್ಪಡೆಯಾಯಿತು. ದೇಶವಿದೇಶಗ… ಸುಮಾರು 400 ಫ್ಲೈಟ್‌ಗಳನ್ನು ಹಾರಿಸಿತು. ಅನತಿಕಾಲದ… ಕಿಂಗ್‌ಫಿಷರ್ ಏರ್‌ಲೈನ್ಸ್ ದೇಶದ ಎರಡನೇ ಅತಿದೊ… ವಿಮಾನ ಸೇವಾಸಂಸ್ಥೆಯೆಂಬ ಖ್ಯಾತಿಗೂ ಒಳಗಾಯಿ… ಆದರೆ ಸತತವಾಗಿ 17 ತ್ರೈಮಾಸಿಕ ಆಯವ್ಯಯಗಳ… ಕಂಡ ಕಂಪನಿ ಒಮ್ಮೆಯಾದರೂ ನಿವ್ವಳ ಲಾಭವ… ಗಳಿಸಲಿಲ್ಲವೆಂದರೆ ಯಾರಿಗಾದರೂ ಆಶ್ಚರ್ಯವೆನಿಸಬಹು…

ಹೀಗಿದ್ದರೂ ಮಲ್ಯ ಸಾಹೇಬರು ಹೊಸ ಹೊ… ವಿಮಾನಗಳನ್ನು ಖರೀದಿಸುವ ತನ್ನ ತೆವಲನ್ನೂ ನಿಲ್ಲಿಸ… ಇಲ್ಲ, ಕೊನೆಕೊನೆಗೆ ಖರೀದಿಸಿದ ಎಷ್ಟೋ ವಿಮಾನಗ… ಒಮ್ಮೆಯೂ ಹಾರಾಡದೆ ಪಾರ್ಕಿಂಗ್ ಜಾಗದ… ನಿಂತಿದ್ದವೆಂದರೆ ಈ ಹುಚ್ಚು ಯಾವ ಮಟ್ಟದಲ್ಲಿತ್ತೆಂಬು… ಅರ್ಥವಾಗುತ್ತದೆ. ಹೀಗೆ ಪ್ರಾರಂಭದಿಂದಲ… ದುರಾಡಳಿತದಲ್ಲೇ ಮುಳುಗಿದ ಕಿಂಗ್‌ಫಿಷರ್ ಏರ್‌ಲೈ… ಪೂರ್ಣ ದಿವಾಳಿಯಾಗಿ ಹಾಲಿ ಕಣ್ಮರೆಯಾಗಿ… 2010-11ರ ಸಾಲಿನ ನಷ್ಟ 1027 ಕೋ… 2011-2012 ರ ಸಾಲಿನ ನಷ್ಟ 1500 ಕೋಟಿಗಳಿ… ಹೆಚ್ಚು, ಇದುವರೆಗೂ ಕಿಂಗ್‌ಫಿಷರ್‌ನ ಒಟ್ಟು ಸಾಲ 70… ಕೋಟಿಗಳು. ಸಾಲಗಳ ಮೇಲಿನ ವಾರ್ಷಿಕ ಬಡ್ಡಿಯ… ಸುಮಾರು 350 ಕೋಟಿ ರೂಪಾಯಿಗಳಂತೆ! ಈ ಎ… ಪರಿಣಾಮಗಳಿಂದಾಗಿ ಕಂಪನಿಯ ಶೇರು ಮೌಲ್ಯ ಪಾತಾ… ಕುಸಿದುಹೋಯ್ತು.

ವಿಮಾನಗಳಿಗೆ ಇಂಧನ ಸಪ್ಲೈ ಮಾಡಿದ ಕಂಪನಿಗಳ… 400 ಕೋಟಿ ಬಾಕಿ ಪಾವತಿಸಬೇಕಿತ್ತು, ವಿಮಾನ ನಿಲ್ದಾಣ… ಆಡಳಿತ ಮಂಡಳಿಗಳಿಗೆ ಸುಮಾರು 300 ಕೋ… ರೂಪಾಯಿ ಬಾಕಿಯಿತ್ತು, ಕಂಪನಿಯ ಸಿಬ್ಬಂದಿ… ಸಂಬಳದಲ್ಲಿ ಕಡಿತ ಮಾಡಿದ ಟಿಡಿಎಸ್ ತೆರಿಗೆಯನ… ಸರ್ಕಾರಕ್ಕೆ ಸರಿಯಾಗಿ ಪಾವತಿಸಿಲ್ಲವಂತೆ. ಅದರ ಮೊ… ಬರೋಬ್ಬರಿ 130 ಕೋಟಿಗಳು!

ಕಿಂಗ್‌ಫಿಷರ್‌ಗೆ ವಿಮಾನ ಬಾಡಿಗೆ ನೀಡಿದ್ದ ಕಂಪನಿಗ… ತಮ್ಮ ವಿಮಾನಗಳನ್ನು ವಾಪಸ್ ಕಸಿದುಕೊಂಡಿದ್ದ… ಜರ್ಮನಿಯ ಬ್ಯಾಂಕೊಂದು ತನ್ನ ಸಾಲ ವಸೂಲಿ… ಭಾಗವಾಗಿ ಮಲ್ಯನ ಒಡೆತನದ ವಿಮಾನಗಳನ್ನು ಜ… ಮಾಡಿದೆಯಂತೆ. ಮುಂಬೈ ವಿಮಾನ ನಿಲ್ದಾಣದ ಆಡ… ಮಂಡಳಿ ಅಂತಿಮವಾಗಿ ನೋಟಿಸ್ ಜಾರಿ ಮಾಡಿ … ನಿತ್ಯದ ಬಾಡಿಗೆ ಮೊತ್ತವನ್ನು (60 ಲಕ್ಷ ರೂ.) ಆಯ… ದಿನವೇ ಪಾವತಿಸಬೇಕೆಂದು, ಇಲ್ಲವಾದರೆ ಮಲ್ಯನ ಫ್ಲೈಟ್… ಹಾರಾಟವನ್ನು ನಿರ್ಬಂಧಿಸುವುದಾಗಿ ಎಚ್ಚರಿಕೆ ನೀಡಿತ… ನಾಳೆ ಎಂದರೆ ಮಲ್ಯ ಬಾಡಿಗೆ ಕೊಡುತ್ತಾನೋ ಇಲ್ಲಾ … ಎತ್ತಿಬಿಡುತ್ತಾನೋ ಅಂತಾ ಅವರಿಗೆ ಅನುಮಾನ ಆಗಿತ್ತಂ… ತಿಂಗಳುಗಟ್ಟಳೆ ಸಂಬಳ ಕೊಡಲಿಲ್ಲವೆಂದು ಸಿಬ್ಬಂದಿಗಳ… ಮುಷ್ಕರ ಹೂಡಿದ್ದರು.

ಇನ್ನೂ ತಮಾಷೆಯ ಸಂಗತಿಯೆಂದರೆ, ಈ ನಷ್ಟಕ್ಕೆ… ಸರ್ಕಾರದ ದುಬಾರಿ ಇಂಧನ ಮತ್ತು ತೆರಿಗೆ ನೀತಿಗ… ಕಾರಣ ಎಂದು ಮಲ್ಯ ಹಲುಬತೊಡಗಿದ್ದ. ಹೀಗಾ… ಮಲ್ಯನ ಸಾಲವನ್ನು ತೀರಿಸಲು ಸರ್ಕಾರದ ಬೊಕ್ಕಸ… ಹಣ ಕೊಡಬೇಕೆಂಬ ಒತ್ತಾಯ ಕೂಡ ಈ ಕಂಪ… ಮುಂದಿಟ್ಟಿತ್ತು! ಆದರೆ ಈ ಪ್ರಸ್ತಾಪಕ್ಕೆ ಪ್ರಬಲ ವಿರೋ… ಬಂದ ಹಿನ್ನೆಲೆಯಲ್ಲಿ ಸದ್ಯ ಸರ್ಕಾರ ನೇರವಾಗಿ ಹ… ಒದಗಿಸಲಿಲ್ಲ, ಆದರೆ ಮಲ್ಯನನ್ನು ಕಾಪಾಡುವುದಕ್ಕಾ… ತೆರೆಮರೆಯಲ್ಲಿ ನಾನಾ ಕಸರತ್ತುಗಳು ನಡೆದವು.

ರಿಸರ್ವ್ ಬ್ಯಾಂಕ್‌ನ ಉನ್ನತ ಅಧಿಕಾರಿಗಳ ನೇತೃತ್ವದ…


ಬಿಐ ಸಮೂಹದ ಹಲವು ಬ್ಯಾಂಕ್‌ಗಳ ಉನ್ನತ ಕಾರಿಗಳು ಸಭೆ ಸೇರಿ ಒಂದು ನಿರ್ಣಯ ಕೈಗೊಳ್ಳುವಂತೆ ರ ವ್ಯವಸ್ಥೆ ಮಾಡಿತು. ಇದಕ್ಕೆ ಹಣಕಾಸು ಸಚಿವ ಬ್ ಮುಖರ್ಜಿಯ ಹಸ್ತವೂ ಕೆಲಸ ಮಾಡಿತ್ತು, ಗೆ ಸರ್ಕಾರ ನಷ್ಟದಲ್ಲಿರುವ ಕಿಂಗ್‌ಫಿಷರ್‌ನ ಸುಮಾರು 00 ಕೋಟಿ ಮೌಲ್ಯದ ಶೇರುಗಳನ್ನು ಸಾರ್ವಜನಿಕ ್ಯಂಕ್‌ಗಳು ಕೊಳ್ಳುವ ಹಾಗೆ ನೋಡಿಕೊಂಡಿತು. ದಹಾಗೆ ಬ್ಯಾಂಕ್‌ಗಳು ಪ್ರತಿ ಶೇರಿಗೆ ಪಾವತಿಸಿದ ಹಣ ರೂಪಾಯಿಯಾಗಿದ್ದರೆ ಒಂದೇ ತಿಂಗಳಿನಲ್ಲಿ ಈ ಶೇರು ಲ್ಯ ಕೇವಲ 14 ರೂಪಾಯಿಗಿಳಿದಿತ್ತು. ಇದೇನೂ ರೀಕ್ಷಿತವಾಗಿರಲಿಲ್ಲ. ಕಿಂಗ್‌ಫಿಷರ್ ಏರ್‌ಲೈನ್ಸ್ ಳುಗುತ್ತದೆಂಬುದು ಶಾಲಾ ಬಾಲಕರಿಗೂ ನಿಚ್ಚಳವಾಗಿದ್ದ ಗತಿ. ಇದು ಸರ್ಕಾರಿ ಸಾಲವನ್ನು ಗುಳುಂ ಮಾಡಲು ಡಿದ ತಂತ್ರವಷ್ಟೇ ಆಗಿತ್ತು. ಅಂತಿಮವಾಗಿ ಆ ರ್ವಜನಿಕ ಹಣ ಸಂಪೂರ್ಣ ಮುಳುಗಡೆಯಾಯ್ತು.

ಪರಿಸ್ಥಿತಿ ಹೀಗಿದ್ದರೂ, ಏನೇ ಆದರೂ ಸರಿಯೇ ಲ್ಯ ವಿಮಾನ ಹಾರಿಸೋ ತನ್ನ ಹುಚ್ಚನ್ನು ಬಿಡಲೇ ಲ್ಲ. ಎಲ್ಲೆಡೆಯಿಂದ ಒತ್ತಡ ಬಂದು ಅಂತಿಮವಾಗಿ ಕಾರವೇ ಈತನ ಏರ್‌ಲೈನ್ಸ್ ಲೈಸೆನ್ಸನ್ನು ರದ್ದು ಾಡುವವರೆಗೂ ಈತ ತನ್ನ ಹುಚ್ಚನ್ನು ಮುಂದುವರೆಸೇ ದ್ದ! ಬಹಳ ಬೇಗನೇ ಎರಡನೇ ಅತಿದೊಡ್ಡ ವಿಮಾನಯಾನ ಪನಿಯೆಂಬ ಖ್ಯಾತಿಗೆ ಒಳಗಾಗಿದ್ದ ಕಿಂಗ್‌ಫಿಷರ್ ರ್‌ಲೈನ್ಸ್‌ನ ಕತೆ ಹೀಗೆ ಮುಕ್ತಾಯಗೊಂಡಿತು.

ರಘುರಾಮ ರಾಜನ ಆಗಮನ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ್ಯಷನಲ್ ಬ್ಯಾಂಕ್ ಇತ್ಯಾದಿ ಬ್ಯಾಂಕುಗಳು ಕೊಟ್ಟಿರುವ ಲದ ಮೊತ್ತ 8159 ಕೋಟಿ ರೂಪಾಯಿ! ರಘುರಾಮ ಜನ್ ರಿಸರ್ವ್ ಬ್ಯಾಂಕಿನ ಗವರ್ನರಾಗಿ ಬಂದಾಗಿನಿಂದ ್ಯಂಕುಗಳು ತಮ್ಮ ಸಾಲಗಳನ್ನು ಹಿಂಪಡೆಯಲು, ುಖ್ಯವಾಗಿ ಮಲ್ಯನಂಥ ಭಾರೀ ಸುಸ್ತಿದಾರರ ಮೇಲೆ ಣ ಕ್ರಮ ಕೈಗೊಳ್ಳುವಂತೆ ಒತ್ತಡ ಹಾಕುತ್ತಲೇ ಬಂದಿದ್ದಾರೆ. ತಿಂಗಳ ಹಿಂದೆ ಮಲ್ಯ ಮಾಮೂಲಿಯಂತೆ ಐಷಾರಾಮಿ ರ್ತ್‌ಡೇ ಆಚರಣೆ ಮಾಡಿದಾಗ, ಸಾರ್ವಜನಿಕ ಹಣವನ್ನು ಾಪಸ್ ಕೊಡದೇ ಇಂಥಾ ಐಷಾರಾಮಿ ಮೋಜಿಗೆ ಹಣ ್ಯಯ ಮಾಡುವುದನ್ನು ಕಟುಮಾತುಗಳಲ್ಲಿ ಖಂಡಿಸಿದ್ದರು.

ಮತ್ತೊಂದು ಕಡೆ ಸ್ವರಾಜ್ ಅಭಿಯಾನದ ುಖಂಡರಾದ, ಪ್ರಸಿದ್ಧ ವಕೀಲ ಪ್ರಶಾಂತ ಭೂಷಣ್ ವರು ಕಾರ್ಪೊರೇಟ್ ಕಂಪನಿಗಳ ಇಂಥಾ ಸಾಲಗಳನ್ನು ಸೂಲಿ ಮಾಡಲು ಆದೇಶ ನೀಡುವಂತೆ ಕೋರಿ ುಪ್ರೀಂಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ೊಕದ್ದಮೆಯೊಂದನ್ನು ಹೂಡಿದ್ದಾರೆ. ಇದಕ್ಕೆ ಸ್ಪಂದಿಸಿದಂತೆ ುಪ್ರೀಂಕೋರ್ಟ್ ರಿಸರ್ವ್ ಬ್ಯಾಂಕಿಗೆ ನೋಟಿಸ್ ಜಾರಿ ಾಡಿ 500 ಕೋಟಿಗಳಿಗಿಂತಲೂ ಹೆಚ್ಚಿ ಮೊತ್ತದ ಾಲಗಾರರ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ೋರ್ಟಿಗೆ ಸಲ್ಲಿಸುವಂತೆ ಸೂಚನೆ ನೀಡಿದೆ.



ಕಳೆದ ಸೆಪ್ಟೆಂಬರ್ ವೇಳೆಗೆ ಹೀಗೆ ವಸೂಲಿಯಾಗದ ಕಾರ್ಪೊರೇಟ್ ಸಾಲಗಳ ಮೊತ್ತ ಬರೋಬ್ಬರಿ 7 ಲಕ್ಷ ಕೋಟಿಗಳನ್ನು ದಾಟಿದೆ! ಹೀಗಾಗಿ ರಿಸರ್ವ್ ಬ್ಯಾಂಕು ಒತ್ತಡ ಹಾಕುವುದೂ ಕೂಡ ಅನಿವಾರ್ಯವಾಗಿದೆ. ರಿಸರ್ವ್ ಬ್ಯಾಂಕಿನ ಒತ್ತಡಕ್ಕೆ ಒಳಗಾಗಿರುವ ಬ್ಯಾಂಕುಗಳ ನಿರ್ದೇಶಕ ಮಂಡಳಿಗಳು ಇದೀಗ ತೋರಿಕೆಯ ಕ್ರಮಗಳನ್ನಾದರೂ ತೆಗೆದುಕೊಳ್ಳಲು ಮುಂದಾಗಿವೆ. ತಾವು ಕಾರ್ಪೊರೇಟ್ ಕಂಪನಿಗಳ ವಿಷಯದಲ್ಲೂ ಕಠಿಣ ಕ್ರಮ ಕೈಗೊಳ್ಳುತ್ತೇವೆಂದು ತೋರಿಸಿಕೊಂಡು ಮುಖ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಈ ಬ್ಯಾಂಕಿಂಗ್ ವ್ಯವಸ್ಥೆಗೂ ಬಂದಿದೆ. ಹೀಗಾಗಿ ಮಲ್ಯ ಇದರ ಬಿಸಿ ಎದುರಿಸಬೇಕಾಗಿ ಬಂದಿದೆ.

ಹೆಂಗಿದ್ದ - ಹೆಂಗಾದ ಗೊತ್ತ?

ದಿನೇದಿನೇ ಕುಸಿಯುತ್ತಾ ಸಾಗಿರುವ ಮಲ್ಯನ ಸಾಮ್ರಾಜ್ಯ ಈಗ ನೆಲ ಕಚ್ಚುವ ಸ್ಥಿತಿಯಲ್ಲಿದೆ. ಯುನೈಟೆಡ್ ಸ್ಪಿರಿಟ್ಸ್‌ನಲ್ಲಿ ಈಗ ಮಲ್ಯನ ಕೈಯಲ್ಲಿರುವುದು ಕೇವಲ 4% ಷೇರು ಮಾತ್ರ. ಪ್ರಸಿದ್ಧ ಯುನೈಟೆಡ್ ಬ್ರಿವರೀಸ್-ಯುಬಿ ಕಂಪನಿಯಲ್ಲಿ 32%, ರಾಸಾಯನಿಕ ಗೊಬ್ಬರ ತಯಾರಿಸುವ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಂಪನಿಯಲ್ಲಿ 22% ಷೇರನ್ನು ಮಲ್ಯ ಹೊಂದಿದ್ದಾನೆ. ಈ ಎರಡೂ ಕಂಪನಿಗಳಲ್ಲಿ ಮಲ್ಯನಿಗೆ ಮ್ಯಾನೇಜ್‌ಮೆಂಟ್ ಕಂಟ್ರೋಲ್ ಇಲ್ಲ. ಈ ಎರಡೂ ಕಂಪನಿಗಳಲ್ಲಿರುವ ಮಲ್ಯನ ಪಾಲಿನ ಇಂದಿನ ಮಾರುಕಟ್ಟೆ ಮೌಲ್ಯ ಸುಮಾರು 7,900 ಕೋಟಿ ರೂಪಾಯಿಗಳಷ್ಟು ಎಂಬುದು ಅಂದಾಜು.

ಆದರೆ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಸಾಲಗಳಿಗೆ ಯುನೈಟೆಡ್ ಬ್ರಿವರೀಸ್ ಹೋಲ್ಡಿಂಗ್ ಕಂಪನಿ ಕಾರ್ಪೊರೇಟ್ ಗ್ಯಾರಂಟಿ ಒದಗಿಸಿದ್ದು, ಆ ಸಾಲದ ಮೊತ್ತ 8159 ಕೋಟಿಗಳು. ಈ ಬಗ್ಗೆ ಟ್ರಿಬ್ಯೂನಲ್‌ನಲ್ಲಿ ದಾವೆಯ ವಿಚಾರಣೆ ನಡೆದಿದೆ.

ಮಲ್ಯನ ಒಡೆತನದಲ್ಲಿದ್ದ ಯುಬಿ ಸಿಟಿ ಈಗಾಗಲೇ ಮಾರಾಟವಾಗಿದೆ. ಮಲ್ಯ ಆಸ್ಪತ್ರೆಯನ್ನು ಆದಿಕೇಶವುಲು ಖರೀದಿಸಿ ಬಹಳ ವರ್ಷಗಳೇ ಆಯ್ತು. ಇತರೆ ಕೆಲವು ಸಣ್ಣಪುಟ್ಟ ಆಸ್ತಿಗಳನ್ನು ಮಾರಿಕೊಂಡಿದ್ದೂ ಆಗಿದೆ.

ಹೀಗಾಗಿಯೇ ಬ್ಯಾಂಕುಗಳು ಡಯಾಜಿಯೋ ಮಾರಾಟದಿಂದ ಬರುವ ಹಣವನ್ನು ತಮಗೆ ಕೊಡಬೇಕೆಂದು ಕೋರ್ಟ್‌ಗಳ ಮೊರೆ ಹೋಗಿವೆ. ವಿಪರ್ಯಾಸ ಏನೆಂದರೆ ಈ ಮೊತ್ತ ಬ್ಯಾಂಕುಗಳಿಗೆ ಬರಬೇಕಿರುವ ಮೊತ್ತದ ಕೇವಲ 6% ಮಾತ್ರ. ಈ ಹಿಂದೆ ಷೇರುಗಳನ್ನಾಗಿ ಪರಿವರ್ತಿಸಿದ ಮೊತ್ತ, ಬಡ್ಡಿ ಮನ್ನಾ ಮಾಡಿದ ಮೊತ್ತ ಎಲ್ಲವನ್ನೂ ಲೆಕ್ಕಹಾಕಿದರೆ ಡಯಾಜಿಯೊದಿಂದ ಬರುವ ಪೂರ್ತಿ ಮೊತ್ತ 515 ಕೋಟಿಯನ್ನು ಬ್ಯಾಂಕುಗಳೇ ಪಡೆದುಕೊಂಡರೂ ಅದು ಕೇವಲ 4% ಗೆ ಸಮ. ಇದು ನಮ್ಮ ಬ್ಯಾಂಕುಗಳು, ಸರ್ಕಾರಗಳು ಕಾರ್ಪೊರೇಟ್ ಧಣಿಗಳೊಂದಿಗೆ ವ್ಯವಹರಿಸುತ್ತಿರುವ ರೀತಿ.

ಬ್ಯಾಂಕುಗಳ ಕತೆ ಹೀಗಾದರೆ ಇನ್ನು ಕಿಂಗ್‌ಫಿಷರ್ ನಂಬಿ ಬಂಡವಾಳ ಹೂಡಿದ್ದ ಷೇರುದಾರರ ಕತೆಯನ್ನಂತೂ ಕೇಳೋರಿಲ್ಲವಾಗಿದೆ. ಈ ಬ್ರಾಂಡ್ ವ್ಯಾಲ್ಯೂ ನಂಬಿ ತಮ್ಮ ಉಳಿತಾಯದ ಹಣ ಹೂಡಿದ್ದ 56000 ಮಧ್ಯಮ ವರ್ಗದ ಷೇರುದಾರರ ಕೈಗೆ ಚಿಪ್ಪು ಕೊಟ್ಟು ಮಲ್ಯ ಪರಾರಿಯಾಗುತ್ತಿದ್ದಾನೆ.

ಮತ್ತೊಂದು ವಿಷಯವನ್ನು ನಾವಿಲ್ಲಿ ಗಮನಿಸಲೇಬೇಕು.

ಇಷ್ಟೆಲ್ಲಾ ಏನೇ ಪ್ರತಿಕೂಲ ಬೆಳವಣಿಗೆಗಳು ನಡೆಯುತ್ತಿದ್ದರೂ ವಿಜಯ್ ಮಲ್ಯನ ಮೋಜು ಮಸ್ತಿಯ ಚಟುವಟಿಕೆಗಳು ಮಾತ್ರ ನಿಂತಿಲ್ಲ; ಅವು ನಿಲ್ಲುವುದೂ ಇಲ್ಲ, ಮಲ್ಯನ ಜಾಯಮಾನವೇ ಅಂಥದ್ದು. ಆತ ಇಂದಿಗೂ 450 ಕೋಟಿ ಬೆಲೆಬಾಳುವ ಐಷಾರಾಮಿ ದೋಣಿಯ ಒಡೆಯ. ಸುಮಾರು 610 ಕೋಟಿ ಮೌಲ್ಯದ ಎಫ್‌ಒನ್ ರೇಸಿಂಗ್ ಟೀಮ್‌ನ ಮಾಲಿಕ. 700 ಕೋಟಿ ಮೌಲ್ಯದ ರಾಯಲ್ ಚಾಲೆಂಜರ್ಸ್ ಕ್ರಿಕೆಟ್ ಟೀಮಿನ ಮಾಲಿಕ. ಇವುಗಳಲ್ಲದೇ ಆತನ ಸ್ವಿಮ್‌ಸೂಟ್ ಕ್ಯಾಲೆಂಡರ್ ಶೂಟಿಂಗ್‌ಗಾಗಿ ಮಾಡೆಲ್‌ಗಳ ಶೋಧ ಇನ್ನೂ ನಿಂತಿಲ್ಲ. ಕುದುರೆ ರೇಸ್‌ಗಾಗಿ ಸಾಕಿಕೊಂಡಿರುವ ನೂರಾರು ಕೋಟಿ ಬೆಲೆ ಬಾಳುವ ರೇಸ್ ಕುದುರೆ ದಂಧೆಯೂ ಎಗ್ಗಿಲ್ಲದೇ ಸಾಗಿದೆ.

ಮಲ್ಯನ ವಕಾಲತ್ತು

ಕೋರ್ಟಿನಿಂದ ಇಂಥದೊಂದು ಆದೇಶ ಹೊರಬಿದ್ದಿದ್ದೇ ತಡ, ಮಲ್ಯ ಸಾಹೇಬರು ಮಾಧ್ಯಮಗಳಿಗೆ ಒಂದು ಬಹಿರಂಗ ಪತ್ರ ಬರೆದು ಈ ವ್ಯವಸ್ಥೆಗೆ ಸವಾಲು ಎಸೆದಿದ್ದಾರೆ. ಅದರ ಸಾರಾಂಶ ಹೀಗಿದೆ.

ಕಿಂಗ್‌ಫಿಷರ್ ಏರ್‌ಲೈನ್ಸ್‌ನಲ್ಲಿ ಉಂಟಾದ ನಷ್ಟಕ್ಕೆ ಮ್ಯಾಕ್ರೊ ಎಕನಾಮಿಕ್ ಕಾರಣಗಳು ಮತ್ತು ಸರ್ಕಾರದ ನೀತಿಗಳೇ ಕಾರಣ. ಈ ಬಗ್ಗೆ ಎಸ್‌ಬಿಐ ಬ್ಯಾಂಕಿಗೆ ಸ್ಪಷ್ಟ ತಿಳಿವಳಿಕೆ ಇತ್ತು.

ಸಾರ್ವಜನಿಕ ಬ್ಯಾಂಕುಗಳಿಗೆ ವಸೂಲಿಯಾಗದ ಸಾಲದ ಮೊತ್ತ (ಎನ್‌ಪಿಎ) 11 ಲಕ್ಷ ಕೋಟಿಗಳು; ನನಗಿಂತ ಅದೆಷ್ಟೋ ಪಟ್ಟು ಹೆಚ್ಚು ಮೊತ್ತದ ಸಾಲ ಬಾಕಿ ಉಳಿಸಿಕೊಂಡಿರುವವರ ತಂಟೆಗೆ ಹೋಗದೆ ಕೇವಲ ನನ್ನನ್ನು ಮಾತ್ರ ಬಲಿಪಶು ಮಾಡಲಾಗುತ್ತಿದೆ.

ನನಗೆ ದೇಶ ಬಿಟ್ಟುಹೋಗುವ ಯಾವ ಉದ್ದೇಶವೂ ಇಲ್ಲ. ಎಲ್ಲಕ್ಕಿಂತ ಮೊದಲಿಗೆ ನಾನು ಕಳೆದ 28 ವರ್ಷಗಳಿಂದ ಅನಿವಾಸಿ ಭಾರತೀಯನಾಗಿದ್ದು ದೇಶ ಬಿಟ್ಟು ಹೊರಹೋಗುತ್ತೇನೆಂಬ ವಾದ ನನಗೆ ಅನ್ವಯಿಸುವುದಿಲ್ಲ. ನಾನು ಇಂಗ್ಲೆಂಡ್‌ನಲ್ಲಿರುವ ಕುಟುಂಬ ಮತ್ತು ಮಕ್ಕಳೊಂದಿಗೆ ಹೆಚ್ಚಿನ ಸಮಯ ಕೊಡಲು ನಿರ್ಧರಿಸಿದ್ದೇನೆ ಅಷ್ಟೆ.

ಡಯಾಜಿಯೋ ಕಂಪನಿ ನನಗೆ ಹಣ ಕೊಡುತ್ತಿರುವುದು ನಾನು ಮದ್ಯದ ಉದ್ಯಮಕ್ಕೆ 5 ವರ್ಷಗಳ ಕಾಲ ವಿದಾಯ ಹೇಳುತ್ತೇನೆ ಎಂಬ ಷರತ್ತಿಗಾಗಿ. ಆದ್ದರಿಂದ ಆ ಹಣವನ್ನು ಕೇಳಲು ಬ್ಯಾಂಕುಗಳಿಗೆ ಯಾವುದೇ ಅಧಿಕಾರವಿಲ್ಲ.

ಈ ದೇಶದ ಮಾಧ್ಯಮಗಳು ಟಿಆರ್‌ಪಿ ವ್ಯಾಮೋಹದಲ್ಲಿ ನನ್ನ ವಿರುದ್ಧ ಅಪಪ್ರಚಾರಕ್ಕಿಳಿದು, ಸತ್ಯವನ್ನು ಮರೆಮಾಚಿ ಅರ್ಧಸತ್ಯವನ್ನು ಪ್ರಚಾರ ಮಾಡುತ್ತಿವೆ.

ಆತ್ಮೀಯ ಓದುಗರೇ,

ಮಲ್ಯ ಹೇಳುತ್ತಿರುವ ಮಾತಿನ ಬಗ್ಗೆ ಒಮ್ಮೆ ಗಂಭೀರವಾಗಿ ಆಲೋಚಿಸಿದರೆ ಮತ್ತಷ್ಟು ಗಂಭೀರ ಸಮಸ್ಯೆಗಳು ಎದುರಾಗುತ್ತವೆ. ಆತ ಬಹಿರಂಗಪಡಿಸುತ್ತಿರುವ ಮಾತಿನ ಜಾಡು ಹಿಡಿದು ಹೊರಟರೆ ಇನ್ನೂ ಏನೆಲ್ಲಾ ಕರ್ಮಕಾಂಡಗಳು ಹೊರಬೀಳಬಹುದು? ಮಲ್ಯನಿಗಿಂತಲೂ ಅದೆಷ್ಟೋ ಪಟ್ಟು ಹೆಚ್ಚು ಹಣ ನುಂಗಿ ಹಾಕಿರುವವರು ಯಾರ್‍ಯಾರು? ಒಟ್ಟು 11 ಲಕ್ಷ ಕೋಟಿಯನ್ನು ವಸೂಲಿ ಮಾಡಿ, ಅದನ್ನು ರೈತರ, ಬಡವರ ಏಳ್ಗೆಗಾಗಿ, ಸಾರ್ವಜನಿಕ ಕಾರ್ಯಗಳಿಗಾಗಿ ಬಳಸಿದರೆ ಈ ದೇಶ ಸುಭಿಕ್ಷವಾಗುವುದರಲ್ಲಿ ಯಾರಿಗಾದರೂ ಸಂದೇಹವಿದೆಯೆ?

ಆದರೆ ಇಂದಿನ ಸರ್ಕಾರಗಳು ಅಂಥ ಕಾರ್ಯಕ್ಕೆ ಮುಂದಾಗುತ್ತವೆ ಎಂದು ಹೇಳುವ ಧೈರ್ಯ ಯಾರಿಗಿದೆ?


■ ದೊಡ್ಡಿಪಾಳ್ಯ ನರಸಿಂಹಮೂರ್ತಿ


7 ◂◂ 'ಮುಸ್ಲಿಂ ಬಾಂಬ್'

ಲ್ಲಿ ತನಕದ ಬಿಜೆಪಿ ಬಿಡಾರದಲ್ಲಿ ಅನಂತ್ಮಾಣಿ ಹಗುರವಾಗಿ ೋದ. ಜಿಪಂ-ತಾಪಂ ಎಲೆಕ್ಷನ್‌ನಲ್ಲಿ ಆತನ ಬೆಂಬಾಲಕರಿ ್ಯಾರಿಗೂ ಟಿಕೆಟ್ ಸಿಗದಂತಾಯ್ತು. ಸಿಟ್ಟಿಗೆದ್ದ ಅನಂತ್ಮಾಣಿ ಾರ್ಟಿ ಹಿರಿಯರಿಗೇ ಕುರ್ಚಿ ಎತ್ತಿ ಹೊಡೆಯಲು ಹೋಗಿ ಾಫಿರ್' ಅನ್ನಿಸಿಕೊಂಡ. ಆರೆಸ್ಸೆಸ್ ಮತ್ತು ಹಿಂದೂ ರಿವಾರದಲ್ಲೂ ಅನಂತ್ಮಾಣಿಯ ದುಡ್ಡು ಮಾಡುವ ಿಂದೂತ್ವದ ಕಂಪನಗಳನ್ನೆಬ್ಬಿಸಿತು. ಸ್ವಯಂಕೃತಾಪರಾಧದಿಂದ ಅನಂತ್ಮಾಣಿ ಪಾರ್ಟಿಯೊಳಗೆ-ಜನರ ನಡುವೆ ಕೀಳಾಗಿ ೋದ. ಆರೋಗ್ಯ ಸರಿಯಿಲ್ಲದಿದ್ದರಿಂದ ಕೆಲಸ ಾಡಲಾಗಲಿಲ್ಲ ಎಂದು ಮಾಣಿ ಅದೆಷ್ಟೇ ಪರಿಪರಿಯಾಗಿ ಲವತ್ತುಕೊಂಡರೂ ಯಾರೂ ನಂಬದಂತಾಯ್ತು.

ಅಪ್ಪೂ ಧಿಕ್ಕಿನಿಂದ ಡ್ಯಾಮೇಜು ಮಾಡಿಕೊಂಡ ಅನಂತ್ಮಾಣಿಗೆ ಆರೋಗ್ಯವೂ ಕೈಕೊಟ್ಟಿದ್ದರಿಂದ ವೈರಿಗಳನ್ನು ಎದುರಿಸುವ ಚೈತನ್ಯವೇ ಇಲ್ಲದಾಯ್ತು. ಇದೇ ಹೊತ್ತಿಗೆ ರಿಯಾಗಿ ಪಿಎಂ ಮೋದಿ ಮಹಾತ್ಮ ಸಂಪುಟ ಸರ್ಜರಿ ಾಡುವ ತೆರೆಮರೆ ಕಸರತ್ತಿಗೆ ಕೈಹಾಕಿದ್ದು ಅನಂತನ ದ್ದೆಗೆಡಿಸಿಬಿಟ್ಟಿತು. ಜೀವನದಲ್ಲಿ ಒಮ್ಮೆ ಮಂತ್ರಿಯಾಗಿ ಾಸೆಯಾಸೆ ಈಡೇರಿಸಿಕೊಳ್ಳಬೇಕೆಂಬ ಕಟಿಪಿಟಿಯಲ್ಲಿರುವ ಅನಂತ್ಮಾಣಿಗೆ ಖರಾಬಾದ ಇಮೇಜ್ ಗಂಡಾಂತರಕಾರಿ ಾಯ್ತು. ಮೋದಿಗೆ ತನ್ನ ಬಗ್ಗೆ ಹೋಗಿರುವ ದೂರುಗಳನ್ನು ರಿದೂಗಿಸಲು ಅನಂತ್ಮಾಣಿ ಕಮ್ಯುನಲ್ ಪಾತಕಕ್ಕೆ ೈಹಾಕಿಬಿಟ್ಟ. ಮೋದಿ ಚಿತ್ತ ಸೆಳೆಯಲು ಸಾಬರನ್ನು ಬೈದು ುತೀಯ ಭಾಷ್ಣದಿ ಎಬ್ಬಿಸುವುದೊಂದೇ ದಾರಿಯಾಗಿ ಂಡಿತು ಮುಠಾಳ ಅನಂತ್ಮಾಣಿಗೆ!

ಎರಡು ಉದ್ದೇಶ ಇಟ್ಟುಕೊಂಡು ಅನಂತ್ಮಾಣಿ ಕಳೆದ ಬ್ರುವರಿ 28ರಂದು ಶಿರಸಿಯಲ್ಲಿ ಪತ್ರಿಕಾಗೋಷ್ಠಿ ಕರೆದಿದ್ದ. ಂದು, ಸಾಬರನ್ನು ಹೀಯಾಳಿಸಿ ಬೆಂಕಿ ಬದ್ದರೆ ಮೈಕಾಯಿಸಿಕೊಳ್ಳುವುದು, ಮತ್ತೊಂದು ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಕೇಂದ್ರ ಬಜೆಟ್‌ನಲ್ಲಿ ಗ್ರೀನ್‌ಸಿಗ್ನಲ್ ಸಿಗಲು ತಾನೇ ಕಾರಣವೆಂದು ಜಾಗಟೆ ಬಾರಿಸೋದಾಗಿತ್ತು. ಸ್ವ-ಪಕ್ಷದ ವೈರಿ ಕಂ ಪಕ್ಕದ ಧಾರವಾಡದ ಚೆಡ್ಡಿ ಎಂಪಿ ಪ್ರಹ್ಲಾದ್ ಜೋಶಿ ಅಂಕೋಲ-ಹುಬ್ಬಳ್ಳಿ ರೈಲು ಮಾರ್ಗಕ್ಕೆ ತಾನೇ ಕಾರಣವೆಂದು ಬಿಂಬಿಸಿಕೊಂಡಿದ್ದು ಅನಂತನನ್ನು ಹತಾಶನಾಗಿಸಿಬಿಟ್ಟಿತು. ಜನರ ಮುಂದೆ ಮುಖ ತೋರಿಸಲು ಇದ್ದ ಒಂದೇ ಒಂದು ಅವಕಾಶವನ್ನೂ ಜೋಶಿ ಅಪಹರಿಸಿದ್ದು ಅನಂತ್ಮಾಣಿಯನ್ನು ಕಂಗೆಡಿಸಿಬಿಟ್ಟಿತ್ತು.


ಪರಮೇಶ್ವರ್


ಸಿದ್ದು

ಹೀಗಾಗಿ ಅವಸರವಸರವಾಗಿ ಅನಂತ್ಮಾಣಿ ಕರೆದ ಪತ್ರಿಕಾಗೋಷ್ಠಿಗೆ ನೆಪ ಹುಬ್ಬಳ್ಳಿ-ಅಂಕೋಲಾ ರೈಲುಮಾರ್ಗದ ಸಾಧನೆ ಆಗಿದ್ದರೂ ರಹಸ್ಯ ಅಜೆಂಡಾ ಮುಸ್ಲಿಮರ ಮೂದಲಿಸಿ ಕೋಮು ಕಲಹದ ವಾತಾವರಣ ಹುಟ್ಟು ಹಾಕುವುದಾಗಿತ್ತು. ತನ್ಮೂಲಕ ಕೇಂದ್ರ ಮಂತ್ರಿಗಿರಿಗಾಗಿ ಕರಾಮತ್ತು ನಡೆಸೋದು ಅನಂತ್ಮಾಣಿಯ ಟ್ರಿಕ್ಕಾಗಿತ್ತು. "..... ನಾನು ಇಪ್ಪತ್ತು ವರ್ಷದಿಂದ ಹೇಳ್ತಾ ಬಂದಿದ್ದೇನೆ.... ಜಗತ್ತಿನಲ್ಲಿ ಎಲ್ಲೀವರೆಗೆ ಇಸ್ಲಾಂ ಧರ್ಮ ಇರ್ತದೋ ಅಲ್ಲೀವರೆಗೆ ಭಯೋತ್ಪಾದನೆ ಇದ್ದೇ ಇರ್ತದೆ.... ಜಗತ್ತಿನ ನೆಮ್ಮದಿಗೆ ಇಸ್ಲಾಮ್ ಬಾಂಬ್...." ಎಂದು ಹಲುಬಿಬಿಟ್ಟ ಅನಂತ್ಮಾಣಿ. ಅಷ್ಟಕ್ಕೆ ಈತನ ನೀಚತನ ನಿಲ್ಲಲಿಲ್ಲ "..... ನಿಮಗೆ ಸ್ವಾತಂತ್ರ್ಯ ಇದ್ರೆ ನನ್ನ ಹೇಳಿಕೆ ಯಥಾವತ್ ಪ್ರಸಾರ ಮಾಡ್ರಿ.... ಹಾಗೇ ಪ್ರಕಟ ಮಾಡ್ರಿ....." ಎಂದು ಮಾಧ್ಯಮದವರಿಗೂ ಕಿಚಾಯಿಸಿದ್ದಾನೆ ಈ ಹಿಂದೂ ಭಯೋತ್ಪಾದಕ!

ಹಿಂದೂತ್ವದ ಹಿಕಮತ್ತಿನಿಂದ ರಾಜಕಾರಣ ಮಾಡುವ ಕುಕಲೆ ಕರಗತ ಮಾಡಿಕೊಂಡಿರುವ ಅನಂತ್ಮಾಣಿಯ ಒಳಉದ್ದೇಶ ಸಫಲವಾಗಿದೆ. ಸಾಬರ ಮತ್ತು ಇಸ್ಲಾಂ ಅವಹೇಳನ ಮಾಡಿದ ಆತ ರಾಷ್ಟ್ರೀಯ ಮಟ್ಟದಲ್ಲಿ ಕೊಳಕು ಸುದ್ದಿ ಕೇಂದ್ರವಾಗಿದ್ದಾನೆ. ಅಸಹಿಷ್ಣುತೆ, ಭೀಭತ್ಸ ಹಿಂದೂತ್ವ ಮುಸ್ಲಿಮ್ ವಿರೋಧಿ ಹೇಳಿಕೆ ಕೊಡುವ ಬಿಜೆಪಿಯ ಸಂಸದ-ಮಂತ್ರಿಗಳ ಆತಂಕವಾದಿಗಳ ಮುಂಚೂಣಿ ಸಾಲಿಗೆ ಅನಂತ್ಮಾಣಿ ಬಂದು ಕುಂತಿದ್ದಾನೆ. ಅನಂತ್ಮಾಣಿಯ ಆಂತರಿಕ ಯುದ್ಧ ಪ್ರಚೋದಿಸುವಂಥ ಮಾತುಗಾರಿಕೆ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿದೆ. ತನ್ಮೂಲಕ ಅನಂತ್ಮಾಣಿ ಎಂಬ ದಂಡಪಿಂಡವೊಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಜೆಪಿ ಪಾರ್ಟಿಯ ಎಂಪಿಯಾಗಿದೆ ಎಂಬುದು ಸಾಕ್ಷಾತ್ ಮೋದಿಗೂ ಗೊತ್ತಾಗಿದೆ.

ಅನಂತ್ಮಾಣಿಗೆ ಮಂತ್ರಿಗಿರಿ ಲಕ್ ಕುದುರುವುದೋ ಗೊತ್ತಿಲ್ಲ, ಆದರೆ ಶಿರಸಿ ಪೊಲೀಸ್ ಠಾಣೆಯಲ್ಲಿ ಮಾಣಿ ಮೇಲೆ ಕೇಸಾಗಿದೆ. ಮುಸ್ಲಿಮ್ ಸಮುದಾಯ ಪ್ರತಿಭಟನೆಗೆ ಇಳಿದು ಉತ್ತರ ಕನ್ನಡದ ಬಂದ್‌ಗೆ ಕರೆಯೂ ಕೊಟ್ಟಿತ್ತು. ದೇಶದಾದ್ಯಂತ ಮಾಣಿ ಬಂಧಿಸುವಂತೆ ಒತ್ತಾಯದ ಕೂಗೂ ಎದ್ದಿದೆ. ಆದರೆ ಸಿಎಂ ಸಿದ್ದು ಸರ್ಕಾರ, ಪಿಎಂ ಮೋದಿ ಆಡಳಿತ ಮೂರೂ ಮುಚ್ಚಿಕೊಂಡು ಕೂತಿದೆ. ಮಾಣಿ ಘಾತಕ ಮಾಡಿಯೂ ನಿರಾತಂಕವಾಗಿ ಅಂಡಲೆಯುತ್ತಿದ್ದಾನೆ. ಮಾಣಿ ಮಾಡಿದ ಅಪರಾಧ ಸಾಮಾನ್ಯರು ಮಾಡಿದ್ದರೆ ಪೊಲೀಸ್ ವ್ಯವಸ್ಥೆ ಸುಮ್ಮನಿರುತ್ತಿತ್ತಾ? ಧರ್ಮೋನ್ಮಾದದ ರಕ್ಕಸರಿಗೊಂದು ಕಾನೂನು; ಅಸಹಾಯಕರಿಗೊಂದು ಕಾನೂನು ಈ ನೆಲದಲ್ಲಿದೆಯಾ?

ಅಂತರ್‌ಯುದ್ಧ ಘೋಷಣೆ ದೇಶದ್ರೋಹ. ಇದು ನರಮೇಧಕ್ಕೆ ಕರೆ ಕೊಟ್ಟಷ್ಟೇ ಗುರುತರ ಅಪರಾಧ! ಜಗತ್ತಿನ ಮುಸ್ಲಿಮ್ ಸಮುದಾಯವನ್ನೇ ಮೂಲೋತ್ಪಾಟನೆ ಮಾಡಬೇಕೆಂದು ಕರೆ ಕೊಟ್ಟಿರುವ ಅನಂತ್ಮಾಣಿ ಜೆಎನ್‌ಯುನಲ್ಲಿ ಚೆಡ್ಡಿ ಪ್ರಚೋದಿತರು ದೇಶವಿರೋಧಿ ಘೋಷಣೆ ಕೂಗಿದ್ದಕ್ಕಿಂತಲೂ ಗಂಭೀರ ಪಾತಕ!! ಸಂವಿಧಾನದ ಮೇಲೆ ಪ್ರಮಾಣ ಮಾಡಿ ಸಂಸದನಾದ ಮಾಣಿ ಸಂವಿಧಾನದ ಕಲಂ 25 ಮತ್ತು 26 ಧಿಕ್ಕರಿಸಿದಂತಾಗಿದೆ. ಆಂತರಿಕಯುದ್ಧ ಘೋಷಣೆಯ ಯುದ್ಧಾಪರಾಧಿಯೆಂದು ಅನಂತ್ಮಾಣಿಯನ್ನು ಪರಿಗಣಿಸಬೇಕಾಗಿದೆ. ಯುದ್ಧಾಪರಾಧಿ ಕಾನೂನಿನಂತೆ ಮಾಣಿಯನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕಿದೆ!


ಈ ತಾಕತ್ತು-ಬದ್ಧತೆ ಸ್ವಯಂಘೋಷಿತ "ಸಿಹಿಂಪ್ನ ಸಂತ" ಮೋದಿ ಮಾಮನಿಗೆ ಇದೆಯಾ?! ಒಂದು ಜನಸಮೂಹವನ್ನೇ ಸಂಹಾರ ಮಾಡುವ ರಕ್ತಪಿಪಾಸು ಸೈತಾನ ಈ ನಾಡಲ್ಲಿರುವ ಅರಿವು ಗೃಹಮಂತ್ರಿ ಪರಮ್ ಸಾಹೇಬರಿಗಿದೆಯಾ?

■ ನವುಪ





ಬಲಿಯಾದ ಟಿವಿ ನಟಿ ಶ್ರುತಿ



ನಟಿ ಶ್ರುತಿಯ ನಿಗೂಢ ಸಾವು

ಮಹಿಳಾ ದಿನಾಚರಣೆಯೇನೋ ಅದ್ದೂರಿ ಆರ್ಭಟದಿಂದಲೇ ಪರಿಸಮಾಪ್ತಿಗೊಂಡಾಯ್ತು, ಮಹಿಳಾ ಸಮಾನತೆ, ದೌರ್ಜನ್ಯಗಳ ಭಾಷಣದ ಗದ್ದಲದೊಳಗೆ ಈ ನಿರ್ಗತಿಕ ನಟಿಯೊಬ್ಬಳ ಆರ್ತನಾದವೂ ಮುಚ್ಚಿಹೋಯಿತು. ಯಾವುದೋ ದಿನಪತ್ರಿಕೆಯೊಂದರ ಯಾವುದೋ ಮೂಲೆಯಲ್ಲಿ ಕ್ರೈಂ ಬೀಟಿನ ತುಣುಕೊಂದರಂತೆ ಸರಿದು ಹೋದ. ಟೀವಿ ನಟಿ ಶ್ರುತಿಗೆ ಸಾಯುವ ವಯಸ್ಸಿರಲಿ, ಹರಿಹರೆಯದ ಪ್ರಥಮ ಹೆಜ್ಜೆಯೂ ಪೂರ್ಣಗೊಂಡಿರಲಿಲ್ಲ, ಮುದ್ದಾದ ಮಗು, ದಿಕ್ಕು ತೋಚದೆ ಕೂತ ಪತಿ, ಕಣ್ಣೀರಿಡುವ ತಮ್ಮ ಮತ್ತು ಆಕಾಶ ದಿಟ್ಟಿಸುತ್ತಿರುವ ವೃದ್ಧ ತಂದೆತಾಯಿಗಳ ಮೂಕವೇದನೆಗೆ ಯಾವ ಮಹಿಳಾ ಸಂಘಟನೆಗಳಾಗಲಿ, ಮಹಿಳಾ ಆಯೋಗವಾಗಲಿ ಓಗೊಡಲೇ ಇಲ್ಲ.

ಅಷ್ಟಕ್ಕೂ ಶ್ರುತಿ ಎಂಬ ಟೀವಿ ನಟಿಯ ನಿಗೂಢ ಸಾವಿನ ಬಗ್ಗೆ ಪೊಲೀಸರೇ ಬಾಯಿಬಿಡುತ್ತಿಲ್ಲ. ಕನ್ನಡದ ಸುವರ್ಣ, ಕಸ್ತೂರಿ, ಉದಯ, ಕಲರ್, ಝೀ ಕನ್ನಡ ಇತ್ಯಾದಿ ಮನೋರಂಜನಾ ಚಾನಲ್ಲುಗಳಲ್ಲಿ ಪ್ರತಿನಿತ್ಯ ಪ್ರಸಾರವಾಗುವ ಮೆಗಾ ಸೀರಿಯಲ್ಲುಗಳ ಮಾಯಾಲೋಕದೊಳಗೆ ಕರಗಿಹೋದ ಕನಸುಗಳೆಷ್ಟೋ ಕಮರಿಹೋದ ಕುಸುಮಗಳೆಷ್ಟೋ? ಟೀವಿ ಸೀರಿಯಲ್ಲುಗಳ ಹೀರೋಯಿನ್ನುಗಳು, ಅವರ ಗೆಳತಿಯರ ಪಾತ್ರಗಳು, ಪೋಷಕ ನಟಿಯರು- ಹೀಗೆ ಡಜನ್ನುಗಟ್ಟಲೆ ಟೀವಿ ಧಾರಾವಾಹಿಗಳ ಅಸಂಖ್ಯ ಮಹಿಳಾ ಪಾತ್ರಗಳೂ ಅವುಗಳ ಪಾತ್ರಧಾರಿಗಳೂ ಮತ್ತವರ ಸುತ್ತಣ ಕಾರ್ಯಜಾಲ ಕೇವಲ ಕಲೆ, ನಟನೆ, ಕಲಾವಿದರು ಎಂಬಷ್ಟರ ಮಟ್ಟಿಗಷ್ಟೇ ಮುರಿದುಹೋಗುವಂತಿದ್ದರೆ ಈ ಶ್ರುತಿಯೆಂಬ ಯುವತಿಯ ಜೀವಕ್ಕೆ ಇಂಥಾ ದುರ್ಗತಿ ಯಾಗುತ್ತಿತ್ತೆ?



ಆನಂದ್ ರೆಡ್ಡಿ



ರವಿಗರಣಿ



ಆರೋಪಿ ಶ್ರೀಕಾಂತ್


ಇನ್ನೂ 25ರ ಹರೆಯದ ಶ್ರುತಿ ದೊಡ್ಡ ನಟಿಯೇನಲ್ಲ. ಯಾವುದೇ ಧಾರಾವಾಹಿಯೊಂದರ ಮುಖ್ಯ ಪಾತ್ರವೂ ಅಲ್ಲ. ಸುವರ್ಣ ಟೀವಿಯಲ್ಲಿ ಪ್ರತಿ ರಾತ್ರಿ ಒಂಭತ್ತಕ್ಕೆ ಪ್ರಸಾರವಾಗುವ 'ಅವನು ಮತ್ತು ಶ್ರಾವಣಿ' ಸದ್ಯದ ಧಾರಾವಾಹಿಗಳ ಪೈಕಿ ಖ್ಯಾತಿ ಮತ್ತು ಜನಪ್ರಿಯತೆಯ ಲೆಕ್ಕದಲ್ಲಿ ಮಂಚೂಣಿಯಲ್ಲಿದೆ. ಇದರ ಹೀರೋ ಹೆಸರು ದರ್ಶನ್. ಹೊಸಬ. ಹೀರೋಯಿನ್ ಚೈತ್ರ. ಈಕೆಯೂ ಟೀವಿ ರಂಗಕ್ಕೆ ಹೊಸ ಮುಖವೆ. ಆದರೆ ಹೆಸರಿರುವುದು ಧಾರಾವಾಹಿ ನಿರ್ದೇಶಕ ರವಿಗರಣಿಗೆ. ಒಂದರ ಮೇಲೊಂದು ಯಶಸ್ವಿ ಮೆಗಾ ಸೀರಿಯಲ್ಲುಗಳನ್ನು ಕೊಡುತ್ತಲೇ ಬಂದ ರವಿಗರಣಿ 'ಅವನು ಮತ್ತು ಶ್ರಾವಣಿ'ಯನ್ನು ವಿಪರೀತ ಮಹತ್ವಾಕಾಂಕ್ಷೆಯಿಟ್ಟೇ ಚಿತ್ರಿಸುತ್ತಿರುವುದು ಅದರ ವಿಶಿಷ್ಟ ಕಥಾವಸ್ತುವಿನ ಕಾರಣಕ್ಕೆ.

ಶ್ರಾವಣಿಯಲ್ಲ ಶ್ರುತಿ

ಈ ಧಾರಾವಾಹಿಯ ವೈಶಿಷ್ಟ್ಯವೆಂದರೆ ಮಗು ಪಾತ್ರದಲ್ಲಿ ಅಭಿನಯಿಸುತ್ತಿರುವ ಬೇಬಿ ದೀಕ್ಷಾಳೇ ಇದರ ಮುಖ್ಯ ಆಕರ್ಷಣೆಯಂತಿರುವುದು. ಜೊತೆಗೆ ನರ್ಸ್ ಜಯಲಕ್ಷ್ಮಿ ಕೂಡ ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿರುವುದು. ವಿಲಕ್ಷಣ ಮಾನವೀಯ ಸಂಬಂಧಗಳೆಲ್ಲ ಚಿತ್ರವಿಚಿತ್ರ ಪರಿಸ್ಥಿತಿಗೆ ಸಿಲುಕಿ ತಲ್ಲಣಿಸುವ ಕಥಾವಸ್ತುವಿನ ಕಾರಣಕ್ಕೇ 'ಅವನು ಮತ್ತು ಶ್ರಾವಣಿ' ವಿಶಿಷ್ಟವೆನಿಸುತ್ತದೆ. ಇದರಲ್ಲಿ ಶ್ರುತಿಯದ್ದು ಹೀರೋಯಿನ್ ಗೆಳತಿಯ ಪಾತ್ರ. ಮಿಕ್ಕಂತೆ ಕನ್ನಡದ ಬೇರೆ ಯಾವ್ಯಾವ ಧಾರಾವಾಹಿ ಅಥವಾ ಸಿನಿಮಾಗಳಲ್ಲಿ ನಟಿಸಿದ್ದಳೋ ಬಲ್ಲವರಿಲ್ಲ. ಹಾಗೊಮ್ಮೆ ನಟಿಸಿದ್ದರೂ ಅದು ಹೇಳಿಕೊಳ್ಳುವಂಥ ಪಾತ್ರಗಳೇನಲ್ಲ, ದಿನವೊಂದಕ್ಕೆ ಐನೂರೋ ಸಾವಿರವೋ ಹೆಚ್ಚೆಂದರೆ ಎರಡು ಸಾವಿರ ರೂಪಾಯಿಗಳ ಕೂಲಿ ಹುಟ್ಟುವ ಇಂಥ ಟೀವಿ ಸೀರಿಯಲ್ಲುಗಳ ಪಾತ್ರಗಳ ತೂಕದ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ.


ಪ್ರತಿನಿತ್ಯ ಗಾರ್ಮೆಂಟ್ ಕೆಲಸಕ್ಕೋ, ಸೇಲ್ಸ್‌ಗರ್ಲ್‌ಗಳಾಗೋ ಅಥವಾ ಐಷಾರಾಮಿ ಮಾಲುಗಳಲ್ಲಿ ಕೌಂಟರ್‌ಗಳಲ್ಲೋ ಜೀವ ಸವೆಸುತ್ತಿರುವ ಲಕ್ಷಾಂತರ ಹುಡುಗಿಯರ ಪೈಕಿ ಈ ಶ್ರುತಿಯೂ ಒಬ್ಬಳು. ಈಕೆಯದ್ದು ಮೂಲತಃ

▶▶12



ಮಾದನಾಯಕನಹಳ್ಳಿ ಪೊಲೀಸ್ ಠಾಣೆ

ಮಾಡಿದ ರೇಪ್ ಮುಚ್ಚಿಕೊಳ್ಳಲು ಕೊಂದೇ ಬಿಟ್ಟರೆ?



ಗ್ರಾಮಾಂತರ ಎಸ್ಪಿ ರಮೇಶ್ ಬಾ...



ಗೃಹಮಂತ್ರಿ ಪರಮೇಶ್ವರ್



ಮಂಜುಳಾ ಮಾನಸ



ತಾರಾ ಅನೂರಾಧ

ಐಪಿಸಿ ಸೆಕ್ಷನ್ 306 ಅಂದರೆ ಆತ್ಮಹತ್ಯೆಗೆ ಪ್ರಚೋದಿಸುವುದು. ಸದ್ಯ ಮಾದನಾಯಕನಹಳ್ಳಿ ಪೊಲೀಸರು ಶ್ರುತಿ ಹತ್ಯೆಗೆ ಸಂಬಂಧಪಟ್ಟಂತೆ ಶೋಕಿಲಾಲ ಶ್ರೀಕಾಂತ್ ವಿರುದ್ಧ ಇದನ್ನೇ ದಾಖಲಿಸಿದ್ದಾರೆ. ಇನ್ನೂ ಪೋಸ್ಟ್‌ಮಾರ್ಟಂ ವರದಿಯೇ ಬಂದಿಲ್ಲ ಆಗಲೇ ಇದನ್ನು ಆತ್ಮಹತ್ಯೆಯೆಂದು ನಿರ್ಧರಿಸಲು ಕಾರಣವೇನೆಂದು ಯಾವ ಪೊಲೀಸರೂ ಬಾಯಿ ಬಿಡುತ್ತಿಲ್ಲ. ಈ ಬಗ್ಗೆ ಪ್ರಶ್ನಿಸ ಹೋದ ಯಾರೇ ಪತ್ರಕರ್ತರಿಗೂ ಶ್ರುತಿಯದೊಂದು ಸಣ್ಣ ಫೋಟೋ ಕೂಡ ಲಭ್ಯವಿಲ್ಲ.

ಹಾಸಿಗೆ ಹಿಡಿದ ಗಂಡನ ದುರ್ಗತಿ ಒತ್ತಟ್ಟಿಗಿರಲಿ, ಇನ್ನೂ ವರ್ಷ ತುಂಬದ ಹಾಲು ಹಸುಳೆಯುಳ್ಳ ಯಾವೊಬ್ಬ ತಾಯಿಯೂ ಅಷ್ಟು ಸುಲಭಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ, ಹಾಗೊಮ್ಮೆ ಬದುಕಲ್ಲಿ ಜಿಗುಪ್ಸೆ ಬಂದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದರೆ, ಆ ರಾತ್ರಿ ಹೊತ್ತು ಮಗುವನ್ನು ಮನೆಯಲ್ಲೇ ಬಿಟ್ಟು ಇನ್ಯಾರದೋ ಮನೆಗೆ ಬಂದ ನೇಣಾಕಿಕೊಳ್ಳುತ್ತಿರಲಿಲ್ಲ, ಅದೂ ರಾತ್ರಿ ಪಾರ್ಟಿಗೆಂದು ಬಂದವಳು ಏಕಾಏಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆಂಬುದೇ ಅತಾರ್ಕಿಕ ಮತ್ತು ಅಸಹಜ. ಅನೇಕ ತಾಯಂದಿರು ಮಗುವನ್ನೂ ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದುಂಟು. ಇನ್ನೂ ಅನೇಕರು ಆತ್ಮಹತ್ಯೆಗೆ ಯತ್ನಿಸಿಯೂ ಮಕ್ಕಳ ಕಾರಣಕ್ಕೆ ಹಿಂಜರಿದದ್ದುಂಟು.

ಶ್ರುತಿಯ ದುರಂತದ ವಿಷಯದಲ್ಲಿ ಇದ್ಯಾವುದೂ ಕಾಣಿಸುತ್ತಿಲ್ಲ. ಆತ್ಮಹತ್ಯೆಯ ಉದ್ದೇಶವಿದ್ದಿದ್ದೇ ಆಗಿದ್ದರೆ ಶ್ರುತಿ ಪಾರ್ಟಿಗೆಂದು ಶ್ರೀಕಾಂತನ ಮನೆಗೆ ಆ ರಾತ್ರಿ ಹೊತ್ತು ಬರುತ್ತಿರಲಿಲ್ಲ. ಇದರರ್ಥ ಶ್ರೀಕಾಂತ್‌ನ ಮನೆಯಲ್ಲಿ ಅವತ್ತು ನಡೆದದ್ದೇ ಬೇರೆ. ಊಟದ ಜೊತೆ ಶ್ರುತಿಗೆ ಸಾಫ್ಟ್ ಡ್ರಿಂಕ್ ಎಂದು ಮತ್ತು ಬರುವ ವಿಸ್ಕಿಯನ್ನೋ ವೋಡ್ಕಾವನ್ನೋ ಕುಡಿಸಿರಬೇಕು. ನಶೆಯಲ್ಲಿ ತಲೆ ಸುತ್ತು ಬಂದು ನೆಲಕ್ಕೊರಗುತ್ತಿದ್ದಂತೆ ಗಿರೀಶ್ ಆಕೆಯ ಮೇಲೆ ಅತ್ಯಾಚಾರವೆಸಗಿರಬೇಕು ಅಥವಾ ಎಚ್ಚರದಿಂದಿದ್ದ ಶ್ರುತಿಯನ್ನು ಗಿರೀಶ ಅಥವಾ ಶ್ರೀಕಾಂತ್ ಅತ್ಯಾಚಾರಕ್ಕೆ ಯತ್ನಿಸಿರಬೇಕು. ಅದನ್ನು ಪ್ರತಿಭಟಿಸಿದ ಶ್ರುತಿಯ ಕತ್ತಿಗೆ ಒಬ್ಬ ಆಕೆಯ ವೇಲ್ ಬಿಗಿದು ಮತ್ತೊಬ್ಬ ಅತ್ಯಾಚಾರಕ್ಕೆ ಯತ್ನಿಸಿರಬೇಕು. ಕೊಸರಾಟದ ಯತ್ನದಲ್ಲಿ ಕತ್ತು ಬಿಗಿದು ಶ್ರುತಿ ಪ್ರಾಣಬಿಟ್ಟಿರಬೇಕು. ಇದ್ಯಾವುದೂ ಆಗಿರದಿದ್ದರೆ ನಶೆ ಇಳಿದ ಮೇಲೆ ತನ್ನ ಮೇಲಾದ ಅತ್ಯಾಚಾರದ ವಿಷಯ ಗೊತ್ತಾಗಿ ಪೊಲೀಸರಿಗೆ ದೂರು ಕೊಡುತ್ತೇನೆಂದು ಹಠಕ್ಕೆ ಬಿದ್ದ ಶ್ರುತಿಯನ್ನು ಶ್ರೀಕಾಂತ್ ಮತ್ತು ಗಿರೀಶ್ ಸೇರಿಕೊಂಡು ನೇಣುಬಿಗಿದಿರಬೇಕು.

ಇದರ ಹೊರತಾಗಿ ಬೇರೆ ಯಾವ ಸಾಧ್ಯತೆಯೂ ಶ್ರುತಿ ಸಾವಿನ ವಿಷಯದಲ್ಲಿ ಕಾಣಿಸುತ್ತಿಲ್ಲ. ಹಾಗೊಮ್ಮೆ ಪಾರ್ಟಿಗೆ ಬಂದವಳು ಮುನಿಸಿಕೊಂಡು ಅದೇ ಮನೆಯ ಕೋಣೆಯೊಂದನ್ನು ಸೇರಿಕೊಂಡು ಒಳಗಿನಿಂದ ಚಿಲಕ ಹಾಕಿಕೊಂಡಿದ್ದೇ ಆಗಿದ್ದರೆ ಜೊತೆಗಿದ್ದವರು ಬಾಗಿಲು ಮುರಿಯಲು ಯತ್ನಿಸಬೇಕಿತ್ತಲ್ಲವೆ? ಏಕೆ ಬಾಗಿಲು ಬಡಿಯಲಿಲ್ಲ ಅಥವಾ ಮುರಿಯಲಿಲ್ಲ? ಆತ್ಮಹತ್ಯೆ ಮಾಡಿಕೊಳ್ಳಲಿ ಎಂದೇ ಕಾದು ಕೂತರೆ? ಹಾಗಾದರೆ ಶ್ರುತಿ ಆತ್ಮಹತ್ಯೆ ಮಾಡಿಕೊಂಡಿದ್ದಾದರೂ ಯಾವ ಕಾರಣಕ್ಕೆ? ಅದೂ ಶ್ರೀಕಾಂತನ ಮನೆಗೆ ಬಂದು? ಆಕೆ ಬಂದ ಹೊತ್ತಲ್ಲೇ ಅಲ್ಲಿಗೆ ಗಿರೀಶ ಮತ್ತೊಬ್ಬನನ್ನು ಕರಕೊಂಡು ಏಕೆ ಬಂದಿದ್ದ? ಆತನಿಗೂ ಶ್ರುತಿಗೂ ಏನು ಸಂಬಂಧ? ಪೊಲೀಸರೇಕೆ ಗಿರೀಶ ಮತ್ತು ಆತನ ಜೊತೆಗಿದ್ದವನನ್ನು ಕರೆದು ವಿಚಾರಣೆ ಮಾಡಿಲ್ಲ? ಶ್ರುತಿ ಅಲ್ಲಿದ್ದಾಗಲೇ ನಾಗರತ್ನ ಎಂಬಾಕೆಗೆ ಅಲ್ಲೇನು ಕೆಲಸವಿತ್ತು? ಪೊಲೀಸರೇಕೆ ನಾಗರತ್ನಳನ್ನು ವಿಚಾರಿಸಿಲ್ಲ? ಅಥವಾ ಶ್ರೀಕಾಂತ್ ಈ ಥರದ ಹುಡುಗಿಯರನ್ನು ಪಟಾಯಿಸಿ ಗಿರೀಶನಂಥ ಸೊಕ್ಕಿನ ಖದೀಮರಿಗೆ ಬಲಿ ಕೊಡುತ್ತಿದ್ದನೆ? ಗಿರೀಶನ ಜೊತೆಗಿದ್ದ ಆ ಅಪರಿಚಿತ ಆಸಾಮಿ ಯಾರು? ಪೊಲೀಸರೇಕೆ ಇಲ್ಲಿ ಪ್ರತಿಯೊಂದನ್ನೂ ಮುಚ್ಚಿಡುತ್ತಿದ್ದಾರೆ? ಅಥವಾ ಶ್ರೀಕಾಂತನ ಮೂಲಕ ಗಿರೀಶ ಆತನ ಅಕ್ಕನ ಗಂಡ(?) ಐಪಿಎಸ್ ಗ್ರೇಡ್ ಪೊಲೀಸ್ ಅಧಿಕಾರಿಯೊಬ್ಬನ ಪಾಪದ ದುಡ್ಡನ್ನು ಬಡ್ಡಿಗೆ ಬಿಡುತ್ತಿದ್ದನೆ? ಒಂದೋ ಕೊಟ್ಟ ದುಡ್ಡು ಕೊಡು ಅಥವಾ ತಾವು ಹೇಳಿದವರೊಂದಿಗೆ ಮಲಗೆಂದು ಗಿರೀಶ ಮತ್ತು ಶ್ರೀಕಾಂತ ಶ್ರುತಿಯನ್ನು ಪೀಡಿಸಿದರೆ?

ಇಂಥ ಅನೇಕ ಪ್ರಶ್ನೆಗಳು ಶ್ರುತಿ ಸಾವಿಗೆ ಸಂಬಂಧಪಟ್ಟಂತೆ ತಲೆ ಎತ್ತುತ್ತವೆಯಾದರೂ ಯಾರೂ ಯಾವುದಕ್ಕೂ ಉತ್ತರಿಸುತ್ತಿಲ್ಲ. ಬೆಂಗಳೂರು ಗ್ರಾಮಾಂತರ ಎಸ್ಪಿ ರಮೇಶ್ ಬಾನೋತ್‌ರ ರೊಕ್ಕ ದಾಹದ ಕುರಿತಂತೆ ಈ ಹಿಂದೆ ಪತ್ರಿಕೆಯೇ ವಿಶೇಷ ವರದಿ ಪ್ರಕಟಿಸಿದೆ (ಪೇದೆ ಕೃಷ್ಣಮೂರ್ತಿ ಮಾದನಾಯಕನಹಳ್ಳಿ ವ್ಯಾಪ್ತಿಯಲ್ಲಿ ನಡೆಸಿದ ದರೋಡೆಗೆ ಸಂಬಂಧಿಸಿ). ಟೀವಿ ಕಲಾವಿದರ ಸಂಘ, ಮಹಿಳಾ ಆಯೋಗ, ಮಹಿಳಾ ಸಂಘಟನೆ, ವಿವಿಧ ಪಾರ್ಟಿಗಳ ಮಹಿಳಾ ಘಟಕಗಳು... ಯಾರಿಗಾದರೂ ಈ ನತದೃಷ್ಟ ಶ್ರುತಿಯ ದುರ್ಗತಿ ಮನ ಕಲಕುತ್ತಿಲ್ಲ ಏಕೆ?

ದಯೆ ತೋರಿ ನ್ಯಾಯ ಕಲ್ಪಿಸಿ, ಪರಮೇಶ್ವರ್ ಸಾಹೇಬರೇ ನೀವಾದರೂ. ಮಂಜುಳಾ ಮಾನಸ ಮೇಡಂ ನೀವಾದರೂ....! ಬೀದಿಗಿಳಿದು ಹೋರಾಡುವ ನಟಿ ತಾರಾ ಮೇಡಂ ನೀವಾದರೂ....?

ಮಂಡ್ಯ ನಗರಸಭೆ: ಅಧಿಕಾರ ಹಿಡಿಯಲು ಕೈ-ತೆನೆ ಕಸರತ್ತು

ಇತ್ತೀಚೆಗಷ್ಟೆ ಜಿಲ್ಲಾ ಪಂಚಾಯತ್ ಗದ್ದಲ ...ಸಿ ತಣ್ಣಗಾಗಿರುವ ಮಂಡ್ಯದಲ್ಲಿ ಈಗ ನಗರಸಭೆ ...-ಉಪಾಧ್ಯಕ್ಷ ಚುನಾವಣೆ ಬಿಸಿಯೇರಲಾರಂಭಿಸಿದೆ. ...ರಡೂ ಸ್ಥಾನಗಳು ಸಾಮಾನ್ಯ ವರ್ಗಕ್ಕೆ ...ಲಾಗಿರುವುದರಿಂದ 2ನೇ ಅವಧಿಯ

ಶ್ರೀನಿವಾಸ್



...ರಕ್ಕಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ...ಿನ ಪೈಪೋಟಿ ನಡೆಸಿವೆ. ಮೊದಲ ...ಿಯಲ್ಲೇ ಅಧ್ಯಕ್ಷನಾಗಬೇಕಿದ್ದ ಹೊಸಹಳ್ಳಿ ...ರೇಗೌಡ ಈ ಬಾರಿ ಅಧ್ಯಕ್ಷನಾಗಲು ಬರೋಬ್ಬರಿ ...ಲಕ್ಷ ಬಂಡವಾಳ ಹೂಡಿಕೊಂಡು ಐದಾರು ...ದಿ ಪಕ್ಷೇತರ ಸದಸ್ಯರ ಜೊತೆ ಶರಂಪರ ...ಾಡುತ್ತಿದ್ದಾರೆ. ಅತ್ತ ಶತಾಯಗತಾಯ ಅಧ್ಯಕ್ಷ ...ದಲ್ಲಿ ಕೂರಲೇಬೇಕೆಂದು ಜೆಡಿಎಸ್‌ನ ...ರ್‌ಟೌನ್ ಬೋರೇಗೌಡ ಹಾಗೂ ಸುನೀತಾ ...ಂದ್ರ ಕಸರತ್ತು ನಡೆಸಿದ್ದಾರೆ. ಹಾಗಾಗಿ ಮಾರ್ಚ್ ... ಚುನಾವಣೆ ಭಾರೀ ರಂಗೇರಿಸಿದೆ.

ಮಂಡ್ಯ ನಗರಸಭೆಯಲ್ಲಿ ಕಾಂಗ್ರೆಸ್ 15, ಜಾ.ದಳ ...ಪಕ್ಷೇತರ 10 ಹಾಗೂ ಬಿಜೆಪಿ ಒಬ್ಬ ಸದಸ್ಯ ಸೇರಿ ...ಸದಸ್ಯ ಬಲವಿದೆ. ಇನ್ನು ಸಚಿವ ಅಂಬರೀಶ್ ...ೂ ಸಂಸದ ಸಿ.ಎಸ್.ಪುಟ್ಟರಾಜು ಕೂಡಾ ...ದಾನದ ಹಕ್ಕು ಹೊಂದಿದ್ದಾರೆ. ಹಾಗಾಗಿ ಇಲ್ಲಿ ...ಕಾರ ಹಿಡಿಯಲು ಮ್ಯಾಜಿಕ್ ಸಂಖ್ಯೆ 19ನ್ನು ...ಟ್ಟಬೇಕು. ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲಾ ಒಂದಾಗಿ ...ಸಹಳ್ಳಿ ಬೋರೇಗೌಡರಿಗೆ ಮತ ನೀಡಿದರೂ, ... ಮೂರು ಮತಗಳ ಶಾರ್ಟೇಜ್ ಕೈ ಪಾರ್ಟಿಗೆ ...ರಾಗುತ್ತದೆ. ಹಾಗಾಗಿಯೇ ಬೋರೆಗೌಡ ಪಕ್ಷೇತರ ...ಸ್ಯರನ್ನು ಖರೀದಿಸಿಟ್ಟುಕೊಂಡಿದ್ದಾರೆ. ಯಾವ ...ಕ್ಕೂ ಹೊಸಹಳ್ಳಿ ಬೋರೇಗೌಡ ...ಕ್ಷನಾಗಬಾರದು ಎಂಬ ಹಠಕ್ಕೆ ಬಿದ್ದಿರುವ ಮಾಜಿ ...ಕ್ಷ ಸಿದ್ದರಾಜು ತನ್ನ ಬೆಂಬಲಿಗರನ್ನು ...ಂದಿಟ್ಟುಕೊಂಡು ಮತ್ತೊಮ್ಮೆ ಆಟವಾಡಲು ...ಾಗಿದ್ದಾನೆ. ಕಳೆದ ಬಾರಿಯೂ ಸಿದ್ದರಾಜು ತನ್ನ ...ದೂತ್ತ ಸದಸ್ಯರನ್ನು ಮುಂದಿಟ್ಟುಕೊಂಡು ...ಸಹಳ್ಳಿ ಬೋರೇಗೌಡನಿಗೆ ಭರ್ಜರಿ ಕೈಕೊಟ್ಟು ...ಕೇಶನ ಕೈಹಿಡಿದು ಅಧ್ಯಕ್ಷನಾಗಲು ಸಹಕರಿಸಿದ್ದ. ...ಸಹಳ್ಳಿ ಬೋರೇಗೌಡ ಸಚಿವ ಅಂಬರೀಶ್ ...ನಾಗಿದ್ದು ಅವನಿಗೆ ಅಧ್ಯಕ್ಷ ಸ್ಥಾನ ಸಿಗದಂತೆ ಮಾಡಿ ...ಗೆ ಮುಖಭಂಗ ಮಾಡುವುದು ಸಿದ್ದರಾಜು ಉದ್ದೇಶವಾಗಿತ್ತು. ಅದರಲ್ಲಿ ಸಂಪೂರ್ಣ ಸಕ್ಸಸ್ ಆದ ಸಿದ್ದರಾಜು ಈಗ ಮತ್ತೆ ಅಂಬಿಗೆ ಗರ್ವಭಂಗ ಮಾಡಲು ಸಜ್ಜಾಗಿದ್ದಾನೆ. ಈಗಾಗಲೇ ತನ್ನ ಗುಂಪಿನ ಚಂದ್ರಕಲಾ, ಪುಟ್ಟತಾಯಮ್ಮ, ಪುಷ್ಪಾವತಿಗೆ ಜೆಡಿಎಸ್ ಪಕ್ಷದ ಕಡೆಯಿಂದ ತಲಾ 2 ಲಕ್ಷ ರೂ. ಬಟವಾಡೆ ಮಾಡಿಸಿದ್ದಾನೆ.. ಇದರಲ್ಲಿ ಪುಷ್ಪಾವತಿ 'ನಮ್ಮ ಪಕ್ಷದ ಬೋರೇಗೌಡನಿಗೆ ವೋಟ್ ಹಾಕುತ್ತೇನೆ. ನನಗೆ ಜೆಡಿಎಸ್‌ನವರ ಹಣ ಬೇಡ' ಅಂತ ವಾಪಾಸ್ ಕೊಡಲು ಹೋದರೆ, ಸಿದ್ದರಾಜು ಸುತಾರಾಂ ಹಣ ಮುಟ್ಟಲ್ಲ.

ಹೊಂದಾಣಿಕೆಗೆ ಪ್ರಯತ್ನ

ಕಳೆದ ಬಾರಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದರಿಂದ ಕೈ ಪಾರ್ಟಿಯ ಲೋಕೇಶ್ ಅಧ್ಯಕ್ಷನಾಗಿದ್ದ. ಅದರಂತೆ ಈ ಬಾರಿಯೂ ಜೆಡಿಸ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅಧಿಕಾರ ಹಿಡಿಯಲು ಕಾಂಗ್ರೆಸ್ ಪಕ್ಷ ಸಜ್ಜಾಗಿದೆ. ಈಗಾಗಲೇ ನಗರಸಭೆ ಸದಸ್ಯರನ್ನು ಖರೀದಿಸಲು ನಡೆಯುತ್ತಿರುವ ವ್ಯವಹಾರ ಅಂಬಿಗೆ ಗೊತ್ತಾಗಿದೆ. ಒಂದುವೇಳೆ ತನ್ನ ಶಿಷ್ಯ ಹೊಸಹಳ್ಳಿ ಬೋರೆಗೌಡನಿಗೆ ಈ ಬಾರಿಯೂ ಅಧ್ಯಕ್ಷ ಸ್ಥಾನ ಕೈತಪ್ಪಿದರೆ ತನ್ನ ವರ್ಚಸ್ಸು ಮತ್ತಷ್ಟು



ಪಾತಾಳಕ್ಕೆ ಇಳಿಯಲಿದೆ ಅನ್ನೋದು ಅಂಬಿಗೆ ಖಾತ್ರಿಯಾಗಿದೆ. ಅದಕ್ಕೋಸ್ಕರವೇ ದೇವೇಗೌಡ ಹಾಗೂ ಕುಮಾರಸ್ವಾಮಿ ಜೊತೆ ಮಾತುಕತೆಗೆ ವೇದಿಕೆ ಸಿದ್ಧಪಡಿಸಿದ್ದಾರೆ. ಹಾಗೇನಾದರೂ ಜೆಡಿಎಸ್-ಕಾಂಗ್ರೆಸ್ ನಡುವೆ ಹೊಂದಾಣಿಕೆ ನಡೆದರೆ ಕಾಂಗ್ರೆಸ್ ಪಕ್ಷದ ಹೊಸಹಳ್ಳಿ ಬೋರೇಗೌಡ ಅಧ್ಯಕ್ಷರಾಗುವುದು ಖಚಿತ.

ಒಂದುವೇಳೆ ಜೆಡಿಸ್-ಕಾಂಗ್ರೆಸ್ ನಡುವೆ ಮತ್ತೆ ಹೊಂದಾಣಿಕೆ ನಡೆದರೆ ಸಾಕಷ್ಟು ಡಿಮ್ಯಾಂಡ್ ಹೊಂದಿರುವ ಪಕ್ಷೇತರ ಸದಸ್ಯರ ಕೈ ಖಾಲಿಯಾಗುವುದು ಖಚಿತ. ಹಾಗಾಗಿ ಅವರೆಲ್ಲ ಚುನಾವಣೆಗೂ ಮೊದಲೇ ಸಾಕಷ್ಟು ರೊಕ್ಕ ಮಾಡಿಕೊಳ್ಳಲು ಆಕಾಂಕ್ಷಿಗಳ ಜೊತೆ ಕೈಮಿಲಾಯಿಸುತ್ತಿದ್ದಾರೆ. ಈಗಾಗಲೇ ಕೆಲವರಿಗೆ 1 ರಿಂದ 2 ಲಕ್ಷ ಹಣ ಸಂದಾಯವಾಗಿದ್ದು ಉಳಿದ ಹಣ ಚುನಾವಣೆಯ ನಂತರ ಕೊಡುವುದಾಗಿ ಒಪ್ಪಂದ ನಡೆದಿದೆ. ಇನ್ನು ಅಧಿಕಾರಕ್ಕೇರಲು ಪೈಪೋಟಿ ನಡೆಸಿರುವ ಜೆಡಿಎಸ್‌ನವರು 3 ರಿಂದ 4 ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಕಳೆದ ಬಾರಿ ಮಾಜಿ ಶಾಸಕ ಎಂ.ಶ್ರೀನಿವಾಸ್ ಟಿಕೆಟ್ ಹಂಚಿಕೆಯಲ್ಲಿ ಮಾಡಿದ ಯಡವಟ್ಟಿನ ಫಲವಾಗಿ ಈ ಬಾರಿ 10 ಮಂದಿ ನಗರಸಭೆಗೆ ಪಕ್ಷೇತರರಾಗಿ ಆರಿಸಿ ಬಂದಿದ್ದಾರೆ. ಇವರಲ್ಲಿ ಬಹುತೇಕ ಮಂದಿ ಜೆಡಿಎಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದವರು. ಆದರೆ ಎಂ.ಶ್ರೀನಿವಾಸ್ ಇವರಿಗೆ ಬದಲು ನಿಷ್ಪ್ರಯೋಜಕರಿಗೆ ಟಿಕೆಟ್ ಕೊಟ್ಟು ನಗರಸಭೆಯಲ್ಲಿ ಜೆಡಿಎಸ್ ಮತ್ತೊಮ್ಮೆ ಅಧಿಕಾರಕ್ಕೇರುವ ಅವಕಾಶ ಕೈಚೆಲ್ಲಿದರು. ಈ 10 ಮಂದಿ ಪಕ್ಷೇತರರಿಗೆ ಸಿದ್ದರಾಜು ಹಾಗೂ ಲೋಕೇಶ್ ಅಧ್ಯಕ್ಷರಾದ ಸಂದರ್ಭದಲ್ಲಿ ಭರ್ಜರಿ ದುಡ್ಡು ಕೈ ಸೇರಿತ್ತು. ಕೇವಲ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯ ಸಂದರ್ಭದಲ್ಲೇ ಎಲ್ಲಾ ಪಕ್ಷೇತರ ಸದಸ್ಯರು ಮಾಡಿಕೊಂಡ ರೊಕ್ಕ 4 ರಿಂದ 5 ಲಕ್ಷ. ಈ ಬಾರಿಯೂ ಪಕ್ಷೇತರ ಸದಸ್ಯರಿಗೆ ತಲಾ 3 ರಿಂದ 4 ಲಕ್ಷ ಕೊಡುವ ಮಾತುಕತೆಗಳು ನಡೆದಿದೆ.

ಜೆಡಿಎಸ್ ಮನಿ ಡೀಲ್

ನಾಲ್ಕು ದಿನಗಳ ಹಿಂದಷ್ಟೇ ನಗರದ ಪ್ರವಾಸಿಮಂದಿರದಲ್ಲಿ ಮಾಜಿ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜೆಡಿಎಸ್ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಎಂ.ಜೆ.ಚಿಕ್ಕಣ್ಣ ಮುಜಾಹಿದ್, ಸುನೀತಾ ರವೀಂದ್ರ ಹಾಗೂ ಷುಗರ್‌ಟೌನ್ ಬೋರೇಗೌಡ ಸ್ಪರ್ಧಿಸುವ ಆಕಾಂಕ್ಷೆ ಹೊರಹಾಕಿದ್ದರು. 'ಒಂದುವೇಳೆ ಜೆಡಿಎಸ್ ಅಧಿಕಾರ ಹಿಡಿಯಬೇಕೆಂದರೆ 10 ಮತಗಳ ಅವಶ್ಯಕತೆ ಎದುರಾಗುತ್ತೆ. ಆ ಹತ್ತು ಮತಗಳನ್ನು ಖರೀದಿಸುವ ತಾಕತ್ತು ಯಾರಿಗಿದೆ ನೀವೇ ಮಾತಾಡಿಕೊಂಡು ನಂತರ ನನ್ನ ಬಳಿ ಬನ್ನಿ' ಅನ್ನೋ ಮಾತನ್ನು ಶ್ರೀನಿವಾಸ್ ನಾಲ್ವರು ಆಕಾಂಕ್ಷಿಗಳಿಗೂ ಹೇಳಿಕಳಿಸಿದ್ದರು. ಆ ಕೂಡಲೇ ಚಿಕ್ಕಣ್ಣ ಮುಜಾಹಿದ್ ತಾವು ನಮ್ಮ ಪಕ್ಷದ ಸದಸ್ಯರಿಗೆ ತಲಾ 1 ಲಕ್ಷ, ಪಕ್ಷೇತರ ಸದಸ್ಯರಿಗೆ 2 ಲಕ್ಷ ಹಣ ನೀಡುತ್ತೇವೆ ಅನ್ನೋ ಸಾಮರ್ಥ್ಯ ಹೊರಹಾಕಿದರೆ, ಸುನೀತಾ ರವೀಂದ್ರ ಹಾಗೂ ಷುಗರ್‌ಟೌನ್ ಬೋರೇಗೌಡ ಜೆಡಿಎಸ್ ಸದಸ್ಯರಿಗೆ 2 ಲಕ್ಷ, ಪಕ್ಷೇತರರಿಗೆ 4 ಲಕ್ಷ ಬೇಕಾದರೂ ಸುರಿಯಲು ಸಿದ್ಧ ಎಂದಿದ್ದರು. ಅಲ್ಲಿಗೆ ರೇಸ್‌ನಲ್ಲಿ ಸುನೀತಾ ರವೀಂದ್ರ ಹಾಗೂ ಷುಗರ್‌ಟೌನ್ ಬೋರೇಗೌಡ ಮಾತ್ರ ಉಳಿದುಕೊಂಡಂತಾಗಿದೆ. ಈ ಇಬ್ಬರೂ ತಲಾ 40 ಲಕ್ಷ ತಂದುಕೊಡಬೇಕು; ಇಬ್ಬರಲ್ಲಿ ಯಾರ ಹೆಸರನ್ನು ಜೆಡಿಎಸ್ ವರಿಷ್ಠರು ಸೂಚಿಸುತ್ತಾರೋ ಅವರು ಕಣದಲ್ಲಿದ್ದು ಮತ್ತೊಬ್ಬ ಸದಸ್ಯರಿಗೆ ಹಣ ವಾಪಸ್ ಮಾಡುವುದೆಂಬ ತೀರ್ಮಾನವಾಗಿದೆ. ಈಗಾಗಲೇ ಎಂಬತ್ತು ಲಕ್ಷದ



ಬಾಬ್ತು ಜೆಡಿಎಸ್ ದಿಗ್ಗಜರ ಅಕೌಂಟು ಸೇರಿದೆ ಎಂಬ ಮಾತುಗಳು ಕೇಳಿಬರುತ್ತಿವೆ..

ಅತ್ತ ಅಂಬರೀಶ್ ಈ ಹಿಂದೆ ಸಿದ್ದರಾಜು ಹಾಗೂ ಲೋಕೇಶ್ ಆಯ್ಕೆ ಸಂದರ್ಭದಲ್ಲಿ ಆದ ಮುಖಭಂಗದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಜೆಡಿಎಸ್ ವರಿಷ್ಠರ ಜೊತೆ ಮಾತುಕತೆ ನಡೆಸಿ, ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧರಾಗಿರುವುದು ಕುತೂಹಲ ಮೂಡಿಸಿದ್ದು ಈ ನಡೆ ಪಕ್ಷೇತರ ಸದಸ್ಯರ ಮುಖದಲ್ಲಿ ಆತಂಕ ಮೂಡಿಸಿದೆ. ಹಾಗಾಗದಿರಲೆಂದು ಅವರು ದೇವರಲ್ಲಿ ಮೊರೆಯಿಡುತ್ತಿದ್ದಾರೆ. ಕಳೆದಬಾರಿ ಹೊಂದಾಣಿಕೆ ಸಂದರ್ಭದಲ್ಲಿ ಜೆಡಿಎಸ್‌ಗೆ ಸ್ಥಾಯಿ ಸಮಿತಿ ಹಾಗೂ ಮುಡಾ ನಿರ್ದೇಶಕ ಸ್ಥಾನ ಬಿಟ್ಟುಕೊಡುವ ಭರವಸೆಯನ್ನು ಅಂಬರೀಶ್ ನೀಡಿದ್ದರು. ಆದರೆ 9 ತಿಂಗಳು ಮುಗಿದರೂ ಜೆಡಿಎಸ್ ಸದಸ್ಯರಿಗೆ ಅಧಿಕಾರ ಸಿಗಲಿಲ್ಲ. ಅಂಬಿ ಈಗಲೂ ಅದೇರೀತಿ ಮಾಡುವುದಿಲ್ಲ ಅನ್ನೋದಕ್ಕೆ ಏನು ಗ್ಯಾರಂಟಿ ಅಂತ ಕ್ಯೆರಿ ತೆಗೆಯುತ್ತಿರುವ ಕೆಲ ಜೆಡಿಎಸ್ ಸದಸ್ಯರು ಪಕ್ಷೇತರರೊಂದಿಗೆ ಸೇರಿಕೊಂಡು ಅಧಿಕಾರ ಹಿಡಿಯುವುದೇ ಸೂಕ್ತವೆನ್ನುವ ಒತ್ತಡವನ್ನು ಎಂ.ಶ್ರೀನಿವಾಸ್ ಹಾಗೂ ಡಿ.ರಮೇಶ್ ಮೇಲೆ ಹೇರಿದ್ದಾರೆ.

ಹಿಂದೆ ಸರಿದ ಅಮರಾವತಿ ಚಂದ್ರ

ಮೊದಲನೇ ಅವಧಿಯಲ್ಲಿ 15 ತಿಂಗಳ ಅವಧಿಗೆ ಪಕ್ಷೇತರ ಸದಸ್ಯ ಸಿದ್ದರಾಜುನನ್ನು ಅಧ್ಯಕ್ಷ ಗಾದಿಗೆ





ಕೂರಿಸಿ, ನಂತರ ಆತ ಇಳಿಯಲು ಒಲ್ಲೆ ಎಂದಾಗ ಜೆಡಿಎಸ್ ಸದಸ್ಯರ ಸಹಕಾರದಿಂದ ಆತನನ್ನು ಕೆಳಗಿಳಿಸಲು ಭಾರೀ ಶ್ರಮಪಟ್ಟಿದ್ದ ಅಂಬಿ ಬಲಗೈ ಭಂಟ ಅಮರಾವತಿ ಚಂದ್ರ ಈ ಬಾರಿ ಚುನಾವಣಾ ಅಖಾಡದಿಂದ ಸಂಪೂರ್ಣ ಹಿಂದೆ ಸರಿದಿದ್ದಾನೆ. ಸಿದ್ದರಾಜು ಕೆಳಗಿಳಿಸಿದ ನಂತರ ಅಧ್ಯಕ್ಷ ಸ್ಥಾನಕ್ಕೆ ಹೊಸಹಳ್ಳಿ ಬೋರೇಗೌಡನನ್ನು ಆಯ್ಕೆ ಮಾಡಲು 40 ಲಕ್ಷ ಪಡೆದ ಅಮರಾವತಿ ಚಂದ್ರ ಅದನ್ನು ಕಾಂಗ್ರೆಸ್ ಸದಸ್ಯರಿಗೆ ಹಂಚದೆ ಅಂಬಿ ಹೆಸರನ್ನು ಮುಂದಿಟ್ಟುಕೊಂಡು ಆಟ ಆಡಲು ಶುರುಮಾಡಿದ್ದ. ಚಂದ್ರನ ಹರಕತ್ತನ್ನು ಅರ್ಥಮಾಡಿಕೊಂಡ ಮತ್ತೊಬ್ಬ ಕಾಂಗ್ರೆಸ್ ಸದಸ್ಯ ಲೋಕೇಶ್ ತನ್ನದೇ ಪಾರ್ಟಿಯ ಸದಸ್ಯರಿಗೆ ಹಾಗೂ ಪಕ್ಷೇತರರಿಗೆ ಲಕ್ಷಾಂತರ ಹಣ ಸುರಿದು ಖರೀದಿಸಿಟ್ಟುಕೊಂಡಿದ್ದ. ಪಕ್ಷದ ಅಧಿಕೃತ ಅಭ್ಯರ್ಥಿಯೇ ಸೋತರೆ ಅಂಬಿಗೆ ಮುಖಭಂಗವಾಗುವುದು ಗ್ಯಾರಂಟಿ ಎಂಬುದನ್ನರಿತ ಚಂದ, ಚುನಾವಣೆಯ ದಿನ ಹೊಸತು

▶▶ 12

ಮಂಡ್ಯ ನಗರಸಭೆ ಸದಸ್ಯರು ಮಾರಾಟಕ್ಕಿದ್ದಾರೆ!

...ದುಡ್ಡಿನ ಮುಂದೆ ಪಕ್ಷ, ತತ್ವ, ಸಿದ್ಧಾಂತ ಎಂಬುದಕ್ಕೆ ಬೆಲೆ ಇಲ್ಲ ಎನ್ನುವ ಸದಸ್ಯರು ...ಡ್ಯ ನಗರಸಭೆಯಲ್ಲಿದ್ದಾರೆ. ಮೊದಲ ಬಾರಿಗೆ ಅಧ್ಯಕ್ಷ ಸ್ಥಾನಕ್ಕೇರಿದ ಪಕ್ಷೇತರ ಸದಸ್ಯ ...ರಾಜು ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಿಗೆ ಅವರವರ ಯೋಗ್ಯತೆಗೆ ತಕ್ಕಂತೆ 1 ...ದ 2 ಲಕ್ಷ ಹಣವನ್ನು ನೀಡಿದ್ದ. ಅಲ್ಲದೆ ಸಿದ್ದರಾಜು ಬಂಡೆದ್ದು ಅಧ್ಯಕ್ಷ ಸ್ಥಾನಕ್ಕೆ ...ರಾಜೀನಾಮೆ ನೀಡದೆ ನಡೆಸಿದ ಬಜೆಟ್ ಸಭೆಗೆ ಕೋರಂ ನೀಡಲೆಂದೇ ಜೆಡಿಎಸ್‌ನ ...ದು ಸದಸ್ಯರಿಗೆ ತಲಾ 1 ಲಕ್ಷ ರೂ. ಹಣವನ್ನು ನೀಡಿದ್ದ. ನಂತರ ಇದೇ ...ರಾಜುವನ್ನು ಕೆಳಗಿಳಿಸಲು ಕಾಂಗ್ರೆಸ್, ಜೆಡಿಎಸ್, ಪಕ್ಷೇತರ ಸದಸ್ಯರಿಗೆ ಕಾಂಗ್ರೆಸ್ ...ದ ಪರವಾಗಿ ಅಮರಾವತಿ ಚಂದ್ರ ಪ್ರತ್ಯೇಕವಾಗಿ 2 ಲಕ್ಷ ನೀಡಿದ್ದ. ಇನ್ನು ಲೋಕೇಶ್ ...ಗ್ರೆಸ್ ಹಾಗೂ ಪಕ್ಷೇತರ ಸದಸ್ಯರ ಉಡಿಗೆ 1 ರಿಂದ 2 ಲಕ್ಷ ತುಂಬಿಯೇ 9 ...ಳು ಅಧ್ಯಕ್ಷನಾಗಿದ್ದ.

...ಈಗ ಎರಡನೇ ಅವಧಿಯಲ್ಲಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ...ಸಲಾಗಿರುವುದರಿಂದ ಹಣದ ಆರ್ಭಟ ಜೋರಾಗಿಯೇ ನಡೆಯುತ್ತಿದೆ. ಈ ಬಾರಿ ...ನಗರಸಭೆಗೆ ಆರಿಸಿ ಬಂದಿರುವ ಒಂದಿಬ್ಬರು ಸದಸ್ಯರನ್ನು ಬಿಟ್ಟರೆ ಬಹುತೇಕ ಸದಸ್ಯರಿಗೆ ...ಷ್ಟೋ ಹಬ್ಬ. ಅತ್ತ ಕಾಮಗಾರಿಗಳಲ್ಲಿ ಪರ್ಸಂಟೇಜ್ ಲೆಕ್ಕದಲ್ಲಿ ಕಾಸು ಜೇಬಗಿಳಿದರೆ, ... ಚುನಾವಣೆ ಸರ್ಗ ನಡೆದರೆ ಬೋನಸ್ ಅಮೌಂಟ್ ಅಕೌಂಟ್‌ಗೆ ಜಮಾ ಆಗುತ್ತದೆ. ಹೀಗೆ ಆರಾರು ತಿಂಗಳಿಗೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿ ಎಂದು ಬಹುತೇಕ ಸದಸ್ಯರು ದೇವರಲ್ಲಿ ಬೇಡಿಕೊಳ್ಳುತ್ತಿದ್ದಾರೆ. ನಗರಸಭೆ ಸದಸ್ಯರಾಗಲು ಯೋಗ್ಯತೆಯೇ ಇಲ್ಲದ, ಹಣಕ್ಕಾಗಿ ಮೂರು ಬಿಟ್ಟ ಇಂತಹ ಸದಸ್ಯರಿಂದ ನಗರದ ಅಭಿವ?ದ್ಧಿ ಸಾಧ್ಯವೇ?

ಮಂಡ್ಯ ನಗರಸಭೆಯಲ್ಲಿ ಕಳೆದ 2 ಅವಧಿಯಲ್ಲಿ ಹಣವೇ ಪ್ರಧಾನ ಪಾತ್ರ ವಹಿಸಿದೆ. ಸಾಮಾನ್ಯಸಭೆ ಸುಸೂತ್ರವಾಗಿ ನಡೆಯಲು ಹಣ, ಯೋಜನೆ ಜಾರಿಗೆ ಅನುಮತಿ ಪಡೆದುಕೊಳ್ಳಲು ಇಂತಿಷ್ಟು ಹಣ ಎಂದು ಫಿಕ್ಸ್ ಮಾಡಲಾಗಿದೆ. ಯಾವುದೇ ಯೋಜನೆಗೆ ಅಂಗೀಕಾರ ಸುಸೂತ್ರವಾಗಿ ದೊರೆಯಬೇಕೆಂದರೆ ಅಧ್ಯಕ್ಷ ಸ್ಥಾನದಲ್ಲಿರುವವನು ಸದಸ್ಯರಿಗೆ ಕಪ್ಪ-ಕಾಣಿಕೆ ಒಪ್ಪಿಸಲೇಬೇಕು. ಇಲ್ಲದಿದ್ದರೆ ಸಾಮಾನ್ಯ ಸಭೆ ರಣರಂಗವಾಗುತ್ತದೆ. ಹಾಗಾಗಬಾರದು ಎನ್ನುವ ಉದ್ದೇಶದಿಂದಲೇ ಸಾಮಾನ್ಯ ಸಭೆಯ ಹಿಂದಿನ ದಿನವೇ ಅಧ್ಯಕ್ಷನಾದವನು ಗದ್ದಲವೆಬ್ಬಿಸುವ ಸದಸ್ಯರ ಬಾಯಿ ಮುಚ್ಚಿಸಲು 'ಸತ್ಯನಾರಾಯಣ ಪ್ರಸಾದ'ವನ್ನು ಅವರ ಬಾಯಿಗೆ ಹಾಕಬೇಕು. ಸಭೆಯಲ್ಲಿ 'ಪ್ರಸಾದ' ತಿಂದ ಸದಸ್ಯ ಸುಮ್ಮನೆ ಕುಳಿತಿದ್ದರೆ ಸಾಕು ಆತನ ಬಾಯಲ್ಲಿರುವ 'ಪ್ರಸಾದ' ಕೆಲಸ ಮಾಡಿತು ಎಂದರ್ಥ. ಸದಸ್ಯರು ಆರ್ಭಟಿಸುತ್ತಿದ್ದರೆ ಅವರಿಗೆ 'ಪ್ರಸಾದ' ತಲುಪಿಲ್ಲ ಎಂದರ್ಥ. ಮಂಡ್ಯ ನಗರಸಭೆಗೆ ಎಂಥ ದುಸ್ಥಿತಿ ಬಂತು ನೋಡಿ.

ಮಂಡ್ಯ ನಗರಸಭೆ

11 ⏮

ಬೋರೇಗೌಡನ ನಾಮಪತ್ರ ವಾಪಸ್ ತೆಗೆಸಿ ಕಾಂಗ್ರೆಸ್‌ನ ಲೋಕೇಶ್ ಅಧ್ಯಕ್ಷನಾಗಲು ಬಿಟ್ಟುಕೊಟ್ಟಿದ್ದ. ಇದರಿಂದಾಗಿ ಮನನೊಂದಿದ್ದ ಹೊಸಹಳ್ಳಿ ಬೋರೇಗೌಡನಿಗೆ ಹೃದಯಾಘಾತವೂ ಆಗಿತ್ತು.

ಅಮರಾವತಿ ಚಂದ್ರನಿಗೆ ಕೊಟ್ಟ 40 ಲಕ್ಷ ಹಣದಲ್ಲಿ 30 ಲಕ್ಷ ಮಾತ್ರ ವಾಪಸ್ ಬಂತು. ಉಳಿದ 10 ಲಕ್ಷ ಹಣ ಸಿದ್ದರಾಜು ಕೆಳಗಿಳಿಸಲು ಖರ್ಚಾಯಿತೆಂದು ಹೇಳಿ ಅಮರಾವತಿ ಚಂದ್ರ ಬೋರೇಗೌಡನಿಗೆ ಉಂಡೇ ನಾಮ ಹಾಕಿದ. ಈ ಎಲ್ಲಾ ಛಾನ್ಸಡಿಯಿಂದಲೇ ಚುನಾವಣೆ ಕಣದಿಂದ ಹಿಂದೆ ಸರಿದಿರುವ ಅಮರಾವತಿ ಚಂದ್ರ ಈ ಬಗ್ಗೆ ಕೇಳಿದರೆ ಅಂಬರೀಶಣ್ಣನತ್ತ ಕೈ ತೋರಿಸುತ್ತಾನೆ. ಹೊಸಹಳ್ಳಿ ಬೋರೇಗೌಡನ ಪರ ಅಂಬರೀಶ್ ಆಪ್ತ ಬಳಗದಲ್ಲಿರುವ ಮಾಜಿ ನಗರಸಭೆ ಸದಸ್ಯರಾದ ಅಪ್ಪುಶಂಕರ್, ಕಲ್ಲಹಳ್ಳಿ ಶಂಕರೇಗೌಡ ಬ್ಯಾಟಿಂಗ್ ಮಾಡುತ್ತಿದ್ದಾರೆ. ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರನ್ನು ಸಂಪರ್ಕಿಸಿ ಮೂರು ಬಾರಿ ಗೆದ್ದಿರುವ ಹೊಸಹಳ್ಳಿ ಬೋರೇಗೌಡನಿಗೆ ಈ ಬಾರಿಯಾದರೂ ಒಂದು ಛಾನ್ಸ್ ಕೊಡಿ ಎಂದು ಕೈ ಮುಗಿಯುತ್ತಿದ್ದಾರೆ. ಆದಕ್ಕೆಂದೇ ಹೊಸಹಳ್ಳಿ ಬೋರೇಗೌಡನ ಕೈಯಿಂದ ಈ ಬಾರಿ 40-50 ಲಕ್ಷ ಹಣ ಕೈಬಿಡುವುದು ಖಚಿತವಾಗಿದೆ.

ಪಕ್ಷೇತರ ಸದಸ್ಯರಾದ ನಯಾಜ್, ನಲ್ಲಣ್ಣ ನರಸಮ್ಮ, ಚಂದ್ರುಕುಮಾರ್, ಬಿಜೆಪಿಯ ಶಿವಪ್ರಕಾಶ್‌ಬಾಬು ಮೊದಲಾದವರು ಹೊಸಹಳ್ಳಿ ಬೋರೇಗೌಡನ ಜೊತೆ ಅಂಬರೀಶ್‌ರನ್ನು



ನೋಡಿಬಂದಿದ್ದಾರೆ. ಆದರೆ ಜೆಡಿಎಸ್‌ನವರು 4 ರಿಂದ 5 ಲಕ್ಷ ಕೊಡ್ತೇವೆ ಅಂತ ಅನೌನ್ಸ್ ಮಾಡಿರೋದರಿಂದ ಅವರ ನಿಷ್ಠೆ ಎಷ್ಟು ದಿನ ಉಳಿಯುತ್ತೋ ಗೊತ್ತಿಲ್ಲ. ಜೆಡಿಎಸ್‌ನವರು ಕೊಟ್ಟಷ್ಟೇ ಹಣ ಕೊಟ್ಟರೆ ಮಾತ್ರ ನಿಮ್ಮ ಪರ ಇರ್ತೀವಿ ಅಂತ ಪಟ್ಟುಹಿಡಿದರೂ ಅಚ್ಚರಿಯಿಲ್ಲ.

ಇನ್ನು ಅಂಬಿ ಹಾಗೂ ಅಮರಾವತಿ ಚಂದ್ರನನ್ನು ಬಾಯಿಗೆಬಂದಂತೆ ಬೈಯುತ್ತಿದ್ದ ಸಿದ್ದರಾಜು ಬಣದಲ್ಲಿರುವ ಕಾಂಗ್ರೆಸ್ ಸದಸ್ಯರಾದ ಅನಿಲ್‌ಕುಮಾರ್ ಹಾಗೂ ಹುಚ್ಚಾ ರಾಮಲಿಂಗ, ಮಾಜಿ ಅಧ್ಯಕ್ಷ ಲೋಕೇಶ್ ಜೊತೆಗೂಡಿ ಅಂಬಿಯನ್ನು ಭೇಟಿ ಮಾಡಿ ಬಂದಿದ್ದಾರೆ. ತನ್ನನ್ನು ಅಧ್ಯಕ್ಷನನ್ನಾಗಿಸಲು ಅನಿಲ್‌ಕುಮಾರ್ ಬೇಡಿಕೆಯಿಟ್ಟಿದ್ದಾನೆ ಅನ್ನೋ ಮಾತುಗಳಿವೆ.

ಕಾಂಗ್ರೆಸ್‌ನಿಂದ ವಿಪ್

ಕಳೆದ ಬಾರಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರಿಗೆ ಅಧಿಕೃತ ಅಭ್ಯರ್ಥಿ ಹೊಸಹಳ್ಳಿ ಬೋರೇಗೌಡನಿಗೆ ಮತಹಾಕಬೇಕೆಂದು ವಿಪ್ ನೀಡಿದ್ದರೂ ಸದಸ್ಯರ್‍ಯಾರು ಕ್ಯಾರೇ ಎಂದಿರಲಿಲ್ಲ. ಈ ಬಾರಿಯೂ ಕಾಂಗ್ರೆಸ್ ಸದಸ್ಯರಿಗೆ ವಿಪ್ ನೀಡುವ ಸಾಧ್ಯತೆ ಹೆಚ್ಚಾಗಿದೆ. ಒಂದು ವೇಳೆ ಜೆಡಿಎಸ್ ಜೊತೆ ಹೊಂದಾಣಿಕೆ ಮುರಿದುಬಿದ್ದರೆ ಕಟ್ಟುನಿಟ್ಟಾಗಿ ವಿಪ್ ಜಾರಿ ಮಾಡಲು ಕಾಂಗ್ರೆಸ್ ಮುಖಂಡರು ಸಿದ್ಧತೆ ಮಾಡಿಕೊಂಡಿದ್ದಾರೆ. ಈ ಮಧ್ಯೆ ದುಡ್ಡಿಗಾಗಿ ಬಾಯಿಬಿಡುವ ಕೆಲ ಕಾಂಗ್ರೆಸ್ ಸದಸ್ಯರು ವಿಪ್ ಉಲ್ಲಂಘಿಸುವ ಮಾತುಗಳನ್ನು ಆಡುತ್ತಿದ್ದಾರೆ. ಆದರೆ ಅವರೆಲ್ಲಾ ವಿಪ್ ಉಲ್ಲಂಘಿಸುವ ಧೈರ್ಯ ತೋರುತ್ತಾರೋ ಇಲ್ಲವೋ ಕಾದು ನೋಡಬೇಕು. ಈ ಹಿಂದೆ ನಾವು ಕಾಂಗ್ರೆಸ್ ಪಕ್ಷ ವಿಪ್ ನೀಡಿದರೂ ಸಹ ಸಿದ್ದರಾಜು ಪರ ನಿಲ್ಲುತ್ತೇವೆ ಎಂದು ಬಡಾಯಿಕೊಚ್ಚಿಕೊಂಡಿದ್ದ ಅನಿಲ್‌ಕುಮಾರ್, ರಾಮಲಿಂಗ, ಪುಷ್ಪಾವತಿ ಎಲ್ಲರೂ ನಂತರ ಬಾಯಿಮುಚ್ಚಿಕೊಂಡು ಸಿದ್ದರಾಜು ವಿರುದ್ಧವಾಗಿ ಮತ ಹಾಕಿದ್ದರು.

ಒಟ್ಟಾರೆ ಮಾರ್ಚ್ 16ರ ಚುನಾವಣೆ ಸಾಕಷ್ಟು ಕುತೂಹಲ ಮೂಡಿಸಿದೆ. ದುಡ್ಡೇ ದೊಡ್ಡಪ್ಪ ಎನ್ನುವ ನಗರಸಭೆ ನಾಟಕದಲ್ಲಿ ಯಾರ ತಲೆಗೆ ಕಿರೀಟ ಬೀಳುತ್ತೋ ಗೊತ್ತಿಲ್ಲ; ಆದರೆ, ಆ ಕಿರೀಟ ಭಾರೀ ದುಬಾರಿಯದ್ದಾಗಿರಲಿದೆ ಎನ್ನುವುದಂತೂ ಖಚಿತ.

■ ವರದಿಗಾರ

ನಟಿ ಶ್ರುತಿಯ ನಿಗೂಢ ಸಾವು

10 ⏮

ಕನಕಪುರ ತಾಲ್ಲೂಕಿನ ಹಾರೋಹಳ್ಳಿ. ಅದೇ ಊರಿನ ಉಮೇಶ್ ಎಂಬಾತನೊಂದಿಗೆ ಇಲ್ಲಿಗೆ ಎರಡು ವರ್ಷದ ಹಿಂದೆ ಮದುವೆಯಾಗಿತ್ತು. ಹೊಟ್ಟೆಪಾಡಿಗೆಂದು ಬೆಂಗಳೂರಿನ ಹಾದಿಹಿಡಿದ ಉಮೇಶ್ ಕೆಲದಿನಗಳ ಕಾಲ ಜೆಪಿನಗರದ ಯಾವುದೋ ಪಿಜ್ಜಾ ಮಳಿಗೆಯೊಂದರಲ್ಲಿ ಡೆಲವರಿ ಬಾಯ್ ಕೆಲಸ ಮಾಡಿಕೊಂಡಿದ್ದ. ಕೆಲದಿನಗಳಲ್ಲೇ ಮಾಗಡಿ ರಸ್ತೆಯ ಮಾಚೋಹಳ್ಳಿಗೆ ಬಂದು ಬಾಡಿಗೆ ಮನೆಯೊಂದನ್ನು ಮಾಡಿದ್ದೇ ಪತ್ನಿ ಶ್ರುತಿಯನ್ನೂ ಬೆಂಗಳೂರಿಗೆ ಕರೆತಂದ. ಒಂದಷ್ಟು ಕಾಲ ಸಂಸಾರ ಚೆನ್ನಾಗೇ ಇತ್ತು. ಆ ಹೊತ್ತಿಗೆ ಕ್ಯಾಬ್ ಒಂದರ ಡ್ರೈವರಾಗಿ ಕೆಲಸಕ್ಕೆ ಸೇರಿದ ಉಮೇಶ್ ಅಹೋರಾತ್ರಿ ದುಡಿಯುತ್ತಿದ್ದ. ಆದರೆ ಕುಡಿತ ಮತ್ತು ಪೋಕರಿಗಳ ಸಂಗವಿತ್ತಲ್ಲ ಇಲ್ಲಿಗೆ ಆರು ತಿಂಗಳ ಹಿಂದೆ ಕಂಠಮಟ್ಟ ಕುಡಿದು ಗಾಡಿ ಓಡಿಸುತ್ತಿದ್ದ ಉಮೇಶ್ ಅಪಘಾತವೊಂದಕ್ಕೆ ಸಿಲುಕಿಬಿಟ್ಟ.

ಶೋಕಿಲಾಲರ ಮುಷ್ಟಿಗೆ

ಅದು ಶ್ರುತಿ ಬದುಕಿನ ದಿಕ್ಕನ್ನೇ ಬದಲಿಸಿತು. ಅಪಘಾತದಲ್ಲಿ ಕಾಲಿಗೆ ಜಖಮ್ಮಾಗಿ ಬ್ಯಾಂಡೇಜ್ ಸುತ್ತಿಸಿಕೊಂಡು ಮಲಗಿದ ಉಮೇಶನ ಆಸ್ಪತ್ರೆ ಖರ್ಚು ಮಾತ್ರವಲ್ಲದೆ ಪ್ರತಿನಿತ್ಯ ಮನೆಯ ಮತ್ತು ಮಗುವಿನ ಖರ್ಚಿಗೂ ಶ್ರುತಿ ಪರದಾಡಬೇಕಾಯಿತು. ತನ್ನೆಲ್ಲಾ ಒಡವೆಯನ್ನು ಗಿರವಿಗಿಟ್ಟಳು. ಅಪ್ಪ ಅಮ್ಮಂದಿರನ್ನು ಕಾಡಿಬೇಡಿ ಅಷ್ಟಿಷ್ಟು ಕಾಸು ತಂದು ಗಂಡನ ಚಿಕಿತ್ಸೆಗೂ ನೆರವಾದಳು. ಮೊದಲೇ ಮಗಳ ಮದುವೆಗೆಂದು ಸಾಲ ಮಾಡಿ ಸೋತಿದ್ದ ಅಪ್ಪ-ಅಮ್ಮ ತಾನೇ ಇನ್ನೆಲ್ಲಿಂದ ರೊಕ್ಕ ಹೊಂಚಲು ಸಾಧ್ಯ? ಹಾಗೇ ದಿಕ್ಕು ತೋಚದಂತಾದ ಶ್ರುತಿಗೆ ಟೀವಿ ಸೀರಿಯಲ್ ನಟಿಯ ಅವಕಾಶ ಕಲ್ಪಿಸುತ್ತೇನೆಂದು ಬಂದವನು ಶ್ರೀಕಾಂತ್ ಎಂಬ ಶೋಕಿಲಾಲ ಕಂ ಆಟೋ ಕನ್ಸಲ್ಟಂಟ್.

ಮಾಗಡಿ ಮುಖ್ಯ ರಸ್ತೆಯ ಹೇರೋಹಳ್ಳಿ ಕ್ರಾಸ್ ಸಮೀಪದ ಸಂಜಯ ನಗರದಲ್ಲಿ ಸೆಕೆಂಡ್ ಹ್ಯಾಂಡ್ ಬೈಕುಗಳನ್ನು ಖರೀದಿಸಿ ರೀಸೇಲ್ ಮಾಡುವುದನ್ನೇ ಕಸುಬಾಗಿಸಿಕೊಂಡ ಶ್ರೀಕಾಂತ್ ಹುಟ್ಟಾ ಪೋಲಿ ಮತ್ತು ಹೆಣ್ಣುಬಾಕ. ಪ್ರತಿ ಸಂಜೆಯಾದರೆ ಎಣ್ಣೆ ಬೇಕೇಬೇಕು. ಇನ್ನೂ ಮದುವೆಯಾಗಿಲ್ಲವಾದ್ದರಿಂದ ಪಕ್ಕದಲ್ಲೇ ಮನೆಯೊಂದನ್ನು ಮಾಡಿ ಅದನ್ನೇ ತನ್ನ ಶೋಕಿಗೆ ಬಳಸುತ್ತಿದ್ದ. ಈತನಿಗೊಬ್ಬಳು ಗೆಳತಿಯಿದ್ದಾಳೆ. ಆಕೆಯ ಹೆಸರು ನಾಗರತ್ನ. ಈಕೆಯದ್ದು ಯುವತಿಯರ ಶಿಕಾರಿ. ಗಾರ್ಮೆಂಟ್, ಶಾಪಿಂಗ್ ಮಾಲುಗಳು, ಸೇಲ್ಸ್‌ಗರ್ಲ್‌ಗಳಾಗಿ ಆತಂತ್ರಕ್ಕೆ ಬಿದ್ದ ಯುವತಿಯರನ್ನು ಪರಿಚಯಿಸಿಕೊಂಡು ಶೋಕಿಲಾಲರಿಗೆ ತಗುಲಿಹಾಕುವುದೇ ಈಕೆಯ ಉಪಕಸುಬು. ಅಷ್ಟಿಷ್ಟು ಸೌಂದರ್ಯ ಮೈಕಟ್ಟಿದ್ದರೆ ಸಾಕು ನಾಗರತ್ನ ಬಲೆ ಬೀಸುತ್ತಾಳೆ. ಹಾಗೆ ಈಕೆಯ ಜಾಲಕ್ಕೆ ಬಿದ್ದ ಶ್ರುತಿಯನ್ನು ಈಕೆ ಪರಿಚಯಿಸಿದ್ದು ಶೋಕಿಲಾಲ ಶ್ರೀಕಾಂತನಿಗೆ. ಮೊದಲೇ ಗಂಡ ಹಾಸಿಗೆ ಹಿಡಿದಿದ್ದರಿಂದ ಹೈರಾಣಾಗಿದ್ದ ಶ್ರುತಿಗೆ ನಾಗರತ್ನ ಚೂರುಪಾರು ಕಾಸುಕೊಟ್ಟಿದ್ದಾಳೆ. ಅದನ್ನು ಕಷ್ಟಕ್ಕೆ ಮಾಡಿದ ಉಪಕಾರವೆಂದೇ ಶ್ರುತಿ ಭಾವಿಸಿದ್ದಾಳೆ. ಕ್ರಮೇಣ ನಾಗರತ್ನಳ ಪ್ರಭಾವ ಪರಿಣಾಮ ಬೀರಿದೆ. 'ನೋಡು ಮನೆಯಲ್ಲೇ ಕೂತ್ರೆ ಕಾಸು ಹುಟ್ಟಲ್ಲ. ನಾಲ್ಕು ಕಾಸು ದುಡೀಬೇಕು ಅಂದ್ರೆ ಎಲ್ಲಕ್ಕೂ ರೆಡಿಯಾಗಬೇಕು. ನೋಡಕ್ಕೆ ಇಷ್ಟೊಂದು ಚಂದಾಕ್ಕಿದೀಯ. ಮನಸ್ಸು ಮಾಡಿದ್ರೆ ನೀನು ಸಿನಿಮಾ ಹೀರೋಯಿನ್ನಾಗೋದು ಕಷ್ಟವಾ?' ಎಂದ ನಾಗರತ್ನ ಬತ್ತಿಯಿಟ್ಟಿದ್ದು ಶ್ರುತಿಗೆ ಆಕರ್ಷಕವಾಗೇ ಕಂಡಿರಬೇಕು.

ಅಲ್ಲಿಂದ ನಾಗರತ್ನಳ ಸಹವಾಸಕ್ಕೆ ಬಿದ್ದ ಶ್ರುತಿ ನೇರವಾಗಿ



ಕಾಲಿಟ್ಟಿದ್ದು ಹೇರೋಹಳ್ಳಿ ಕ್ರಾಸಿನ ಐನಾತಿ ಶ್ರೀಕಾಂತನ ಅಡ್ಡೆಯಲ್ಲಿ. ಮೂಲತಃ ಚಿಕ್ಕಬಳ್ಳಾಪುರದ ಶ್ರೀಕಾಂತನಿಗೆ ಇಂಥ ಹುಡುಗಿಯರನ್ನು ಪಟಾಯಿಸುವುದು ಚಿಟಿಕೆ ಹೊಡೆದಷ್ಟೇ ಸಲೀಸು. ನನಗೆ ದುನಿಯಾ ಸೂರಿ ಗೊತ್ತು, ಹಂಸಲೇಖಾ ಗೊತ್ತು, ಕೊಬ್ರಿ ಮಂಜು ಗೊತ್ತು ಎಂದೆಲ್ಲಾ ರೈಲು ಬಿಡುತ್ತಾನೆ. ಇಂತಿಂಥಾ ಚಿತ್ರಕ್ಕೆ ನಾನೇ ಹೇಳಿ ಫೈನಾನ್ಸ್ ಮಾಡಿಸಿದ್ದು ಎಂದೂ ಡೈಲಾಗು ಹೊಡೆಯುತ್ತಾನೆ. ಮೊದಮೊದಲು ಖರ್ಚಿಗೆಂದು ಅಷ್ಟಿಷ್ಟು ಕಾಸು ಕೊಡುತ್ತಾನೆ. ತಾಪತ್ರಯದ ಹುಡುಗಿಯೇನಾದರೂ ಯಾವಾಗ ರೊಕ್ಕಕ್ಕೆ ಕೈಚಾಚಿದಳೆಂದರೆ ಮುಗಿದೇಹೋಯಿತು.

ರಾತ್ರಿಗೋಷ್ಠಿಯಲ್ಲಿ

ಆದರೆ ಬಡಪಾಯಿ ಶ್ರುತಿಗಿದು ಗೊತ್ತಾಗಬೇಕಲ್ಲ. ಏನೋ ಸಹಾಯ ಮಾಡುತ್ತಿದ್ದಾನೆಂದೇ ಶ್ರೀಕಾಂತ್ ಕೊಟ್ಟ ಕಾಸಿಗೆ ಕೈಚಾಚಿದ್ದಾಳೆ. ಶ್ರೀಕಾಂತ್‌ಗೆ ಟೀವಿ ಸೀರಿಯಲ್ಲುಗಳ ಶೂಟಿಂಗ್‌ಗಳಿಗೆಂದೇ ಹುಡುಗಿಯರನ್ನು ಸರಬರಾಜು ಮಾಡುವ ಕೋ-ಆರ್ಡಿನೇಟರ್ ರಾಹುಲ್ ಎಂಬಾತ ಪರಿಚಯ. ಆತನ ಮೂಲಕ ಒಂದಷ್ಟು ಸೀರಿಯಲ್ಲುಗಳಲ್ಲಿ 'ದಿನಗೂಲಿ' ಪಾತ್ರಗಳನ್ನೂ ಕೊಡಿಸಿ ಕೊಟ್ಟ. ಕ್ರಮೇಣ ರವಿಗರಣಿಯ 'ಅವನು ಮತ್ತು ಶ್ರಾವಣಿ' ಧಾರಾವಾಹಿಯ ಶೂಟಿಂಗ್‌ಗೆ ಬರತೊಡಗಿದಳು. ಶ್ರೀಕಾಂತನ ಹಿಕಮತ್ತಿಗೆ ಬಲಿಯಾಗಿದ್ದ ಶ್ರುತಿಗೆಂದು ರಾಹುಲ್‌ನೇ ಶಿಫಾರಸು ಮಾಡಿ 'ಅವನು ಮತ್ತು ಶ್ರಾವಣಿ'ಯಲ್ಲಿ ಹೀರೋಯಿನ್ ಗೆಳತಿಯ ಪಾತ್ರವೂ ದೊರಕಿತ್ತು. ದಿನಗೂಲಿ ಲೆಕ್ಕದಲ್ಲಿ ಚೂರುಪಾರು ಕಾಸೂ ಹುಟ್ಟುತ್ತಿತ್ತು. ಆದರೆ ಇದೇ ತನ್ನ ಪ್ರಾಣಕ್ಕೂ ಕುತ್ತಾದೀತೆಂಬ ನಿರೀಕ್ಷೆ ತಾನೇ ಆಕೆಗೆಲ್ಲಿತ್ತು?

ಅದು ಮೊನ್ನೆ ಅಂದರೆ 2016ರ ಫೆಬ್ರವರಿ 29ನೇ ತಾರೀಖು. ಕನಿಷ್ಠ ವಾರಕ್ಕೊಮ್ಮೆಯಾದರೂ ಶ್ರೀಕಾಂತ್ ತನ್ನ ಮನೆಯಲ್ಲಿ ರಾತ್ರಿ ಪಾರ್ಟಿ ಮಾಡುತ್ತಿದ್ದ. ಅಲ್ಲಿಗೆ ನಾಗರತ್ನ ಕಾಯಂ ಅತಿಥಿ. ಒಂದೆರಡು ಬಾರಿ ಶ್ರುತಿಯನ್ನೂ ಕರೆದೊಯ್ದಿದ್ದಳು. ಹಾಗೆ ಹೋದಾಗೆಲ್ಲ ಪಾರ್ಟಿಯ ನಂತರ ನಡೆಯುವುದೇನೆಂಬುದು ಶ್ರುತಿಗೆ ಗೊತ್ತಿತ್ತಾದರೂ ತಾನು ಮಾತ್ರ ಕಂಡೂ ಕಾಣದಂತಿದ್ದರಾಯ್ತೆಂದು ಸುಮ್ಮನಿರುತ್ತಿದ್ದಳು. ಎಷ್ಟೆಂದರೂ ಶ್ರೀಕಾಂತ್‌ನಿಂದ ಸಹಾಯ ಪಡೆದಿದ್ದರು ಋಣವಿತ್ತಲ್ಲ?

ಫೆಬ್ರವರಿ 29ರ ರಾತ್ರಿಯೂ ಅಂಥದ್ದೇ ಪಾರ್ಟಿಯಿರಬೇಕೆಂದು ಲೆಕ್ಕ ಹಾಕಿಯೇ ಶ್ರುತಿ ನಾಗರತ್ನಳೊಂದಿಗೆ ಬಂದಿದ್ದಾಳೆ. ರಾತ್ರಿ 8ರ ಹೊತ್ತಿಗೆ ಇಬ್ಬರೂ ಶ್ರೀಕಾಂತನ ಮನೆಗೆ ಬಂದಿದ್ದಾರೆ. ಆದರೆ ಆವತ್ತು ಶ್ರೀಕಾಂತ್ ಜೊತೆ ಗಿರೀಶ್ ಎಂಬ ಮತ್ತೊಬ್ಬ ಸೊಕ್ಕಿನ ಆಸಾಮಿಯಲ್ಲದೆ ಇನ್ನು ಒಬ್ಬ ಹುಡುಗನಿದ್ದ. ಮೂವರು ಶೋಕಿಲಾಲರು ಇಬ್ಬರು ಹುಡುಗಿಯರು. ಇವತ್ತು ರಾತ್ರಿ ಶೂಟಿಂಗ್ ಇದೆ ಎಂದು ಮಗುವನ್ನು ಸಂಭಾಳಿಸುವಂತೆ ಗಂಡ ಉಮೇಶನಿಗೆ ಹೇಳಿಬಂದಿದ್ದ ಶ್ರುತಿ ಲಾಯಕ್ಕಾಗೇ ಊಟ ಮಾಡಿದ್ದಾಳೆ. ಜೊತೆಗಿದ್ದ ನಾಗರತ್ನ ಕುಡಿದಿರಬೇಕು. ನಡುರಾತ್ರಿತನಕ ಪಾರ್ಟಿ ರಂಗಾಗಿಯೇ ನಡೆದಿದೆ. ಅದೇನಾಯಿತೋ ಗೊತ್ತಿಲ್ಲ. ಬೆಳಗಿನ ಜಾವಕ್ಕೆ ಶ್ರೀಕಾಂತ್ ಮತ್ತಾತನ ಗೆಳೆಯರು ಶ್ರುತಿಯ ನಿಶ್ಚಲ ಕಾಯವನ್ನು ಕಾರಿಗೆ ಹಾಕಿಕೊಂಡಿದ್ದೇ ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ತಂದಿದ್ದೇ 'ಬೇಜಾರ್ ಮಾಡ್ಕೊಂಡು ನೇಣಾಕ್ಕೊಂಡಿದ್ದಾಳೆ ಸಾರ್, ಏನು ಸಾರ್ ಮಾಡೋದು ಎಲ್ಲಾ ನಂ ಕರ್ಮ...?' ಎಂದು ಏನೇನೋ ಕುಡಿದ ಮತ್ತಿನಲ್ಲಿ ಗೊಣಗಾಡಿದ್ದಾರೆ.

ಡಿಸಿಪಿಯ ಪ್ರವೇಶ?

ಶ್ರುತಿ ಹೆಣವಾಗಿದ್ದು ಶ್ರೀಕಾಂತ್ ಮತ್ತಾತನ ಪೋಲಿ ಸಹಚರರಿಗೆ ಚೆನ್ನಾಗಿಯೇ ಗೊತ್ತಿತ್ತಾದರೂ ಏನೂ ನಡೆದೇ ಇಲ್ಲವೆಂಬಂತೆ ನಟಿಸಿದ್ದಾರೆ. ಶ್ರುತಿ ತಮ್ಮ ಸುನೀಲನ ಮೊಬೈಲಿಗೆ ಶ್ರೀಕಾಂತನೇ ಫೋನ್ ಮಾಡಿ ನಿಮ್ಮಕ್ಕನಿಗೆ ಹುಷಾರಿಲ್ಲ ಬೇಗ ಬಾ ಎಂದು ಕರೆದಿದ್ದಾನೆ. ಆಸ್ಪತ್ರೆಗೆ ಬಂದವನೇ ಸುನೀಲ ಶ್ರುತಿ ಗಂಡ ಉಮೇಶನಿಗೆ ಫೋನಾಯಿಸಿ ಎದೆ ಬಡಕೊಂಡಿದ್ದಾನೆ. 'ಏನ್ ಗುರೂ ಮಾಡೋದು?-ರಾತ್ರಿ ಲೇಟಾಯ್ತು ಇಲ್ಲೇ ಮಲಕ್ಕೋತೀನಿ ಎಂದ ನಿಮ್ಮಕ್ಕ ನೇಣಾಕ್ಕೊಂಡವ್ಳೆ...' ಎಂದು ಶ್ರೀಕಾಂತ್ ಹೇಳಿದ್ದನ್ನೇ ನಂಬಿದ ತಮ್ಮ ಸುನೀಲ ಮತ್ತು ಗಂಡ ಉಮೇಶ್ ನೇರವಾಗಿ ಮಾರನಾಯಕನಹಳ್ಳಿ ಪೊಲೀಸ್ ಠಾಣೆಗೆ ಬಂದಿದ್ದೇ ಶ್ರೀಕಾಂತ್ ಮತ್ತಾತನ ಗೆಳೆಯರೇ ಹೊಡೆದು ಕೊಂದಿದ್ದಾರೆಂದು ದೂರು ಕೊಟ್ಟಿದ್ದಾರೆ.

ಸ್ಥಳಕ್ಕೆ ಬಂದ ಮಾದನಾಯಕನಹಳ್ಳಿ ಎಸ್‌ಐ ಸುರೇಶ್ ಮತ್ತು ಸಿಬ್ಬಂದಿ ಶ್ರೀಕಾಂತನನ್ನು ಬಂಧಿಸಿ ಕರೆತಂದರಾದರೂ ಆತನ ಜೊತೆಗಿದ್ದ ಗಿರೀಶ ಮತ್ತಾತನ ಗೆಳೆಯನನ್ನು ಮಾತು ಕೂಡ ಆಡಿಸಿಲ್ಲ. ಹಕೀಕತ್ತೇನೆಂದರೆ ಈ ಗಿರೀಶ ಬೇರೆ ಯಾರೂ ಅಲ್ಲ ಸದ್ಯ ಪೊಲೀಸ್ ಇಲಾಖೆಯ ಪ್ರಭಾವಿ ಹುದ್ದೆಯಲ್ಲಿರುವ ಡಿಸಿಪಿ ರ್‍ಯಾಂಕಿನ ಬಲಾಢ್ಯ ಕೋಮಿನ ಅಧಿಕಾರಿಯೊಬ್ಬರ ಪ್ರೇಯಸಿ ಕಂ ಎರಡನೇ ಪತ್ನಿಯ ಖಾಸಾ ತಮ್ಮ!


ಮಾದನಾಯಕನ ಹಳ್ಳಿ ಸೇರಿದಂತೆ ನೆಲಮಂಗಲದ ಪೊಲೀಸ್ ಇನ್ಸ್‌ಪೆಕ್ಟರ್ ಆಗಿರುವ ಪರಮೇಶ್ ದಿಟ್ಟ ಅಧಿಕಾರಿಯೆ. ಆದರೆ ನೆಲಮಂಗಲಕ್ಕೆ ಡಿವೈಎಸ್‌ಪಿ ಯಾಗಿರುವುದು ರಾಜೇಂದ್ರಕುಮಾರ್. ಅದೇನು ಪ್ರಭಾವಳಿ ಕೆಲಸ ಮಾಡಿತೋ ಕೊಲೆ ಕೇಸು ದಾಖಲಿಸಬೇಕಿದ್ದ ಮಾದನಾಯಕನಹಳ್ಳಿ ಪೊಲೀಸರು ಯಕಶ್ಚಿತ್ ಆತ್ಮಹತ್ಯೆಯ ಕೇಸು ದಾಖಲಿಸಿದ್ದಾರೆ. ಆತ್ಮಹತ್ಯೆಗೆ ಪ್ರಚೋದನೆ ಕೊಟ್ಟನೆಂದು ಶ್ರೀಕಾಂತ್‌ನನ್ನು ಕಾಟಾಚಾರದ ಸೆಕ್ಷನ್ನು ವಿಧಿಸಿ ಕೋರ್ಟಿಗೆ ಕರೆತಂದಿದ್ದಾರೆ. ಕೋರ್ಟು ನಿರಾಯಾಸವಾಗಿ ಜಾಮೀನು ನೀಡಿದೆ. ಸಣ್ಣದೊಂದು ಶಿಕ್ಷೆ, ರವಷ್ಟು ಪಶ್ಚಾತ್ತಾಪ, ಕಾಟಾಚಾರದ ಪ್ರಾಯಶ್ಚಿತ್ತ ಯಾವುದೂ ಇಲ್ಲದೆ ಕೊಂದಷ್ಟೇ ರಾಜಾರೋಷವಾಗಿ ಶಿಕ್ಷೆಯಿಂದಲೂ ಪಾರಾಗಿದ್ದಾನೆ ಶೋಕಿಲಾಲ ಶ್ರೀಕಾಂತ. ಗಂಡ ಎದೆಬಡಿದುಕೊಂಡಿದ್ದೇ ಬಂತು.

ಹೆತ್ತವರ ಸಂಕಟಕ್ಕೆ ಯಾವ ಕಿಮ್ಮತ್ತು? ಇನ್ನೂ ವರ್ಷ ತುಂಬದ ಶ್ರುತಿಯ ಅನಾಥಮಗುವಿಗೆ ತಾನಿನ್ನೂ ತಬ್ಬಲಿಯೆಂಬುದು ಅರ್ಥವಾಗದಂಥ ಕುತ್ತು. ಟೀವಿ ನಟಿಯರ ಹಿತರಕ್ಷಣೆಗೆಂದು ಯಾವ ಮಹಿಳಾ ಸಂಘಟನೆ ತಾನೇ ಬದ್ದಿತು? ಇನ್ನು ಮಹಿಳಾ ಆಯೋಗದ ಮೊರೆ ಹೋಗುವಷ್ಟು ಪರಿವೆಯಾದರೂ ಶ್ರುತಿಯ ತಂದೆತಾಯಿಗಳಿಗೆಲ್ಲಿಯದು?

ಬಲಿಯಾದ ನಟಿಯ ದುರ್ಗತಿಗಾಗಿ ಯಾರೂ ಮರುಗಲಿಲ್ಲ, ಯಾರೂ ಕೊರಗಲಿಲ್ಲ. ಏಕೆಂದರೆ ಬೀದಿನಾಯಿಗೂ ಕೂಲಿ ನಟಿಗೂ ಹೆಚ್ಚು ವ್ಯತ್ಯಾಸವೇನಿಲ್ಲವಲ್ಲ?

■ ರಾ. ಸೋಮನಾಥ್

ಹುಬ್ಬಳ್ಳಿ: ಟಾಟಾ ಕಂಪನಿಯ ಲಾಕೌಟ್ ಬೆದರಿಕೆ!



ಒಬ್ಬರೋಬ್ಬರಿ ಒಂದು ತಿಂಗಳಾಯಿತು ಹುಬ್ಬಳ್ಳಿಯ ಟಾಟಾ ಮಾರ್ಕೊಪೊಲೋ ಕಂಪನಿ ಬಂದ್ ಆಗಿ. ಅದನ್ನೇ ನಂಬಿದ್ದ ಸಾವಿರಾರು ಕಾರ್ಮಿಕರ ಬದುಕು ಬೀದಿಗೆ ಬೀಳುವಂತಾಗಿದ್ದರೂ ಕೈಗಾರಿಕಾ ಸಚಿವರಾಗಲಿ, ಕಾರ್ಮಿಕ ಸಚಿವನಾಗಲಿ ಇತ್ತ ತಲೆ ಹಾಕಿ ವಿಚಾರಿಸಿಲ್ಲ. ಬದಲಿಗೆ, ಡಿಸಿ, ಎಸ್ಪಿ ಆದಿಯಾಗಿ ಇಡೀ ಜಿಲ್ಲಾಡಳಿತವೇ ಕಂಪನಿಯ ಹಠಮಾರಿ ಆಡಳಿತ ಮಂಡಳಿಯ ಗುಲಾಮರಂತೆ ವರ್ತಿಸುತ್ತಿದ್ದಾರೆ. ಕಾರ್ಮಿಕರ ದನಿಯಡಗಿಸುವ ಕೆಲಸ ಸರ್ಕಾರಿ ಯಂತ್ರದಿಂದಲೇ ಅಚ್ಚುಕಟ್ಟಾಗಿ ನಡೆಯುತ್ತಿದೆ.

ತನ್ನ ಕೈಗಾರಿಕೆಯ ಮೂಲಕ ಸಹಸ್ರಾರು ಮಂದಿಗೆ ಉದ್ಯೋಗ ಕಲ್ಪಿಸಿಕೊಡುತ್ತೇನೆ, ದೇಶದ ಆರ್ಥಿಕತೆಯನ್ನೆ ಉತ್ತುಂಗಕ್ಕೆ ಕೊಂಡೊಯ್ಯುತ್ತೇನೆ ಅನ್ನುತ್ತಲೇ ಧಾರವಾಡದ ಹತ್ತಿರ ಟಾಟಾ ಮಾರ್ಕೊಪೊಲೋ ಕಂಪನಿ ಸರ್ಕಾರದ ರಿಯಾಯಿತಿ ದರದಲ್ಲಿ ಎಲ್ಲಾ ಸೌಲಭ್ಯಗಳನ್ನು ಮತ್ತು ಸುಮಾರು 600 ಎಕರೆ



ಮಾರ್ಕೊಪೋಲೋ ಕಂಪನಿ

ಜಮೀನನ್ನು ಪಡೆಯಿತು. ಆದರೆ ಅದರಲ್ಲಿ ಬಳಕೆಯಾಗುತ್ತಿರುವುದು ಕೇವಲ 200 ಎಕರೆ ಮಾತ್ರ. ತಾನೇ ಹೇಳಿಕೊಳ್ಳುವ ಹಾಗೇ ಕಂಪನಿ 1 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಿದೆ. ಈ ಕಂಪನಿಯಲ್ಲಿ 1800 ನೌಕರರಿದ್ದಾರೆ. ಇವರಿಗೆಲ್ಲ 13,000 ರೂಪಾಯಿ ವೇತನ ನೀಡಲಾಗುತ್ತಿದೆ. ಪ್ರತಿ ತಿಂಗಳು ಸುಮಾರು 6 ಕೋಟಿಯನ್ನು ವೇತನವಾಗಿ ನೀಡುತ್ತಿದೆ. ಇದನ್ನೇ ತನ್ನ ಹೆಮ್ಮೆ ಎಂದುಕೊಂಡಿರುವ ಕಂಪನಿ ನಾವು ಉಳಿದವರಿಗಿಂತ ಹೆಚ್ಚು ವೇತನ ನೀಡುತ್ತಿದ್ದೇವೆ, ಹಾಗಾಗಿ ಗುಲಾಮರಾಗಿ ದುಡಿಯಬೇಕೆ ಹೊರತು ಕಾರ್ಮಿಕರು ಹಕ್ಕುಗಳನ್ನು ಕೇಳಬಾರದು ಅನ್ನೋ ಧೋರಣೆ ಈ ಆಡಳಿತ ಮಂಡಳಿಯದ್ದು.

ಇಂತಹ ಸರ್ವಾಧಿಕಾರಿ ಧೋರಣೆಯನ್ನು ಧಿಕ್ಕರಿಸಲೆಂದೇ ಸಿಪಿಎಂಎಲ್ ನೇತೃತ್ವದ ಕ್ರಾಂತಿಕಾರಿ ಯೂನಿಯನ್ ತಲೆ ಎತ್ತಿತು. ಕಂಪನಿಯ ಬಹುಪಾಲು ಕಾರ್ಮಿಕರು ಇದರ ಸದಸ್ಯರು. ಅವರೆಲ್ಲರ ನೇತೃತ್ವದಲ್ಲಿ ಒಂದಷ್ಟು ಕಾನೂನುಬದ್ಧ ಬೇಡಿಕೆಗಳನ್ನು ಯೂನಿಯನ್ ಆಡಳಿತ ಮಂಡಳಿಯ ಮುಂದಿಟ್ಟಿದೆ. ಯಾವಾಗ ಕಾರ್ಮಿಕರು ಜಾಗೃತರಾಗಿ ತಮ್ಮ ದಬ್ಬಾಳಿಕೆ ವಿರುದ್ಧ ಹೋರಾಟಕ್ಕೆ ಇಳಿದರೋ ಆಗಲೇ ಆಡಳಿತ ಮಂಡಳಿಯ ಕುಯುಕ್ತಿ ಆರಂಭವಾಯಿತು. ಕುಂಟು ನೆಪವೊಡ್ಡಿ ಯೂನಿಯನ್ ಇಬ್ಬರು ನಾಯಕರನ್ನು ಅಮಾನತು ಮಾಡಿದರು. ಈ ವಿಷಯ ಇನ್ನೂ ಕಾರ್ಮಿಕ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಕಾರ್ಮಿಕರ ಪರವಾಗಿ ತೀರ್ಪು ಬರುವ ಸಂಭವವೇ ದಟ್ಟವಾಗಿದೆ. ಕಾರ್ಮಿಕರಲ್ಲಿ ಭಯ ಹುಟ್ಟಿಸುವ ಉದ್ದೇಶದಿಂದ ಇಂತಹ ಕೆಲಸಕ್ಕೆ ಕೈಹಾಕಿದ್ದರು. ಆದರೆ ಆ ಪ್ರಕರಣದ ನಂತರ ಕಾರ್ಮಿಕರು ಮತ್ತಷ್ಟೂ ಒಗ್ಗಟ್ಟಾದದ್ದನ್ನು ಕಂಡು ಮಾಲೀಕರಿಗೇ ಭಯ ಶುರುವಾಗಿತ್ತು.

ಕಾರ್ಮಿಕರ ಯೂನಿಯನ್ನನ್ನು ದುರ್ಬಲಗೊಳಿಸಲು ಮಾಲೀಕ ವರ್ಗದಿಂದ ಇನ್ನಿಲ್ಲದ ಕಸರತ್ತುಗಳು ನಡೆಯುತ್ತಲೇ ಬಂದಿವೆ. ಅದರ ಒಂದು ಭಾಗವಾಗಿ ಹುಟ್ಟಿಕೊಂಡದ್ದೇ ಆಡಳಿತ ಮಂಡಳಿಯ ಮೂಗಿನ ನೇರಕ್ಕೆ ನಡೆಯುವ ಕೆಲ ಚೇಲಾಗಳ ಪರ್ಯಾಯ ಕಾರ್ಮಿಕ ಸಂಘ. ಮಾಲೀಕ ವರ್ಗವೇ ಮುಂದೆ ನಿಂತು ಈ ಸಂಘವನ್ನು ನೋಂದಣಿ ಮಾಡಿಸಿದ್ದಾರೆ. ಇದಕ್ಕೆ ಅಭಿಷೇಕ್ ದೇಸಾಯಿ ಎಂಬಾತನನ್ನು ಅಧ್ಯಕ್ಷನನ್ನಾಗಿ ಮಾಲೀಕರೇ ನೇಮಕ ಮಾಡಿದ್ದಾರೆ. ಕಂಪನಿಯ ಜೊತೆ ಯಾವುದೇ ಮಾತುಕತೆ ನಡೆಯಬೇಕಿದ್ದರೂ ಈತನ ಮೂಲಕವೇ ಮಾತನಾಡಬೇಕು; ಕಾರ್ಮಿಕ ಯೂನಿಯನ್‌ಗೆ ಇಲ್ಲಿ ಮನ್ನಣೆಯೇ ಇಲ್ಲ ಎನ್ನುವ ವಾತಾವರಣ ಸೃಷ್ಟಿ ಮಾಡಿದ್ದಾರೆ. ಕ್ರಾಂತಿಕಾರಿ ಕಾರ್ಮಿಕ ಯೂನಿಯನ್ ಸದಸ್ಯರಿಗೆ ಕಿರುಕುಳ ನೀಡುವುದೇ ಕಾಯಕ ಮಾಡಿಕೊಂಡಿರುವ ಕಂಪನಿ ಕುಳಿತರು, ನಿಂತರು, ಒಬ್ಬರಿಗೊಬ್ಬರು ಮಾತನಾಡಿದರು ನೋಟಿಸ್ ಜಾರಿಗೊಳಿಸುತ್ತಿದೆ.

ಕಂಪನಿಯಲ್ಲ, ವರ್ಕ್‌ಶಾಪ್!

ಅಸಲಿಗೆ ತಾನು ಐಷಾರಾಮಿ ವಾಹನಗಳನ್ನು ನಿರ್ಮಾಣ ಮಾಡ್ತೀನಿ ಅಂತ ಹೇಳಿಕೊಳ್ಳುವ ಮಾರ್ಕೊಪೊಲೊ ಕಂಪನಿಯಲ್ಲಿ ಯಾವ ಪ್ರಧಾನ ಉತ್ಪಾದನೆಯೂ ನಡೆಯುವುದಿಲ್ಲ! ಬೇರೆಬೇರೆ ಕಂಪನಿಗಳಿಂದ ತರಿಸಿಕೊಂಡ ಬಿಡಿಭಾಗಗಳನ್ನು ಫಿಟ್ ಮಾಡುವ ಮೆಕ್ಯಾನಿಕ್ ವರ್ಕ್‌ಶಾಪ್ ಕಾಯಕವಷ್ಟೇ ಕಂಪನಿಯದ್ದು. ಟಾಟಾ ಮಾರ್ಕೊಪೊಲೋ ಕಂಪನಿ ತಾನೇನು ಸಂಪೂರ್ಣವಾಗಿ ಬಸ್‌ಗಳನ್ನು ನಿರ್ಮಾಣ ಮಾಡುವುದಿಲ್ಲ. ಈ ಬಸ್‌ಗಳ ನಿರ್ಮಾಣಕ್ಕೆ ಅಗತ್ಯವಾದ ಬಿಡಿ ಸಾಮಗ್ರಿಗಳನ್ನು ಬೇರೆಡೆಯಿಂದ ಖರೀದಿಸುತ್ತದೆ. ಈ ಪೈಕಿ ಜಾನ್ಸನ್ ಕಂಟ್ರೋಲ್ ಆಟೋಮೋಟಿವ್ ಕಂಪನಿ ಸೀಟುಗಳನ್ನು ಪೂರೈಕೆ ಮಾಡಿದರೆ, ಬಸ್ ಬಾಗಿಲುಗಳನ್ನು ಸಾಕೇಟ್ ಮೆಟಿರಿಯಲ್ಸ್ ಕಂಪನಿ ಪೂರೈಸುತ್ತದೆ. ಇನ್ನುಳಿದಂತೆ ಗ್ಲಾಸ್, ಕಿಟಕಿ, ಮೆಟಲ್ ಫೈವುಡ್, ಎ.ಸಿ. ಸಾಮಗ್ರಿ, ಡ್ಯಾಶ್‌ಬೋರ್ಡ್. ಮುಂತಾದ ಬಿಡಿಭಾಗಗಳನ್ನು ಇರಪಾಕ್ಸ್ ಸೇಫ್ಟಿ ಕಂಪನಿಯಿಂದ ಖರೀದಿ ಮಾಡಲಾಗುತ್ತದೆ. ಹೀಗೆ ಬೇರೆ ಕಂಪನಿಗಳಿಂದ ಖರೀದಿಸಿದ ಬಿಡಿಭಾಗಗಳನ್ನೇ ಜೋಡಿಸಿ ತನ್ನ ಹೆಸರಲ್ಲಿ ಬಸ್ ತಯಾರಿಸಿ ಮಾರಾಟ ಮಾಡುತ್ತಿದೆ. ಆದರೂ ಆಡಳಿತಮಂಡಳಿಯಲ್ಲಿ, ತಾನೇ ಇವರಿಗೆಲ್ಲ ಅನ್ನ ಹಾಕುತ್ತಿದ್ದೇನೆ; ನೂರಾರು ಕಾರ್ಮಿಕರನ್ನು ಸಾಕುತ್ತಿದ್ದೇನೆ; ನನ್ನಿಂದಲೇ ಎಲ್ಲಾ ಅನ್ನುವ ಅಹಂಗೇನೂ ಕಮ್ಮಿ ಇಲ್ಲ. ನಾವು ಲಾಕೌಟ್ ಘೋಷಿಸಿದರೆ ನಿಮ್ಮ ಬದುಕು ಹೇಗೆ ಛಿದ್ರವಾಗುತ್ತೆ ನೋಡಿ ಅಂತ ಬೆದರಿಸೋ ಭಾಗವಾಗೇ ಕಳೆದೊಂದು ತಿಂಗಳಿನಿಂದ ಕಂಪನಿಯನ್ನು ಬಂದ್ ಮಾಡಿಸಿ ಕಾರ್ಮಿಕರಲ್ಲಿ ಅಭದ್ರತೆ ಭಾವನೆ ಮೂಡಿಸಲು ಹವಣಿಸುತ್ತಿದ್ದಾರೆ.


ಸರ್ಕಾರದ ಸಲಾಮು

ಇತ್ತ ಮಾರ್ಕೊಪೊಲೊ ಕಂಪನಿ ಕಾರ್ಮಿಕ ಕಾನೂನುಗಳನ್ನೆಲ್ಲ ರಾಜಾರೋಷವಾಗಿ ಗಾಳಿಗೆ ತೂರಿ ಬಂದ್ ಮಾಡಿಕೊಂಡು ಕೂತಿದ್ದರೆ, ಆಡಳಿತ ಮಂಡಳಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾದ ಸರ್ಕಾರ ಕಣ್ಣು ಕಿವಿ ಮುಚ್ಚಿಕೊಂಡು ಮಾಲೀಕರ ದಲ್ಲಾಳಿಯವರಂತೆ ವರ್ತಿಸುತ್ತಿದೆ. ಕಾರ್ಮಿಕ ರ್‍ಯಾಲಿಗೆ ಪ್ರತಿಯಾಗಿ ಡಿಸಿ ರಾಜೇಂದ್ರ ಚೋಳ ನಡೆದುಕೊಂಡ ರೀತಿಯೇ ಇದನ್ನು ಸಾಬೀತು ಮಾಡುತ್ತದೆ.

ಕಂಪನಿಯ ಹಠವನ್ನು ಖಂಡಿಸಿ ಜನವರಿ 31ರಂದು ಕಾರ್ಮಿಕ ರ್‍ಯಾಲಿಯನ್ನು ನಡೆಸಲು ಕಾರ್ಮಿಕರು ನಿರ್ಧರಿಸಿದ್ದರು. ಅವತ್ತು ಭಾನುವಾರ, ರಜಾ ದಿನ. ಸಾರ್ವಜನಿಕರಿಗೆ ತೊಂದರೆಯಾಗುವ ಸಂಭವವೇ ಇಲ್ಲ, ಅಷ್ಟಕ್ಕೂ ಅವತ್ತು ಕಾರ್ಮಿಕರು ನಡೆಸಲು ಉದ್ದೇಶಿಸಿದ್ದು ರ್‍ಯಾಲಿಯನ್ನೇ ಹೊರತು, ಪ್ರತಿಭಟನೆಯನ್ನಲ್ಲ. ಹಾಗಾಗಿ ಅನುಮತಿ ನಿರಾಕರಿಸುವ ಯಾವ ಕಾನೂನುಬದ್ಧ ಅಧಿಕಾರವೂ ಜಿಲ್ಲಾಡಳಿತದ ಮುಂದಿರಲಿಲ್ಲ. ಆದರೆ ಕಂಪನಿಯ ಮಾಲೀಕ ವರ್ಗಕ್ಕೆ ಮಾರಿಕೊಂಡಂತೆ ವರ್ತಿಸಿದ ಜಿಲ್ಲಾಧಿಕಾರಿಗಳು ರ್‍ಯಾಲಿ ನಡೆಸಲು ಕಾರ್ಮಿಕರಿಗೆ ಅನುಮತಿಯನ್ನೇ ನಿರಾಕರಿಸಿದರು.

ಕಾರ್ಮಿಕರು ಒಂದು ಮೆರವಣಿಗೆ ತೆಗೆದರೆ, ಸಭೆ ನಡೆಸಿದರೆ ಟಾಟಾ ಕಂಪನಿ ಎಲ್ಲಿ ಕರ್ನಾಟಕ ಬಿಟ್ಟು ಓಡಿಹೋಗುತ್ತದೋ ಅನ್ನೋ ಭೀತಿ ಧಾರವಾಡ ಜಿಲ್ಲಾಧಿಕಾರಿಯನ್ನು ಕಾಡಿತ್ತಂತೆ. ಪೊಲೀಸ್ ವರಿಷ್ಠಾಧಿಕಾರಿ ವಂಶಿಕೃಷ್ಣ ಕೂಡಾ ಮಾಲೀಕರ ಬೆಂಬಲಕ್ಕೆ ನಿಂತುಬಿಟ್ಟರು. ಕೊನೆಗೆ ಕೋರ್ಟ್ ಮೆಟ್ಟಿಲೇರಿದ ಕಾರ್ಮಿಕ ಸಂಘಟನೆ ನ್ಯಾಯಾಲಯದ ಮೂಲಕ ಅನುಮತಿಯ ಆದೇಶ ಪಡೆದು ರ್‍ಯಾಲಿ ನಡೆಸಬೇಕಾಯ್ತು! ಇದಕ್ಕೋಸ್ಕರವಾ ವಿಧಾನಸೌಧದಲ್ಲಿ ಕಾರ್ಮಿಕ ಸಚಿವಾಲಯ ಅನ್ನೋ ದಂಡಪಿಂಡ ಇಲಾಖೆ, ಅದಕ್ಕೊಬ್ಬ ಮಂತ್ರಿ ಅಂತಾ ಇರೋದು!!

ಹುಬ್ಬಳ್ಳಿಯಲ್ಲಿರುವ ಕಾರ್ಮಿಕ ಇಲಾಖೆಯ ಬಗ್ಗೆ ಹೇಳುವುದೇ ಬೇಡ. ಅದು ಮಾಲೀಕರ ಪರವಾಗಿ ಕಾರ್ಯನಿರ್ವಹಿಸುವ ಏಜೆಂಟರ ಆಫೀಸಾಗಿ ಹೋಗಿದೆ. ಈ ಕಚೇರಿಗೆ ಹೋಗುವ ಮಾಲೀಕರಿಗೆ ಮೊದಲು ಮಾಡುವ ಉಪಕಾರವೇ ಅವರ ಪರವಾಗಿ



ಕಾರ್ಮಿಕರ ರ್‍ಯಾಲಿ

ಇರುವವರ ಇನ್ನೊಂದು ಕಾರ್ಮಿಕ ಸಂಘವನ್ನು ಹುಟ್ಟುಹಾಕಿ ನೋಂದಣಿಗೊಳ್ಳಿಸಿಕೊಡುವುದು. ಆ ಮೂಲಕವೇ ಕಾರ್ಮಿಕ ಶೋಷಣೆಗೆ ಅಡಿಗಲ್ಲು ಹಾಕಲಾಗುತ್ತದೆ.

ಮಾರ್ಕೊಪೊಲೋ ಕಂಪನಿ ಲಾಕೌಟನ್ನು ಕಾನೂನು ಬಾಹಿರವಾಗಿದೆ, ಆದನ್ನು ತೆರವುಗೊಳಿಸಿ' ಅಂತ ಕಾರ್ಮಿಕ ಇಲಾಖೆಯ ಯಾವೊಬ್ಬ ಅಧಿಕಾರಿಯೂ ಸೊಲ್ಲೆತ್ತಲಿಲ್ಲ, ಬದಲಿಗೆ, ಜಿಲ್ಲಾಧಿಕಾರಿ ರಾಜೇಂದ್ರ ಚೋಳನ, ಜಿಲ್ಲಾ ಎಸ್‌ಪಿ ವಂಶಿಕೃಷ್ಣರ ಅಧ್ಯಕ್ಷತೆಯಲ್ಲಿ ಒಂದಷ್ಟು ನೆಪದ ಸಂಧಾನ ಸಭೆಗಳು ಜರುಗಿದವಷ್ಟೇ. ಅಷ್ಟಕ್ಕೂ ಆ ಸಂಧಾನ ಸಭೆಗಳಲ್ಲಿ ಕಾರ್ಮಿಕರ ಪರವಾಗಿ ಭಾಗವಹಿಸಿದ್ದು ಕ್ರಾಂತಿಕಾರಿ ಯೂನಿಯನ್‌ನ ನಾಯಕರಲ್ಲ; ಆಡಳಿತ ಮಂಡಳಿಯೇ ಹುಟ್ಟುಹಾಕಿರೋ ಚೇಲಾಗಳ ಕಾರ್ಮಿಕ ಸಂಘ. ಈಗ ನಡೆಯುತ್ತಿರುವ ಕಾರ್ಮಿಕ ಹೋರಾಟದೊಂದಿಗೆ ಸಂಬಂಧವೇ ಇಲ್ಲದವರನ್ನು ಗುಡ್ಡೆ ಹಾಕಿಕೊಂಡು ಜಿಲ್ಲಾಧಿಕಾರಿ ರಾಜೇಂದ್ರ ಚೋಳ ಅದಿನ್ಯಾವ ಪರಿಹಾರ ಕಂಡುಹಿಡಿದಾರು?

ಅಷ್ಟಕ್ಕೂ ಕಾರ್ಮಿಕರು ರ್‍ಯಾಲಿ ನಡೆಸಬಾರದು, ಸಮಾವೇಶ-ಸಭೆ ಹಮ್ಮಿಕೊಳ್ಳಬಾರದು ಎನ್ನುವ ಫರ್ಮಾನು ಹೊರಡಿಸುವ ಜಿಲ್ಲಾಡಳಿತದ ಸೆರಗಲ್ಲಿ ನ್ಯಾಯ ಸಿಗುತ್ತದೆಂಬ ಯಾವ ಖಾತರಿಯೂ ಕಾರ್ಮಿಕರಿಗೆ ಉಳಿದಿಲ್ಲ. ಹುಬ್ಬಳ್ಳಿ-ಧಾರವಾಡ ವ್ಯಾಪ್ತಿಯಲ್ಲಿ ಬಹಳಷ್ಟು ಕಾರ್ಮಿಕ ಸಂಘಟನೆಗಳಿದ್ದರೂ ಅವ್ಯಾವುವೂ ಬಹಿರಂಗವಾಗಿ ಈ ಕಾರ್ಮಿಕರ ಬೆಂಬಲಕ್ಕೆ



ನಿಲ್ಲದಿರುವುದು ಮತ್ತೊಂದು ಬಗೆಯ ಅನುಮಾನವನ್ನು ಹುಟ್ಟಿಸಿದೆ. ಧಾರವಾಡದ ವಾಣಿಜ್ಯ ಮಂಡಳಿಯ ಅಧ್ಯಕ್ಷ ರಮೇಶ್ ಪಾಟೀಲ 'ಮಾರ್ಕೊಪೊಲೋ ಕಾರ್ಖಾನೆ ಪ್ರಾರಂಭವಾಗಬೇಕು. ಕಾರ್ಖಾನೆಯ ಕಾರ್ಮಿಕರು, ವೆಂಡರ್ಸ್ ಮತ್ತು ಇತರ ಕಾರ್ಮಿಕರ ಹಿತದೃಷ್ಟಿಯಿಂದ ಪರಿಹಾರ ಕಂಡುಕೊಳ್ಳಲು ಸಮನ್ವಯ ಸಮಿತಿ ರಚಿಸಬೇಕು' ಅನ್ನೋ ಹೇಳಿಕೆ ನೀಡಿ ಕೈತೊಳೆದುಕೊಂಡರೆ ಕಾಂಗ್ರೆಸ್ ಧುರೀಣ ಹಾಗೂ ಕೆಪಿಸಿಸಿ ಹುಬ್ಬಳ್ಳಿ ಮಾಜಿ ಅಧ್ಯಕ್ಷ ವಸಂತ ಲದವಾ ಅನ್ನೋ ಆಸಾಮಿಯಂತೂ 'ಕಾರ್ಖಾನೆ ಪುನರ್ ಆರಂಭವಾಗಬೇಕು, ಕಾರ್ಮಿಕ ಸಂಘಟನೆಗಳ ವಿರುದ್ಧ ಕಠಿಣಕ್ರಮ ತೆಗೆದುಕೊಂಡರು ಪರವಾಗಿಲ್ಲ' ಎನ್ನುವ ಮೂಲಕ ತಾವೆಂತಹ ವಿಶ್ವಾಸಘಾತುಕರು ಎಂಬುದನ್ನು ಸಾಬೀತು ಮಾಡಿದ್ದಾನೆ.


ಬಿಜೆಪಿ ಹೈಜಾಕ್

ಮಾರ್ಕೊಪೊಲೊ ಕಾರ್ಮಿಕರ ಸಮಸ್ಯೆಯನ್ನು ನಿಭಾಯಿಸುವಲ್ಲಿ ಸ್ಥಳೀಯ ಶಾಸಕ ಕಮ್ ಜಿಲ್ಲಾ ಉಸ್ತುವಾರಿ ಮಂತ್ರಿ ವಿನಯ್ ಕುಲಕರ್ಣಿ ಸಂಪೂರ್ಣವಾಗಿ ಸೋತುಹೋಗಿದ್ದಾನೆ. ಕಾನೂನುಬಾಹಿರವಾಗಿ ಲಾಕೌಟ್ ಆದಾಗಿನಿಂದ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆಯಾಗಲಿ, ಕಾರ್ಮಿಕ ಸಚಿವ ಪರಮೇಶ್ವರ್ ನಾಯ್ಕನಾಗಲಿ ಇತ್ತ ತಲೆಹಾಕದೆ ಬೇಜವಾಬ್ದಾರಿಯಿಂದ ನಡೆದುಕೊಂಡಿರುವುದರ ವಿರುದ್ಧ ಕಾರ್ಮಿಕರು ಸಿಟ್ಟಿಗೆದ್ದಿದ್ದಾರೆ. ಜನಪ್ರತಿನಿಧಿಗಳತ್ತ ಕಾರ್ಮಿಕರಿಗಿರುವ ಈ ಆಕ್ರೋಶವನ್ನೇ ಲಾಭ ಮಾಡಿಕೊಳ್ಳಲು ಬಿಜೆಪಿ ಮುಂದಾಗಿರೋದು ಮತ್ತೊಂದು ದುರಂತವೇ ಸರಿ.

ಬಿಜೆಪಿಯ ಧಾರವಾಡ ಶಹರ ಶಾಸಕ ಅರವಿಂದ ಬೆಲ್ಲದ ಹಾಗೂ ಮಾಜಿ ಶಾಸಕಿ ಸೀಮಾ ಮಸೂತಿ ಕಾರ್ಮಿಕರ ಪ್ರತಿಭಟನೆಯನ್ನು ಪೊಲಿಟಿಕಲಿ ಹೈಜಾಕ್ ಮಾಡುತ್ತಿದ್ದಾರೆ. ಮಾಲೀಕ ವರ್ಗದ ವಿರುದ್ಧವಿದ್ದ ಕಾರ್ಮಿಕರ ಆಕ್ರೋಶವನ್ನು ಡಿಸಿ, ಎಸ್ಪಿಗಳ ವರ್ತನೆಯನ್ನು ಬಳಸಿಕೊಳ್ಳುವ ಮೂಲಕ ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಕುಲಕರ್ಣಿಯತ್ತ ತಿರುಗಿಸುವಲ್ಲಿ ಅವರು ಭಾಗಶಃ ಯಶಸ್ವಿಯಾಗಿದ್ದಾರೆ. ಈಗಲಾದರೂ ಸಿದ್ದರಾಮಯ್ಯ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಮುಂದಾಗುವ ಆಘಾತವನ್ನು ಯಾರೂ ತಪ್ಪಿಸಲಿಕ್ಕಾಗದು. ಕಡೇಪಕ್ಷ ಕಳೆದೊಂದು ತಿಂಗಳಿನಿಂದ ಸಂಬಳವಿಲ್ಲದೇ ಬೀದಿಗೆ ಬಿದ್ದಿರುವ ಕಾರ್ಮಿಕ ಬದುಕುಗಳಿಗೆ ತ್ವರಿತವಾಗಿ ನ್ಯಾಯ ಕೊಡಿಸುವ ಉದ್ದೇಶದಿಂದಲಾದರೂ ಸರ್ಕಾರ ಮುಂದಾಗಬೇಕಿದೆ.

■ ಹುಬ್ಬಳ್ಳಿಯಾಂವ

ಲಂಕೇಶ್ ಮತ್ತು ಡಿ.ಬಿ.ಶಂಕರಪ್ಪ



ಡಿ.ಬಿ. ಶಂಕರಪ್ಪ

ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ಗೆ ಅಧ್ಯಕ್ಷರಾಗಿರುವ ಡಿ.ಬಿ. ಶಂಕರಪ್ಪನವರು ಕಳೆದ ಬಾರಿ ಕೇವಲ 50 ಮತಗಳ ಅಂತರದಿಂದ ಸೋತಿದ್ದರು. ಆದರೆ ಈ ಬಾರಿ 850 ಮತಗಳ ಅಂತರದಿಂದ ಗೆದ್ದಿರುವುದು ಅವರಿಗೇ ಅಚ್ಚರಿ ತಂದಿದೆ. ಅವರ ವಿರುದ್ಧ ನಿಂತಿದ್ದ ಡಿ. ಮಂಜುನಾಥ್ ಮೂರು ಬಾರಿ ಗೆದ್ದು ಸಾಹಿತ್ಯದ ಕೆಲಸವನ್ನೇ ವೃತ್ತಿ ಮಾಡಿಕೊಂಡಂತೆ ಕಾಣಿಸಿದ್ದರಿಂದ, ರೋಸಿದ ಸಾಹಿತ್ಯಾಸಕ್ತರು ಈ ಬಾರಿ ಸೋಲಿಸುವವರಿದ್ದರು. ಆದರೆ ಶಂಕರಪ್ಪನವರು ಪರ ಲಿಂಗಾಯತರು ಎಷ್ಟರಮಟ್ಟಿಗೆ ಸಜ್ಜಾಗಿ ಬಂದರೆಂದರೆ, ಜಾತ್ಯತೀತ ಮನಸ್ಸಿನ ಕೆಲ ಸಾಹಿತ್ಯಾಸಕ್ತರು ಅಚ್ಚರಿಪಟ್ಟುಕೊಂಡರು. ಸ್ವತಃ ಸರಕಾರಿ ನೌಕರ ಸಂಘದ ಅಧ್ಯಕ್ಷನೇ ಬಂದು ಪುಢಾರಿ ರಾಜಕಾರಣ ಮಾಡಿದ್ದು ಕೆಲವರಲ್ಲಿ ಹೇಸಿಗೆಯುಂಟುಮಾಡಿತು. ಲಿಂಗಾಯತ ಸಮೂಹದ ಸಂಘಸಂಸ್ಥೆಗಳ ಹಿರಿಯ ತಲೆಗಳೆಲ್ಲಾ ಗುಳೆ ಹೊರಟುಬಂದಂತೆ ಜಮಾಯಿಸಿ, ಮತದಾನದ ಬಾಗಿಲಿನಲ್ಲೇ ಆಸೀನರಾಗಿದ್ದುಕೊಂಡು ಅಚ್ಚರಿ ಹುಟ್ಟಿಸಿದರು. ಕಳೆದ ಬಾರಿ ಕೇವಲ 50 ಮತಗಳಿಂದ ಸೋತಿದ್ದ ಶಂಕರಪ್ಪ ಈ ಬಾರಿ ನಿರಾಯಾಸವಾಗಿ ಗೆಲ್ಲುವವರಿದ್ದರು. ಆದರೆ ಜಾತಿವಾದಿಗಳ ಮಿತಿಮೀರಿದ ಉತ್ಸಾಹ ಶಂಕರಪ್ಪನನ್ನು ಅಭಿನಂದಿಸಲೂ ಹಿಂಜರಿಯುವಂತೆ ಮಾಡಿತು. ಈ ಸಾಹಿತ್ಯ ಪರಿಷತ್ ಚುನಾವಣೆಗಳಾದರೂ ತಮ್ಮ ಶಿಷ್ಟಾಚಾರ ಮತ್ತು ನೈತಿಕತೆ, ನೀತಿಸಂಹಿತೆಗಳನ್ನು ಅಳವಡಿಸಿಕೊಳ್ಳದೆ ಹೋದರೆ ಕ್ಷುದ್ರ ಜಾತಿ ಜಗಳಗಳಾಗಿ ಹೋಗುವ ಅಪಾಯ ಗೋಚರಿಸಿದೆ.

ಶಂಕರಪ್ಪನವರು ಲಂಕೇಶ್‌ರಿಗೆ ದೂರದ ಸಂಬಂಧಿ. ಅದೂ ಲಂಕೇಶರ ಅವ್ವ ಕಡೆ ಸಂಬಂಧಿ. ಲಂಕೇಶರ ಬಗ್ಗೆ ಅವರಿಗೆಂತಹ ಭಕ್ತಿಯಿತ್ತೆಂದರೆ, ಲಂಕೇಶರಿಗೆ ಕಾಯಿಲೆಯಾದಾಗ ಅವರಿಗೊಂದು ಕಣ್ಣುಬೇಕಿದ್ದರೆ ಕೂಡಲೇ ಕಿತ್ತುಕೊಡುವಂತಹ ಬೇಡರ ಕಣ್ಣಪ್ಪನಂತವರು. ಕಿಡ್ನಿ ಬೇಕಿದ್ದರೆ ಅದಕ್ಕೂ ಸೈ. ಲಂಕೇಶರ ಭಕ್ತರ ಸಮೂಹದಲ್ಲಿ ಇವರೇ ಮೊದಲಿಗರು.

ಇವರ ಇಂತಹ ಭಕ್ತಿಗೆ ಆಘಾತ ನೀಡುವಂತಹ ಘಟನೆಯೊಂದು ಜರುಗಿಬಿಟ್ಟಿತು. ಆಗ ಅವರ ತಮ್ಮ ಡಾ. ಗಂಗಪ್ಪ ಹೊನ್ನಾಳಿ ಶಾಸಕರಾಗಿದ್ದರು. ಒಳ್ಳೆಯ ವ್ಯಕ್ತಿ ಮತ್ತು ಒಳ್ಳೆಯ ವೈದ್ಯರಾಗಿದ್ದರಿಂದ ಸುಲಭವಾಗಿ ಆರಿಸಿ ಬಂದು ಶಾಸಕರಾಗಿದ್ದರು. ತಮ್ಮ ಕಾರ್ಯಕರ್ತರ ಮಾತುಗಳನ್ನು ಕೇಳಿ, ಅವರ ಅಭೀಷ್ಟೆಯನ್ನು ಈಡೇರಿಸಬೇಕಾಗುತ್ತದೆ. ಅದರಂತೆ ಗ್ರಂಥಾಲಯ ಇಲಾಖೆಯ ಮೇಲ್ವಿಚಾರಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದವರು ಶಾಸಕರ ಶಿಫಾರಸ್ಸನ್ನು ಕೋರಿ ಪೀಡಿಸತೊಡಗಿದರು. ಅದು ಗ್ರಂಥಾಲಯ ಇಲಾಖೆ, ಗ್ರಾಮ ಪಂಚಾಯ್ತಿಗೊಂದು ಗ್ರಂಥಾಲಯ ತೆರೆಯುತ್ತಿದ್ದ ಸಮಯ. ಗೌರವಧನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಗ್ರಾಮ ಪಂಚಾಯ್ತಿ ಗ್ರಂಥಾಲಯಕ್ಕೆ ನೇಮಿಸುತ್ತಿದ್ದರು. ಈ ನೇಮಕದ ನಿಯಮವೇನೆಂದರೆ, ಒಂದು ಪಂಚಾಯ್ತಿಯ ಮೂರು ಜನ ಅಭ್ಯರ್ಥಿಗಳ ಅರ್ಜಿಗಳನ್ನು, ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಕಳುಹಿಸಿಕೊಡಲಾಗುತ್ತೆ. ಅಲ್ಲಿ ಮೀಸಲಾತಿ ಮಾನದಂಡದಲ್ಲಿ ಆಯ್ಕೆಯಾದವನು ಮೇಲ್ವಿಚಾರಕನಾಗುತ್ತಾನೆ. ಈ ವಿಷಯದಲ್ಲಿ ಜಿಲ್ಲಾ ಗ್ರಂಥಾಲಯದ ಅಧಿಕಾರಿಯ ಪಾತ್ರವೇನೂ ಇರುವುದಿಲ್ಲ. ತಮ್ಮ ಹಿಂಬಾಲಕರ ಕಡೆಯವರಿಗೆ ಮೇಲ್ವಿಚಾರಕರ ಕೆಲಸ ಸಿಕ್ಕದ ಕಾರಣ, ಡಾ. ಗಂಗಪ್ಪನವರು ಸಿಟ್ಟಾಗಿ ಗ್ರಂಥಾಧಿಕಾರಿಗೆ ಫೋನು ಮಾಡಿ "ಲೈ ನಮ್ಮುಡಗನಿಗೆ ಲೈಬ್ರರಿ ಕೆಲಸ ಯಾಕೋ ಕೊಟ್ಟಿಲ್ಲ? ಬಂದ್ರೆ ವದಿತಿನಿ ನೋಡು" ಎಂದು ಫೋನ್ ಮಾಡಿಬಿಟ್ಟರು.

ಈ ಕಡೆ ಫೋನ್ ತೆಗೆದುಕೊಂಡ ಗ್ರಂಥಾಲಯ ಇಲಾಖೆ ಅಧಿಕಾರಿ ತುಂಬ ಅವಮಾನಿತರಾಗಿ ಡಲ್ಲಾಗಿಬಿಟ್ಟರು. ವಿಭೂತಿ ಎಂಬ ಹೆಸರಿನ ಆ ಅಧಿಕಾರಿ ನಿಜಕ್ಕೂ ವಿಭೂತಿಯೆ! ಬಸವಣ್ಣನವರ ಪ್ರಖ್ಯಾತ ವಚನ, ಕಳಬೇಡ, ಕೊಲಬೇಡ ಎಂಬ ಅಂತರಂಗ ಶುದ್ಧಿಯ ಅಧಿಕಾರಿ. ಯಾರು ಎಷ್ಟೇ ಅವಮಾನ ಮುಜುಗರ ಉಂಟುಮಾಡಿದರೂ ಅಸಾಮಾನ್ಯ ಸಹಿಷ್ಣುತೆಯಲ್ಲಿ ಬದುಕಿ ಬಂದವರು. ಅಂಥವರು ಒಬ್ಬ ಸುಸಂಸ್ಕೃತ ವೈದ್ಯ ರಾಜಕಾರಣಿಯ ಮಾತಿನಿಂದ ಆಘಾತಕ್ಕೊಳಗಾಗಿದ್ದರು.

ನಾನು ವಿಚಾರಿಸಿದಾಗ ವಿಷಯವನ್ನು ನಿವೇದಿಸಿಕೊಂಡರು. ಆಶ್ಚರ್ಯದ ಸಂಗತಿ ಎಂದರೆ, ಈ ಮೇಲ್ವಿಚಾರಕರ ಆಯ್ಕೆ ಅರ್ಜಿಯ ರಗಳೆ ಜಿಲ್ಲಾ ಗ್ರಂಥಾಲಯಾಧಿಕಾರಿಗಳಿಗೆ ಸಂಬಂಧಿಸಿದ್ದು. ವಿಭೂತಿಯವರು ನಗರ ಕೇಂದ್ರ ಗ್ರಂಥಾಲಯಾಧಿಕಾರಿ. ಆದ್ದರಿಂದ ತಮಗೆ ಸಂಬಂಧಪಡದ ವಿಷಯದಲ್ಲಿ ಒದೆಸಿಕೊಳ್ಳುವ ಬೈಗುಳ ಕೇಳಿದೆನಲ್ಲಾ ಎಂದು ಕೊರಗಿದರು.

ಆಗ ನಾನು ಡಾ. ಗಂಗಪ್ಪನವರ ಬಗ್ಗೆ ಒಂದು ಲೇಖನ ಬರೆದೆ. ಅದರಲ್ಲಿ ಸದರಿ ಪ್ರಕರಣದ ಹೊರತಾಗಿ ಇನ್ನೆಲ್ಲ ಟೀಕೆಗಳೂ ಇದ್ದವು. ಮುಖ್ಯವಾಗಿ ಹೊನ್ನಾಳಿ ಜನ ಗಂಗಪ್ಪನವರ ಬಗ್ಗೆ ಏನನ್ನುತ್ತಿದ್ದಾರೆ ಎಂಬ ವಿಷಯ ಪ್ರಸ್ತಾಪವಾಗಿದ್ದವು. ಪತ್ರಿಕೆ ಆಫೀಸಿನಲ್ಲಿ ಲಂಕೇಶರ ಸಂಬಂಧಿ ಡಾ. ಗಂಗಪ್ಪನವರ ಬಗ್ಗೆ ವರದಿ ಬಂದಿರುವುದನ್ನು ನೋಡಿದ ಬಸವರಾಜು ಅಳುಕುತ್ತಲೇ ಹೋಗಿ ಲಂಕೇಶರಿಗೆ ತೋರಿಸಿ "ಸಾರ್, ಡಾ. ಗಂಗಪ್ಪನವರನ್ನು ಟೀಕೆ ಮಾಡಿ ಲೇಖನ ಬರದವ್ರುರೆ ಚಂದ್ರೇಗೌಡ್ರು" ಎಂದರಂತೆ. "ಹಾಕಯ್ಯ ಅದನ್ನೇನು ಕೇಳ್ತಿ ಹಾಕು" ಎಂದರಂತೆ ಲಂಕೇಶ್. ಲೇಖನ ಪ್ರಕಟವಾದ ನಂತರ ಗಂಗಪ್ಪನವರಿಗಿಂತಲೂ ಶಂಕರಪ್ಪನವರಿಗೆ ನಂಬಲಸಾಧ್ಯವಾದ ಶಾಕಾಗಿತ್ತು. ನಾನು ಅಷ್ಟೊಂದು ಭಕ್ತಿಯಿಂದ ಆರಾಧಿಸುವ ಲಂಕೇಶರ ಪತ್ರಿಕೆಯಲ್ಲಿ ತಮ್ಮ ತಮ್ಮನ ಬಗ್ಗೆ ಇಂತಹ ಲೇಖನ ಬಂದಿದೆಯಲ್ಲಾ ಎಂದು ದುಃಖ ಮತ್ತು ರೋಷದಿಂದ ನಾಲ್ಕು ಪುಟದ ಪ್ರತಿಕ್ರಿಯೆ ಬರೆದರು. ಅದರಲ್ಲಿ "ಇಂತ ಲೇಖನ ಪ್ರಕಟಿಸುವುದಕ್ಕಿಂತ ನನಗೆ ಫೋನ್ ಮಾಡಿ ನೇಣಾಕಿಕೊ ಎಂದಿದ್ದರೆ ಹಾಗೇ ಮಾಡುತ್ತಿದ್ದೆ. ನಾವು ನಿಮ್ಮಿಂದ ಯಾವ ಸಹಾಯವನ್ನು ಯಾಚಿಸಿದವರಲ್ಲ, ನನ್ನ ತಮ್ಮನಿಗೆ ಟಿಕೆಟ್ ಪಡೆಯುವಾಗ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನಿಮ್ಮ ಸಹಾಯ ಕೇಳಿ ಬರಲಿಲ್ಲ, ಆದರೂ ಇಂತಹ ಲೇಖನ ಬರೆಸುತ್ತೀರಿ. ಇದು ನಿಮ್ಮ ನ್ಯಾಯವೇ?" ಎಂಬ ಸಾಲುಗಳೇ ಪುಟ ತುಂಬಿಸಿದ್ದವು.

ಮುಂದಿನ ವಾರ ಪತ್ರಿಕೆ ಆಫೀಸಿಗೆ ಹೋದಾಗ, ಲಂಕೇಶ್ ಬಸವನಗುಡಿ ಪಾರ್ಕಿಗೆ ವಾಕ್ ಕರೆದುಕೊಂಡು ಹೋದರು. ಏನೇನೊ ಮಾತನಾಡುತ್ತ ಪಾರ್ಕ್ ಸುತ್ತುವಾಗ "ಆ ಗಂಗಪ್ಪ ಕೆಟ್ಟೋನೇನಯ್ಯಾ" ಎಂದರು. "ಕೆಟ್ಟೋರಲ್ಲ ಸಾರ್. ಜನ ಯಾಕೋ ತುಂಬ ಬೈತಾರೆ ಸಾರ್" ಎಂದೆ. "ಬೈತಾರೆ ಕಣಯ್ಯ ಜನ. ಆ ಜನತಾ ಜನಾರ್ದನರನ್ನು ಏನನ್ನ ಕಂಡಿದ್ದಿ ನೀನು? ನಿನ್ನ ಲೇಖನ ನೋಡಿ ನಮ್ಮ ಶಂಕರಪ್ಪ ತುಂಬ ಬೇಜಾರಾಗ್ಯವ್ನೆ ಕಣಯ್ಯ, ನಮ್ಮ ಪತ್ರಿಕೆ ಒಂದೊಂದು ಇಷ್ಯೂ ಬಂದಂಗೂ ಒಂದಿಷ್ಟು ಜನ ದೂರ ಆಯ್ತರೆ. ಅಂಗಂತ ನಾವು ಸುಮ್ಮನಿರಕ್ಕಾಗಲ್ಲ. ಈಗ ಗಂಗಪ್ಪನ ಲೇಖನ ಹಾಕದೆಯಿದ್ರೆ ನೀನೇನು ತಿಳಕತಿದ್ದೇ?" ಎಂದರು.

ನನ್ನಂಥವನ ಒಂದು ಲೇಖನ ಹಾಕಿ ಬಂಧುಗಳನ್ನೇ ಕಳೆದುಕೊಂಡಿದ್ದ ಲಂಕೇಶ್ ನನಗಾಗ ವಿಸ್ಮಯವಾಗಿ ಕಂಡರು. ನನ್ನ ಲೇಖನದ ಪ್ರಾಮಾಣಿಕತೆಯ ಬಗ್ಗೆ ನನಗೆ ಸಂಶಯವುಂಟಾಯಿತು. ವಿಭೂತಿಯವರ ಮನಸ್ಸಿಗೆ ಸಾಂತ್ವನ ನೀಡಲು ನಾನು ವಿಶೇಷ ಕಾಳಜಿ ವಹಿಸಿದ್ದು ಲೇಖನದಲ್ಲಿ ಕಾಣತೊಡಗಿತು.

ಇದಾದನಂತರ ಸಿಕ್ಕಿದ ಶಂಕರಪ್ಪನವರು ಎಂದಿನ ಪ್ರೀತಿಯಿಂದಲೇ ಮಾತನಾಡಿಸುತ್ತಿದ್ದರು. ಅದೇ ಸಮಯದಲ್ಲಿ ಸಿನಿಮಾವೊಂದಕ್ಕೆ ಹಾಡೇಳಲು ಬಂದಿದ್ದ ಕೆ. ಯುವರಾಜ್ "ಲಂಕೇಶಣ್ಣನ್ನ ನೋಡಬೇಕು" ಎಂದು ಅಬ್ಬಾಸ್ ಅಬ್ಬಲಿಗೆರೆ ಜೊತೆ ಬಂದ. ತಮ್ಮ ಊರಕಡೆಯವರು ಬಂದರೆ ಸಹಜವಾಗಿ ತೆರೆದುಕೊಳ್ಳುವ ಲಂಕೇಶ್, ಯುವರಾಜನ ಜೊತೆ ಬಂಧು ಬಾಂಧವ್ಯದಲ್ಲಿ ಚರ್ಚಿಸತೊಡಗಿದ[...] ಮಾತಿನ ಮಧ್ಯೆ ಯುವರಾಜ "ಲಂಕೇಶಣ್ಣ ನಾನು [...] ಗಂಗಪ್ಪನ್ನ ಏನೋ ಅನ್ನಕಂಡಿದ್ದೆ. ಸರಿಯಿಲ್ಲ ಕಣಣ್ಣ" [...] "ಹೌದೆ? ಅದ್ಯಾಕಂಗಾತು" ಎಂದರು. ಅಂತೂ [...] ಪೂರ್ವಗ್ರಹದ ಲೇಖನಕ್ಕೆ ಯುವರಾಜ್ ನ್ಯಾಯ ಒದ[...]

ತಮ್ಮನ ಬಗೆಗಿನ ಟೀಕಾ ಲೇಖನದಿಂದ ಆ[...] ಗೊಂಡಿದ್ದ ಶಂಕರಪ್ಪನವರು ಅದನ್ನೆಲ್ಲಾ ಮರೆತು ಲಂಕೇ[...] ಆರೋಗ್ಯದ ಬಗ್ಗೆ ಆತಂಕದಿಂದ ಮಾತನಾಡ ತೊಡಗಿ[...] ತಮ್ಮ ಕಳ್ಳು ಬಳ್ಳಿ ಯಾರೇ ಸಿಕ್ಕರೂ "ಲಂಕೇಶ[...] ಇನ್ನೇನು ಕಳೆದುಕೊಳ್ಳುತ್ತೇವೆ" ಎಂಬ ದುಃಖದಿಂ[...] ಮಾತನಾಡುತ್ತಿದ್ದರು. ಈಗಲೂ ಕೂಡ ತಾವು ಚುನಾ[...] ಯಲ್ಲಿ ಗೆದ್ದ ಖುಷಿಯ ನಡುವೆಯೂ ತಾವು ಸೋಲಿ[...] ಮಂಜುನಾಥ್ ಮಿಸೆಸ್ಸು "ಬಹಳ ಒಳ್ಳೆ ಹೆಣ್ಣುಮ[...] ನಮಗೆಲ್ಲಾ ಬಹಳ ಗೌರವ ಕೊಟ್ಟು ಮಾತನಾಡಿಸುತ್ತಿ[...] ಪಾಪ ಈ ಸೋಲಿನಿಂದ ಆಕೆಗೆ ತುಂಬ ಬೇಸರ[...] ರಬಹುದು" ಎಂದು ನೊಂದು ಕೊಂಡರು. ನಿಜ[...] ಗೆದ್ದ ವ್ಯಕ್ತಿಯ ಮಾನವೀಯ ನಡವಳಿಕೆ ಎಂದರೆ ಇ[...]

ತಮ್ಮ ಬದುಕಿನಲ್ಲಿ ತಪ್ಪು ಮಾಡಿದರೆ ಅದು ಲಂಕೇ[...] ಗೊತ್ತಾದರೆ ಗತಿಯೇನೆಂದು ಬದುಕಿದ ಶಂಕರಪ್ಪನ[...] ಲಂಕೇಶ್ ಇಲ್ಲದಾಗಲೂ ಹಾಗೇ ಇದ್ದಾರೆ. ಅಭಿನಂದಿ[...] ಕರೆಯುತ್ತಿರುವ ಜನರ ಬಳಿಗೆ ಹೋಗಲು ಅಂಜಿಕೊಂ[...] ಶಂಕರಪ್ಪನವರಿಗೆ "ಲಂಕೇಶ್‌ಗೆ ಬೇಜಾರಾಗಲ್ಲ, ಹೋ[...] ಬನ್ನಿ ಶಂಕರಪ್ಪ" ಎಂದು ಧೈರ್ಯ ಹೇಳಬೇಕಾ[...] ಆದರೆ, ಮನೆಯಿಂದ ಹಣ ತಂದು ಕಾರ್ಯಕ[...] ಮಾಡುತ್ತೇನೆಂದು ಶಪಥ ಮಾಡಿರುವ ಶಂಕರಪ್ಪನವ[...] ಅಂತಹ ಕಾರ್ಯಕ್ರಮ ಜರುಗಲಾರವು. ಕಾರ್ಯ[...] ಗಳೇನಿದ್ದರೂ ಡಿ. ಮಂಜುನಾಥ್ ತರಹದವರಿಗೆ ಸ[...]

■ ಬಿ. ಚಂದ್ರೇಗ[...]

ಮಹಿಳೆಯರಿಗೆ ತುಂಬಾ ಗೌರವ ಕೊಟ್ಟವರು ದೇವೇಗೌಡರಂತಲ್ಲಾ!!

ಥೂತ್ತೇರಿ


ಯಾಹೂ ▸

ಅಂತರರಾಷ್ಟ್ರೀಯ ಮಹಿಳಾ ದಿನ ಬಂದುಹೋಗಿದೆ. ಆ ದಿನ ಸಂಸತ್‌ನಲ್ಲಿ ಮಹಿಳೆಯರು ಮಾತ್ರ ಮಾತನಾಡಿ ಸುಮ್ಮನಾಗಬಹುದೆಂಬ ಮೋದಿ ಸಲಹೆ ಉಳಿದಂತೆ ಸುಮ್ಮನಿರಬಹುದೆಂಬ ಚೆಡ್ಡಿ ಬೋಧನೆಯಾಗಿದೆಯೆಂಬ ಚೆಡ್ಡಿ ಕಂಡರಾಗದ ಮಹಿಳಾ ನಾಯಕಿಯರು ಕೊಂಕು ಮಾತನಾಡಿದ್ದಾರಂತಲ್ಲಾ. ಮತ್ತೆ ಕೆಲವು ಕಮಲಪ್ರಿಯ ಮಹಿಳಾ ಮಣಿಗಳು "ಪರಸ್ಪರ ಅಸೂಯೆ ಮತ್ತು ಕೀಳರಿಮೆಯಿದ್ದರೆ ಮಹಿಳೆಯರು ಬೆಳೆಯಲಾರರು" ಎಂದು ಮೋದಿ ಹೇಳಿದ ಮಾತನ್ನೇ ಕೊಂಡಾಡುತ್ತಿದ್ದಾರಂತಲ್ಲಾ. ಯಾವ ಮಾನವತಾವಾದಿಯೂ ಇದುವರೆಗೆ ಆಡದ ಮಾತಿದು, ಇದಕ್ಕಾಗಿ ಮೋದಿಗೆ ಅಭಿನಂದನೆ ಎಂಬಂತೆ ಉಲಿಯುತ್ತಿರುವಾಗಲೇ ಮೋದಿ ಕಟ್ಟಿಕೊಂಡ ಹೆಂಡತಿ ಎತ್ತ ಹೋದಳು ಎಂಬುದನ್ನು ಯೋಚಿಸುತ್ತಿಲ್ಲವಲ್ಲಾ, ತನ್ನ ಅಭ್ಯುದಯಕ್ಕೆ ಮಹಿಳೆ ಎಂದಿಗೂ ಕಾಲ್ತೊಡಕು ಎಂದು ಭಾವಿಸುವ ಪುರೋಹಿತಶಾಹಿಗಳ ಹಿಂಡಿಗೆ ಪ್ರೇರಣೆ ನಮ್ಮ ಋಷಿಮುನಿಗಳು. ಅವರ ಪರಂಪರೆಯನ್ನೇ ಹೊತ್ತು ತಿರುಗುತ್ತಿರುವ ಮೋದಿ ಆಡಿರುವ ಹುಸಿ ಮಾತುಗಳನ್ನೇ ಕೊಂಡಾಡುತ್ತಿರುವ ಕಲಿತ ಮಹಿಳೆಯರಿಗೆ, "ನಮಗೆ ಸಂಸತ್ತಿನಲ್ಲಿ ಮಾತನಾಡಲು ಒಂದು ದಿನ ಬೇಡ. ಪುರುಷರ ಮಾತಿನ ಜೊತೆಗೇ ನಮ್ಮ ಮಾತನ್ನು ಬೆರೆಸುತ್ತೇವೆ" ಎನ್ನುವಂತಹ ದಿಟ್ಟತನ ಬರುವುದು ಯಾವಾಗ, ಥೂತ್ತೇರಿ!!

* * * *

ನಮ್ಮ ರಾಜಕೀಯ ನಾಯಕರು ಮಹಿಳೆಯರನ್ನು ಎಂದೂ ಕೂಡ ಕೀಳಾಗಿ ಕಂಡಿಲ್ಲ. ಬದಲಿಗೆ, ಗುಪ್ತ ನಿಧಿಯಾಗಿಯೇ ಭೋಗಿಸಿದ್ದಾರೆ. ಶಾಸಕನಾದ ಕೂಡಲೇ ತನ್ನ ಜೋಳಿಗೆಗೆ ತಾಲೂಕಿನ ಹಣ ಹರಿದುಬರುತ್ತದೆ. ಹಣ ಸೇರುತ್ತಿದ್ದಂತೆ ತಲೆಕೆಟ್ಟು ಹನ್ನೆರಡಾಸೆಯಾಗುತ್ತೆ, ಮೆತ್ತನೆ ಹಾಸಿಗೆಯಲ್ಲಿ ಒಬ್ಬನೇ ಉರುಳಾಡಲು ಬೇಸರವಾಗುತ್ತೆ ಅಣ್ಣನ ಅಪೇಕ್ಷೆ ಈಡೇರಿಸಲು ಹಲಿಂಡುಕರು ರೆಡಿ ಇರುತ್ತಾರೆ. ಒಂದು ಪಂಚವಾರ್ಷಿಕ ಸುವರ್ಣಯುಗ ಮುಗಿಯುತ್ತದೆ. ಕಟ್ಟಿಕೊಂಡವಳ ಮನೆ ಹುಡುಕುತ್ತ ವಾಪಸು ಬರುತ್ತಾನೆ. ಇದು ಸ್ವಾತಂತ್ರ ಬಂದು ನಮ್ಮವೇ ಸರಕಾರಗಳು ಆಳ ತೊಡಗಿದಾಗಿನಿಂದ ನಡೆದು ಬಂದ ಪದ್ಧತಿ. ಇದು ಅತಿರೇಕಕ್ಕೆ ಹೋದದ್ದು ಭಾರತದ ಸಂಸ್ಕೃತಿ ಪ್ರತಿಪಾದನೆಯ ಬಿಜೆಪಿ ನಾಯಕರು ಅಧಿಕಾರಕ್ಕೆ ಬಂದಾಗ. ಆ ಅವಧಿಯಲ್ಲಿ ಯಡಿಯೂರಪ್ಪನವರು ಧೈರ್ಯ ಮಾಡಿದರು. ಆ ಧೈರ್ಯ ಇಲ್ಲದ ಈಶ್ವರಪ್ಪ ತಾನೊಂದು ಉಪಸಂಸಾರ ಹುಡುಕುವಲ್ಲಿ ಕಾಲವೇ ಸರಿದಿತ್ತು, ಇನ್ನ ರೇಣುಕಾಚಾರಿ ಯಾವ ಎಗ್ಗೂಇಲ್ಲದೆ ಬ್ರೇಕ್‌ಡ್ಯಾನ್ಸ್ ಮಾಡಿದ. ಇಂತದೇ ಡ್ಯಾನ್ಸ್ ಮಾಡಿ ಸುಧಾರಿಸಿಕೊಳ್ಳುವಾಗ ಹರತಾಳು ಹಾಲಣ್ಣ ಸಿಕ್ಕಿಬಿದ್ದ, ಇನ್ನ ಉಡುಪಿ ಭಟ್ಟರುಗಳ ಕತೆ ಹೇಳತೀರದಂತಿದೆ. ಇಂತವರ ರಾಷ್ಟ್ರೀಯ ಪ್ರತಿನಿಧಿ ಒಂದು ದಿನದ ಮಟ್ಟಿಗೆ ಮಹಿಳೆಯರು ಮಾತನಾಡಿ ಎಂದಿರುವುದು ಎಂತಹ ಹಾಸ್ಯಾಸ್ಪದ ಮಾತಲ್ಲವೇ, ಥೂತ್ತೇರಿ!!

* * * *



ಪ್ರಧಾನಿ ಮೋದಿ ಬಾಯಿಮಾತಿನ ಉಪಚಾರಕ್ಕೆಬಂತೆ ಮಹಿಳೆಯರ ಮಾತಿಗೆ ಒಂದು ದಿನದ ಮೀಸಲಾತಿ ಕಲ್ಪಿಸಿದರೆ, ಅಂತವರ ಕಡುವೈರಿಯಾಗಿದ್ದ ಲಂಕೇಶ್ ಪತ್ರಿಕೆ ತೆಗೆದಾಗ 'ನಿಮ್ಮಲ್ಲಿ ಒಂದು ಮಹಿಳಾ ಕಾಲಂ ಶುರು ಮಾಡಿ' ಎಂದು ಸಲಹೆ ಕೊಟ್ಟವರಿಗೆ ಛೀಮಾರಿ ಹಾಕಿ, ಪತ್ರಿಕೆಯ ಎಲ್ಲಾ ವಿಭಾಗದಲ್ಲೂ ಮಹಿಳೆಯರು ಬರೆಯುವಂತೆ ಮಾಡಿದರು. "ನನ್ನ ಸಹೋದರ ಭಾರತದ ಸೈನ್ಯದಲ್ಲಿದ್ದಾನೆ. ಆದರೂ ನಮ್ಮನ್ನು ದೇಶದ್ರೋಹಿಗಳಂತೆ ನೋಡುತ್ತಾರೆ" ಎಂದು ಪತ್ರ ಬರೆದ ಸಾರಾ ಅಬೂಬಕ್ಕರ್‌ಗೆ ಪ್ರೋತ್ಸಾಹ ಕೊಟ್ಟ ಫಲವಾಗಿ ಚಂದ್ರಗಿರಿ ತೀರ ದಡ ಕಟ್ಟಿ ಹರಿಯಿತು. ಆನಂತರ ಮುಸ್ಲಿಂ ಹೆಣ್ಣುಮಕ್ಕಳು, ಲಂಬಾಣಿ ಹೆಣ್ಣುಮಕ್ಕಳು, ದಲಿತ ಹೆಣ್ಣು ಮಕ್ಕಳು ಮತ್ತು ಬ್ರಾಹ್ಮಣ ಹೆಣ್ಣುಮಕ್ಕಳು ಎಲ್ಲರಿಂದಲೂ ಬರೆಸಿದರು. ಲಂಕೇಶ್ ಎಂಬ ಪುರುಷಮಣಿಯ ಸ್ಪರ್ಶಕ್ಕೆ ಸಿಕ್ಕಿದ ಎಲ್ಲರೂ ಬರವಣಿಗೆಯಲ್ಲಿ, ಬದುಕಿನಲ್ಲಿ ಉನ್ನತಿಯನ್ನ ಕಂಡರು. ಸ್ತ್ರೀಶಕ್ತಿಯ ಬಗ್ಗೆ ಪೂರ್ಣ ಅರಿವಿದ್ದ ಲಂಕೇಶರ ಆಶಯವನ್ನು ಮೈಗೂಡಿಸಿಕೊಂಡಿದ್ದಾದರೆ ಮಹಿಳಾ ಮೀಸಲಾತಿ ಹೋರಾಟ ಮತ್ತು ಮಹಿಳಾ ದಿನವೆಲ್ಲಾ ಅರ್ಥ ಕಳೆದುಕೊಳ್ಳಬಹುದಲ್ಲವೆ, ಥೂತ್ತೇರಿ!!

* * * *

ರಾಜಕಾರಣದಲ್ಲಿ ಮಹಿಳೆಯರನ್ನು ಗೌರವವಾಗಿ ಕಂಡವರೆಂದರೆ ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರಂತಲ್ಲಾ. ಯತ್ತಮುಂದಾಗಿ ನೋಡಿದರೂ ಈ ಮಾತು ನಿಜ. ಅವರೆಂದಿಗೂ ಮಹಿಳೆಯರ ಬಗ್ಗೆ ಹಗುರವಾಗಿ ಮಾತನಾಡಿದವರಲ್ಲಾ. ಪ್ರಧಾನಿಯಾಗುವ ಮುನ್ನ ಕೂಡ ಪತ್ನಿ ಚೆನ್ನಮ್ಮನವರ ಒಪ್ಪಿಗೆ ಪಡೆದುಕೊಂಡವರು. ನಂತರ ರಾಜಕಾರಣದಲ್ಲಿನ ಏಳುಬೀಳುಗಳಲ್ಲಿ ಜನತಾದಳ ಮಾಡಿಕೊಂಡಾಗ ತೆನೆಹೊತ್ತ ಮಹಿಳೆ ಚಿಹ್ನೆ ಪಡೆದವರು. ಕಾರಣ, ಬತ್ತದ ಗದ್ದೆ ಕುಯ್ದು ನಂತರ ಹೊರೆ ಹೊತ್ತುಕೊಂಡು ಗದ್ದೆ ಬದುವಿನ ಮೇಲೆ ಬರುತ್ತಿದ್ದ ಚೆನ್ನಮ್ಮನವರ ಚಿತ್ರ ಅವರ ಮನದಾಳದಲ್ಲಿ ನಿಂತುಬಿಟ್ಟಿತು. ಆದ್ದರಿಂದ ತೆನೆಹೊತ್ತ ಮಹಿಳೆಯೇ ಅವರ ರಾಜಕಾರಣದ ಆಧಾರ ಸ್ತಂಭವಾಯ್ತು. ಅನಿತ, ಭವಾನಿ ಇವರೆಲ್ಲಾ ತೆನೆಹೊತ್ತ ಮಹಿಳೆಯರ ಪ್ರತೀಕ. ದೇವೇಗೌಡರು ಎಂದೂ ಹೆಣ್ಣುಮಕ್ಕಳ ಬಗ್ಗೆ ಅವರ ಮಕ್ಕಳಂತೆ ಅವಾಚ್ಯ ಶಬ್ದ ಬಳಸಿದವರಲ್ಲ. ತಮ್ಮ ಮೊಮ್ಮಗಳ ವಯಸ್ಸಿನವರನ್ನು 'ಸಿಸ್ಟರ್' ಎಂದು ಸಂಬೋಧಿಸುತ್ತಾರೆ. ಸಮ ವಯಸ್ಸಿನವರನ್ನು ತಾಯಿ ಎನ್ನುತ್ತಾರೆ. ಅದಷ್ಟೇ ಅಲ್ಲ, ಶಿಕ್ಷಣ ಇಲಾಖೆಯವರನ್ನು ಗುರುಗಳೇ ಎನ್ನುತ್ತಾರೆ. ಬೇರೆ ಇಲಾಖೆ ಅಧಿಕಾರಿಗಳನ್ನು ಸಾಹೇಬರೇ ಎನ್ನುತ್ತಾರೆ. ಸಿದ್ದರಾಮಯ್ಯ ಹಣೆಬರ ಬರೆದ ಪೀಟರನ್ನು ಕೂಡ "ಮಿಸ್ಟರ್ ಪೀಟಾರ್" ಎಂದಿದ್ದರು. ತಮ್ಮ ಮಗನ ರಾಜಕಾರಣಕ್ಕೆ ರಾಧಿಕಾ ಅಡ್ಡಿ ಎಂದು ಗೊತ್ತಾದಾಗಲೂ ಹಗುರವಾಗಿ ಮಾತನಾಡದೆ ಗಂಭೀರವಾಗಿ ನಡೆದುಕೊಂಡರು. ತಮಗೆ ಮೇಲಿಂದ ಮೇಲೆ ಮಕ್ಕಳಾಗುತ್ತಿದ್ದಾಗ ಬಾಣಂತನ ಮಾಡಲು ಬಂದ ನಾದಿನಿಯನ್ನು ತುಂಬು ಮಮತೆಯಿಂದ ಕಂಡರು. ಅಲ್ಲದೆ ಕಷ್ಟಕಾಲದಲ್ಲಾದವರೆಂದು ತಾವು ಮೊದಲ ಬಾರಿ ಮಂತ್ರಿಯಾದಾಗ, ಮೊದಲು ಮಾಡಿದ ಕೆಲಸವೆಂ[...] ನಾದಿನಿಗೆ ಮೈಸೂರಿನಲ್ಲಿ ಸೈಟ್ ಮಾಡಿಕೊಟ್ಟದ್ದು, ಇದಕ[...] ಉತ್ತರ ಕೊಡಲಾಗದೆ ಸದನದಲ್ಲಿ ನಿಂತಿದ್ದು, ಇದ[...] ಗೌಡರೆಷ್ಟು ಮಹಿಳಾವಾದಿ ಮತ್ತು ಮಹಿಳಾಪರ ಎಂಬು[...] ಅವರ ವಿರೋಧಿಗಳಿಗೂ ಗೊತ್ತಿಲ್ಲವಂತಲ್ಲಾ, ಥೂತ್ತೇ[...]

* * * *

ಮಹಿಳೆಯರಿಗೆ ಕೊಡುವ ಪ್ರಾತಿನಿಧ್ಯದ [...] ಲಂಕೇಶ್‌ರಿಂದ ಉಪದೇಶ ಪಡೆದ ಕಡಿದಾ[...] ಶಾಮಣ್ಣನವರು ತಾವು ಪ್ರತಿನಿಧಿಸುವ ಗ್ರಾಮ ಪಂಚಾ[...] ಮಹಿಳೆಯರನ್ನೇ ನಿಲ್ಲಿಸಿ ಗೆಲ್ಲಿಸಿ ತಂದರು. ಆ[...] ಪಂಚಾಯ್ತಿಯಲ್ಲಿ ಮಹಿಳೆಯರೇ ತುಂಬಿ ಮಾತನಾ[...] ವುದನ್ನು ಕೇಳಿಸಿಕೊಂಡಾಗ, ಮಹಿಳೆಯರ ನಲ್ಲಿ ನೀ[...] ಗಲಾಟೆಯಂತೆ ಕೇಳತೊಡಗಿತ್ತು. ಹೊರಗೆ ನಿಂತು ಕೊ[...] ಘುಂಜನ ಶೈಲಿಯಲ್ಲಿ ಕೇಳಿಸಿಕೊಳ್ಳುತ್ತಿದ್ದ ಶಾಮಣ್ಣನವ[...] ಎಂತದೊ ಕ್ರಾಂತಿ ಮಾಡಿಬಿಟ್ಟ ಧನ್ಯತಾ ಭಾವ. ಆ[...] ಮಹಿಳಾಮಣಿಗಳ ಗಂಡಂದಿರ ಭಾವದಲ್ಲಿ "ಎಲ್ಲಿದ್ದನ[...] ಈ ಕಿಂದರಿ ಜೋಗಿ? ನಮ್ಮನಿಯೋಳು ಮನೆ [...] ಬಿಟ್ಟು, ಮೀಟಿಂಗದೆ ಅಂತ ಹ್ವಂಟೋಯ್ತಳೆ. ಬರ[...] ಗೊತ್ತಿಲ್ಲ, ಹೋಗದು ಗೊತ್ತಿಲ್ಲ, ಹಿಂಗಾದ್ರೆ ನಮ್ಮ ಸಂ[...] ಉಳದತೆ" ಎಂದು ಶಾಮಣ್ಣನವರ ವಿಷಯದಲ್ಲಿ ಆಸ[...] ಭುಗಿಲೆದ್ದಿತು. ಕಾಲಾದಿಂದ ಹೆಂಗಸರ ಮರೆಯಲ್ಲಿ ಮತ[...] ಮೇಲ್ವಿಚಾರಣೆಯಲ್ಲಿ ಬದುಕಿದ್ದ ಗಂಡಸರಿಗೆ, ಹೆಂ[...] ರಾಜಕಾರಣಿಯಾದದ್ದು ಹೆಂಡತಿಯೇ ಸತ್ತುಹೋದ ಅನು[...] ನೀಡತೊಡಗಿತು. ಪರಿಣಾಮ, ಮುಂದಿನ ಚುನಾ[...] ಹೊತ್ತಿಗೆ ಅವರಾರೂ ಶಾಮಣ್ಣನ ಕೈಗೆ ಸಿಗಲಿಲ್ಲ, ಆದ[...] ಒಂದು ಕ್ರಾಂತಿ ನಡೆದು ಹೋಗಿತ್ತು, ಮಾಜಿ ಪಂಚಾ[...] ಮಹಿಳಾ ಮೆಂಬರುಗಳ ಬಗ್ಗೆ ಗಂಡಂದಿರು ದು[...] ಮಾತನಾಡುವಂತಿರಲಿಲ್ಲವಂತಲ್ಲಾ, ಥೂತ್ತೇರಿ!!

ಒಂದು ಮರ



ಒಂದಾನೊಂದು ಕಾಲದಲ್ಲಿ ಒಂದೂರಿನಲ್ಲಿ ಒಂದು ...ರ ಇತ್ತು. ಆ ಊರಿನ ವಿಶೇಷವೇನೆಂದರೆ ಅಲ್ಲಿ ಇದ್ದದ್ದು ...ಒಂದೇ ಮರ. ಬೇರೆ ಮರಗಳಾಗಲಿ, ಗಿಡಗಳಾಗಲಿ ...ಲ್ಲ. ಆ ಮರ ಬಹಳ ವಿಶಾಲವಾಗಿತ್ತು, ಸಂಪೂರ್ಣ ...ರು ಎಲೆಗಳಿಂದ ಕಂಗೊಳಿಸುತ್ತಿತ್ತು. ಊರಿನ ಜನ ಆ ...ರವನ್ನು ಎಷ್ಟೊಂದು ಇಷ್ಟ ಪಡುತ್ತಿದ್ದರೆಂದರೆ ಪ್ರತಿ ... ಅದರ ಕೆಳಗೆ ಒಮ್ಮೆ ಕುಳಿತು, ಹರಟೆ ಮಾತನಾಡದೇ ...ೇದರೆ ಅವರಿಗೆ ಸಮಾಧಾನವಿರುತ್ತಿರಲಿಲ್ಲ. ದಿನನಿತ್ಯ ... ಊರಿನ ಹೆಣ್ಣು ಮಕ್ಕಳು, ಚಿಕ್ಕವರು, ದೊಡ್ಡವರು ...ತ್ತು ಯುವಕರು ಎಲ್ಲರು ಆ ಮರದ ಕೆಳಗೆ ಆಡುವುದು, ...ಡುವುದು, ಮಲಗುವುದು ಮಾಡುತ್ತಿದ್ದರು. ಮರದ ...ೀಲೆ ಅಸಂಖ್ಯಾತ ಪಕ್ಷಿಗಳು ಚಿಲಿ-ಪಿಲಿಗುಡುತ್ತಾ ಮರದ ...ದವನ್ನು ಮತ್ತಷ್ಟು ಹೆಚ್ಚಿಸಿದ್ದವು. ಆ ಮರವೇ ಅವುಗಳ ...ನೆಯಾಗಿತ್ತು. ಊರಿನ ಎಲ್ಲರೂ ಆ ಮರವನ್ನು ಬಹುವಾಗಿ ...ತಿಸುತ್ತಿದ್ದರು. ಆ ಮರವೂ ಕೂಡ ಅವರನ್ನು ಬಹಳ ...ರೆಯಿಂದ ಮತ್ತು ಪ್ರೀತಿಯಿಂದ ಸಲಹುತಿತ್ತು.

ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ ಎನ್ನುವಾಗ ...ದು ದಿನ ಅಲ್ಲಿಗೆ ಒಬ್ಬ ಪುರೋಹಿತ ತನ್ನ ಹೆಂಡತಿ ...ತ್ತು ಇಬ್ಬರು ಮಕ್ಕಳ ಸಮೇತ ಬಂದ. ಅವನು ತನ್ನ ...ಟುಂಬದ ಜೊತೆಗೆ ಹೊಟ್ಟೆಪಾಡಿಗಾಗಿ ಪರ ಊರಿಗೆ ...ಸ ಹುಡುಕಿಕೊಂಡು ಹೋಗುತ್ತಿದ್ದ. ಬಹಳ ಹೊತ್ತು ...ಡು ಸುಸ್ತಾಗಿದ್ದರಿಂದ, ದಣಿವಾರಿಸಿಕೊಳ್ಳಲು ಆ ಮರದ ...ಗೆ "ಉಸ್ಸಪ್ಪ" ಎಂದು ಅವನು ಮತ್ತು ಅವನ ...ಟುಂಬದವರೆಲ್ಲರೂ ಕುಳಿತುಕೊಂಡರು. ಆ ಮರದ ...ನ ತಂಪು ಮತ್ತು ಶಾಂತ ವಾತಾವರಣ ಅವರೆಲ್ಲರಿಗೂ ...ಂಪಿನ ನಿದ್ದೆ ಬರುವ ಹಾಗೆ ಮಾಡಿತು. ಅವರೆಲ್ಲರು ...ದ್ದೆಯಿಂದ ಎದ್ದದ್ದು ಊರಿನ ಜನ ತಮ್ಮ ದೈನಂದಿನ ...ಸ ಮುಗಿಸಿ, ಆ ಮರದ ಕೆಳಗೆ ಹಾಯಾಗಿ ಸ್ವಲ್ಪ ...ೂತ್ತು ಇರಲು ಬಂದಾಗ. ಎಲ್ಲರೂ ಪುರೋಹಿತ ಮತ್ತು ...ತನ ಹೆಂಡತಿ-ಮಕ್ಕಳನ್ನು ಚೆನ್ನಾಗಿ, ಗೌರವದಿಂದ ...ಾತನಾಡಿಸಿ ಒಳ್ಳೆಯ ಅತಿಥಿ ಸತ್ಕಾರ ಮಾಡಿದರು. ...ರೋಹಿತ ಆ ಊರಿನ ಜನ ಮರದ ಕೆಳಗೆ ...ತೋಷದಿಂದ ಇರುವುದನ್ನು ಗಮನಿಸಿದ. ತಕ್ಷಣ ಅವನ ...ೆಗೆ ಒಂದು ಉಪಾಯ ಹೊಳೆಯಿತು.

ಊರಿನ ಜನರೆಲ್ಲರೂ ತಮ್ಮತಮ್ಮ ಮನೆಗೆ ಹೋದ ಮೇಲೆ ಪುರೋಹಿತ ಆ ಮರಕ್ಕೆ ಒಂದೇ ಉಸಿರಲ್ಲಿ ಹೀಗೆ ಹೇಳಿದ, "ಮಗು, ದಿನಾಲು ನೀನು ಈ ಊರಿನ ಜನರಿಗೆ ಒಳ್ಳೆಯ ಗಾಳಿ, ತಂಪಗಿನ ನೆರಳು, ಶಾಂತ ವಾತಾವರಣವನ್ನು ನೀಡುತ್ತಿದ್ದೀಯ! ಅವರು ನಿನಗೇನು ನೀಡಿದ್ದಾರೆ? ಏನೂ ಇಲ್ಲ ತಾನೆ?! ಹಾಗಾಗಿ ನಾಳೆ ನೀನು ಅವರು ಬಂದಾಗ ಒಂದು ಷರತ್ತನ್ನು ಹಾಕು. ನೀನು ನೀಡುವ ಗಾಳಿ-ನೆರಳಿಗೆ ಬದಲಾಗಿ ಅವರು ನಿನ್ನನ್ನು ಪೂಜಿಸಿ, ಗೌರವಿಸಿ, ಕಾಣಿಕೆಗಳನ್ನು ಕೊಡಬೇಕು. ಇಲ್ಲದಿದ್ದರೆ ಗಾಳಿ, ನೆರಳು, ತಂಪನ್ನು ನೀಡುವುದಿಲ್ಲ ಎಂದು ಹೇಳು. ನೋಡು ಮಗು, ವೃಕ್ಷ ರಕ್ಷತಿ ರಕ್ಷಿತಃ". ಆ ಮರಕ್ಕೆ ಮೊದ, ಮೊದಲು ಪುರೋಹಿತ ಹೇಳುತ್ತಿರುವುದು ಅರ್ಥ ಆಗಲಿಲ್ಲ. "ಪೂಜೆ ಮಾಡುವುದೆಂದರೇನು?" ಎಂದು ಆ ಮರ ಕೇಳಿತು. ಆಗ ಆ ಪುರೋಹಿತ ಪೂಜೆಯ ಬಗ್ಗೆ ಎಲ್ಲವನ್ನು ಹೇಳಿದ, "ನೀನು ಆ ದೇವರ ಸೃಷ್ಟಿ. ಆ ದೇವರ ಆಜ್ಞೆಯಂತೆ ಈ ಊರಿನ ಜನರಿಗೆ ನೆರಳು, ಗಾಳಿ, ತಂಪನ್ನು ನೀಡುತ್ತಿದ್ದೀಯ. ಹಾಗಾಗಿ ನೀನು ಪವಿತ್ರ. ನಿನ್ನ ಪವಿತ್ರತೆಯನ್ನು ಈ ಊರಿನ ಜನ ಗೌರವಿಸಬೇಕು. ಅದಕ್ಕಾಗಿ ಅವರು ನಿನ್ನನ್ನು ದಿನನಿತ್ಯ ಪೂಜಿಸಬೇಕು. ಬೇಕಾದ್ರೆ ನಾನು ಇದಕ್ಕೆ ಸಹಾಯ ಮಾಡುತ್ತೇನೆ. ನನ್ನ ಕಸುಬು ಪೌರೋಹಿತ್ಯ". ತಾನು ದೇವರ ಸೃಷ್ಟಿ ಎಂದು ಕೇಳಿದಾಗ ಮರಕ್ಕೆ ಆನಂದವಾಯಿತು. ಊರಿನ ಜನ ತನ್ನನ್ನು ದಿನವೂ ಪೂಜಿಸಿ, ಕಾಣಿಕೆಗಳನ್ನು ಕೊಡುತ್ತಾರೆಂದರೆ ಅದು ಊರಿನ ಜನ ತನಗೆ ಕೊಡುವ ಗೌರವ ಎಂದು ಅದು ಏಕೆ ಉಬ್ಬಿಸಿತು.

ಮರುದಿನ ಊರಿನ ಜನ ಯಥಾಪ್ರಕಾರ ಮರದ ಕೆಳಗೆ ಕುಳಿತುಕೊಳ್ಳಲು ಬಂದಾಗ ಆ ಮರ, "ಎಲ್ಲೈ ಜನಗಳೆ. ನಾನು ನಿಮಗೆ ಇನ್ನು ಮುಂದೆ ನೆರಳು, ತಂಪು ಗಾಳಿಯನ್ನು ನೀಡಬೇಕಾದರೆ, ನೀವು ನನ್ನನ್ನು ದಿನವೂ ಪೂಜಿಸಿ, ಕಾಣಿಕೆಗಳನ್ನು ನೀಡಬೇಕು. ಇಲ್ಲದಿದ್ದರೆ ನಾನು ನಿಮಗೆ ನೆರಳನ್ನು ನೀಡುವುದಿಲ್ಲ" ಎಂದು ಗರ್ಜಿಸಿತು. ಪುರೋಹಿತ ಹೇಳಿದ ಹಾಗೆ ಅದು ಊರಿನ ಜನರಿಗೆ ತಂಪು ಗಾಳಿಯನ್ನು ನೀಡಲು ನಿರಾಕರಿಸಿತು. ನೆರಳನ್ನು ಕೊಡಲು ನಿಲ್ಲಿಸಿತು. ಇದರಿಂದ ಊರಿನ ಜನರಿಗೆ ಬೇಸರವಾಯಿತು. ಹಕ್ಕಿಗಳಿಗೆ ಏನೂ ಮಾಡಲು ತೋಚದೆ ಬೇರೆಯೆಡೆಗೆ ಪುರ್ರಂತ ಹಾರಿಹೋದವು.

ಎಲ್ಲಾ ಜನರು, ಈ ಮರದ ಜಂಭಕ್ಕೆ ಕೋಪಗೊಂಡು, ಚಿಂತಾಕ್ರಾಂತರಾದರು. ಅವರಿಗೆ ಈ ಪೂಜೆ-ಪುನಸ್ಕಾರ ಎಲ್ಲವೂ ಹೊಸದು; ಏನು ಅಂತ ಗೊತ್ತಿರಲಿಲ್ಲ. ಈಗ ಏನು ಮಾಡುವುದು ಎಂದು ಅವರಿಗೆ ತೋಚಲಿಲ್ಲ, ಹಾಗಾಗಿ ಎಲ್ಲರೂ ಊರಿನ ಮುಖಂಡನ ಬಳಿ ಹೋಗಿ ತಮ್ಮ ದುಃಖವನ್ನು ತೋಡಿಕೊಂಡರು. ತಮ್ಮ ಕಷ್ಟಕ್ಕೆ ಪರಿಹಾರ ಹುಡುಕಬೇಕೆಂದು ಬೇಡಿಕೊಂಡರು. ಬಹಳ ಹೊತ್ತು ಯೋಚಿಸಿದ ನಂತರ ಊರಿನ ಮುಖಂಡ ಎಲ್ಲರಿಗೂ ಹೀಗೆ ಹೇಳಿದ, "ನೀವೆಲ್ಲರು ಒಂದೊಂದು ದಿಕ್ಕಿಗೆ ಹೋಗಿ. ಪ್ರಪಂಚದ ಎಲ್ಲಾ ಮೂಲೆಗಳಿಂದ ಒಂದೊಂದು ಗಿಡವನ್ನು ತಂದು ಇಲ್ಲಿ ನೆಡಬೇಕು. ಅವು ಮರಗಳಾಗುವವರೆಗು, ಸಾಕಿ ಸಲಹಬೇಕು. ಆಗ ನಾವೆಲ್ಲರೂ ಈ ಜಂಬದ ಮರಕ್ಕೆ ಪಾಠ ಕಲಿಸಿದಂತಾಗುವುದು". ಊರಿನ ಜನರಿಗೆ ಮುಖಂಡನ ವಿಚಾರ ಹಿಡಿಸಿತು. ಎಲ್ಲರೂ ಪ್ರಪಂಚದ ಅನೇಕ ದಿಕ್ಕುಗಳಿಗೆ, ಜಾಗಗಳಿಗೆ ಹೋಗಿ ಒಂದೊಂದು ಸಸಿಯನ್ನು ತಂದು ಊರಿನಲ್ಲಿ ನೆಟ್ಟರು. ಅವು ಮರಗಳಾಗುವವರೆಗು ಚೆನ್ನಾಗಿ ನೋಡಿಕೊಂಡರು. ವೈವಿಧ್ಯತೆಗಳಿಂದ ಕೂಡಿದ ಆ ಮರಗಳೆಲ್ಲವೂ ಚೆನ್ನಾಗಿ ಬೆಳೆದು ಊರಜನರಿಗೆ ಸೊಗಸಾದ ನೆರಳು, ತಂಪಾದ ಗಾಳಿ ಮತ್ತು ಶಾಂತಿ-ನೆಮ್ಮದಿಯನ್ನು ನೀಡಿದವು. ಜಂಬದ ಮರ ಕ್ರಮೇಣ ಸೊರಗಿ, ಒಣಗಿ ಬಿದ್ದುಹೋಯಿತು. ಪುರೋಹಿತ ಈ ಊರಿನಲ್ಲಿ ಇನ್ನು ಏನೂ ಗಿಟ್ಟುವುದಿಲ್ಲ ಎಂದು ತಿಳಿದ ತನ್ನ ಕುಟುಂಬದ ಸಮೇತ ಕಂಬಿಕಿತ್ತ.

ಭಾರತದಲ್ಲಿ ಈಗ ವೈವಿಧ್ಯಮಯ ಮರಗಳು ಇರುವುದು ಹಿಂದೆ ನಮ್ಮ ಜನ ನೆಟ್ಟಿದ್ದ ಮರಗಳಿಂದಾಗಿ. ಇದನ್ನು ಮರೆಯಬಾರದು.

- ಡಾ. ವಿಜಯಕುಮಾರ್ ಎಂ. ಬೋರಟ್ಟಿ

ಅಂಬೇಡ್ಕರ್ ಫೋಟೋ ...ಮತ್ತು ಅಸಹನೆಯ ಭಾವಚಿತ್ರ

ನಾನು ಕೆಲಸ ನಿರ್ವಹಿಸುತ್ತಿದ್ದ ಕಾಲೇಜಿನ ಸ್ಟಾಫ್ ...ಮ್‌ನಲ್ಲಿ ನನ್ನೊಂದಿಗೆ ಕ್ಯಾಬಿನ್ ಹಂಚಿಕೊಂಡಿದ್ದ ...ಕ್ತಿಯೊಬ್ಬರು ತಾವು ಕೂರುವ ಸ್ಥಳದ ಬಳಿ ಅಂಬೇಡ್ಕರ್ ...ವರ ಪುಟ್ಟ ಭಾವಚಿತ್ರವೊಂದನ್ನು ಇಟ್ಟುಕೊಂಡಿದ್ದರು. ...ದನ್ನು ನಾನು ಮೊದಲೇ ಗಮನಿಸಿದ್ದೆ. ಒಳಗೊಳಗೇ ...ವರ ನಿಲುವು ಮೆಚ್ಚಿಕೊಂಡಿದ್ದೆ.



ಹೀಗೆ ಲೋಕಾಭಿರಾಮವಾಗಿ ...ರಟಲು ನಮ್ಮ ಕ್ಯಾಬಿನ್‌ಗೆ ಬಂದ ...ಳಿದ ಕೆಲ ಸಹೋದ್ಯೋಗಿಗಳು ...ದು ಇದು ಮಾತಾಡುತ್ತ ಕಾಲ ...ಕುವ ವೇಳೆಯಲ್ಲಿಯೇ ಅಲ್ಲಿದ್ದ ...ಂಬೇಡ್ಕರ್ ಭಾವಚಿತ್ರ ಗಮನಿಸಿ ...ಬ್ಬೇರಿಸಿ ವ್ಯಂಗ್ಯದ ನಗೆ ಬೀರಿದರು. ...ನಂತರ ಒಂದಷ್ಟು ಕಮೆಂಟುಗಳನ್ನು ...ಾಕಿದರು.

'ಓಹ್... ಅಂಬೇಡ್ಕರ್ ...ೋಟೋ... ಇವ್ರು ಇಟ್ಕೊಬೇಕಾದ್ದೆ... ...ಂಬೇಡ್ಕರ್ ಇದ್ದಿದ್ಕೆ ಅಲ್ವಾ ಇವ್ರಿಗೆ ಕೆಲ್ಸ ಸಿಕ್ಕಿರೋದು...'

'ಅವ್ರು ನಮ್ ಕಾನೂನುಗಳ್ನ ಬರುದ್ರು ಅನ್ನೋ ...ರಣಕ್ಕೆ ನಾವ್ರೂ ಅಂಬೇಡ್ಕರ್ ಅವ್ರಿಗೆ ಗೌರವ ಕೊಡ್ಬೇಕು...'

ಹೀಗೆಲ್ಲ ಆ ಕ್ಷಣಕ್ಕೆ ತಮಗನಿಸಿದ್ದನ್ನೆಲ್ಲ ಹೇಳಿದವರು ...ೀನು ಏನ್ ಹೇಳ್ತೀಯಪ್ಪ? ಎನ್ನುವ ಪ್ರಶ್ನೆಯೊಂದಿಗೆ ...ನ್ನತ್ತ ದೃಷ್ಟಿ ನೆಟ್ಟರು.

'ನಾನೂ ಅಂಬೇಡ್ಕರ್ ಅಭಿಮಾನಿ ಕಣ್ರಪ್ಪ... ಅವ್ರ ...ೋಟೋ ನಮ್ ಕ್ಯಾಬಿನ್‌ನಲ್ಲಿರೋದು ಸಂಗೂ ...ಷೇ...' ಅಂತಂದು ಸುಮ್ಮನಾದೆ. ಅವರು ಮತ್ತೊಮ್ಮೆ ...ಂಗ್ಯದ ನಗು ಬೀರಿ ವಿಷಯಾಂತರ ಮಾಡಿದರು.

ಆದರೆ ವ್ಯಕ್ತಿಯೊಬ್ಬರು ತಮ್ಮ ಬಳಿ ಅಂಬೇಡ್ಕರ್ ...ೋಟೋ ಇಟ್ಟುಕೊಳ್ಳುವುದನ್ನೂ ಕುಹಕದ ಕಣ್ಣಿನಿಂದ ...ೋಡಬೇಕೆ? ಎನ್ನುವ ಬೇಸರ ನನ್ನೊಳಗೆ ...ಕುಕಾಡಲಾರಂಭಿಸಿತು. ಅದರೊಂದಿಗೆ ಉಳಿದ ...ಬಿನ್‌ಗಳಲ್ಲಿ ಯಾರ್ಯಾರ ಫೋಟೋಗಳಿವೆ ಎಂಬ ಕುರಿತು ...ರಿಶೀಲಿಸಲಾರಂಭಿಸಿದೆ.

ಕೆಲವರು ಬಸವೇಶ್ವರರನ್ನು, ಶಂಕರಾಚಾರ್ಯರ, ತಮ್ಮ ...ಷ್ಟಿಗೆ ಆಪ್ತವಾದ ದೇವರುಗಳ ಫೋಟೋಗಳನ್ನು ತಮ್ಮ ತಮ್ಮ ಕ್ಯಾಬಿನ್‌ನಲ್ಲಿ ಇಟ್ಟುಕೊಂಡಿರುವುದು ಕಣ್ಣಿಗೆ ಬಿತ್ತು. ಆ ಕುರಿತು ಯಾರಾದರೂ ಆಕ್ಷೇಪ ವ್ಯಕ್ತಪಡಿಸಿದ್ದರೆ ಅಥವಾ ವ್ಯಂಗ್ಯದ ಮಾತುಗಳನ್ನಾಡಿದ್ದರೆ ಎಂಬುದನ್ನು ನನ್ನ ಅದುವರೆಗಿನ ಗಮನಿಸುವಿಕೆಯ ಆಧಾರದಲ್ಲಿ ಪರಿಶೀಲಿಸಲಾರಂಭಿಸಿದೆ. ಒಂದೇ ಒಂದು ನಿದರ್ಶನವೂ ಕಣ್ಣೆದುರು ಹಾದುಹೋಗಲಿಲ್ಲ.

ದೇವರು, ದೇವಮಾನವರ ಫೋಟೋಗಳನ್ನು ತಮ್ಮೊಂದಿಗೆ ಇಟ್ಟುಕೊಂಡರೆ ಆಕ್ಷೇಪ ಎತ್ತದವರು, ಸಹೋದ್ಯೋಗಿಯೊಬ್ಬರು ಅಂಬೇಡ್ಕರ್ ಭಾವಚಿತ್ರವೊಂದನ್ನು ತಮ್ಮ ಬಳಿ ಇಟ್ಟುಕೊಂಡದ್ದನ್ನೇ ನೆಪವಾಗಿಸಿಕೊಂಡು ಕುಹಕವಾಡಿದ್ದು ಒಂದಷ್ಟು ಚಿಂತಿಸುವಂತೆ ಮಾಡಿತು. ತಮ್ಮೊಳಗಿನ ಜಾತಿ ಆಧಾರಿತ ಅಸಹನೆಯನ್ನು ನೇರವಾಗಿ ತೋರ್ಪಡಿಸಿಕೊಳ್ಳದೆ, ಅಂಬೇಡ್ಕರ್ ಫೋಟೋ ಮುಂದಿಟ್ಟುಕೊಂಡು ಹೀಗೆಲ್ಲ ಕಮೆಂಟುಗಳನ್ನು ಬಿಸಾಕುವ ಮೂಲಕ ಹೊರಹಾಕುತ್ತಿದ್ದಾರೆಂದು ಗೊಣಗಿಕೊಂಡೆ.

ಜಾತಿ ಆಧಾರಿತ ಮೀಸಲಾತಿಯಿಂದ ಶಿಕ್ಷಣ ಮತ್ತು ಉದ್ಯೋಗದ ವಿಚಾರದಲ್ಲಿ ತಾವು ಅವಕಾಶ ವಂಚಿತರಾಗಿದ್ದೇವೆ ಎಂಬುದನ್ನು ಸಾರಲು ಸಿಗುವ ಸಣ್ಣ ಅವಕಾಶವನ್ನೂ ಮಿಸ್ ಮಾಡಿಕೊಳ್ಳಲು ಬಯಸದ ಕೆಲವರಿಗೆ, ತಮ್ಮ ವಿಚಾರ ಸರಣಿ ಮಂಡಿಸಲು ಅಂಬೇಡ್ಕರ್ ಅವರ ಒಂದು ಭಾವಚಿತ್ರ ಕೂಡ ನೆಪವಾಗಬಲ್ಲದು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಒಳಗೊಂಡಂತೆ ಮೀಸಲಾತಿಯಿಂದ ಹೆಚ್ಚು ಅವಕಾಶ ಪಡೆಯುತ್ತಿರುವವರ ಕುರಿತು ನಿಮ್ಮೊಳಗಿರುವ ಅಸಹನೆ, ತಾತ್ಸಾರಕ್ಕೆ ಕೇವಲ 'ಮೀಸಲಾತಿ'ಯೊಂದೇ ಕಾರಣವಾಗಿದ್ದರೆ, ಮದುವೆಯಾಗಲು, ಬಾಡಿಗೆಗೆ ಮನೆ ಕೊಡಲು 'ಜಾತಿ'ಯ ಜಪ ಮಾಡುವುದೇಕೆ ಎಂದು ಪ್ರಶ್ನಿಸಿದರೆ, ಅದೆಲ್ಲ ತಮ್ಮ ವೈಯಕ್ತಿಕ ಬದುಕಿಗೆ ಸಂಬಂಧಿಸಿದ್ದು ಅಂತಷ್ಟೇ ಚುಟುಕಾಗಿ ಉತ್ತರಿಸಿ, ಅವರ ದೃಷ್ಟಿಯಲ್ಲಿ ಸಾರ್ವತ್ರಿಕವಾಗಿ ಚರ್ಚಿಸಬಹುದಾದ 'ಮೀಸಲಾತಿ'ಯತ್ತ ಮತ್ತೆ ಕೈ ತೋರಿಸುತ್ತಾರೆ.

-ಎಚ್.ಕೆ.ಶರತ್, ಹಾಸನ

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rule, 1956.

FORM - IV

(See Rule 8)


1. Place of Publication	:	Bangalore
2. Periodicity of Publication	:	Weekly
3. Printer's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.
4. Publisher's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.
5. Editor's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are true to the best of my knowledge and belief.

Sd/-

Date : 20.3.2016 GAURI LANKESH

2016-17ರ ಬಜೆಟ್: ಒಡಲೊಳಗಿನ ಹುಳುಕುಗಳು



ನರೇಂದ್ರ ಮೋದಿಯ ಮಿಕ್ಕೆಲ್ಲ ಘೋಷಣೆಗಳ ಹಾಗೆ "ಸಬ್ ಕಾ ಸಾಥ್ ಸಬ್ ಕಾ ವಿಕಾಸ್" ಮತ್ತು "ಭ್ರಷ್ಟಾಚಾರ ಮುಕ್ತ ಭಾರತ್" ಕೂಡ ಬರೀ ಬುರುಡೆ ಎಂಬುದನ್ನು 2016-17ರ ಬಜೆಟ್ ಮತ್ತೊಮ್ಮೆ ಸಾಬೀತುಪಡಿಸುತ್ತದೆ. ವಿದೇಶಗಳಲ್ಲಿರುವ ಕಪ್ಪುಹಣ ತಂದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕಿಸೆಗೆ 15 ಲಕ್ಷ ಸುರಿಯುವೆನೆಂದು ಬೂಸಿ ಬಿಟ್ಟವರು ಈಗ ಜನಸಾಮಾನ್ಯನ ಜೇಬಿನಿಂದಲೇ ಹಣ ಕೀಳಲು ಹೊರಟಿದ್ದಾರೆ! ಭವಿಷ್ಯನಿಧಿ ಮೇಲೆ ತೆರಿಗೆ ಹೊರಿಸುವುದನ್ನು ಇನ್ನೇನೆಂದು ಕರೆಯಬೇಕು? ವಿದೇಶಗಳಲ್ಲಿ ಇಲ್ಲದಿರುವ ಕಾಳಧನವನ್ನು ತರುವ ಅಂದಿನ ಮಾತು ಮೋಸದ ಪರಮಾವಧಿ ಆಗಿತ್ತು. ಆದರೂ ಮುಗ್ಧ ಜನ ಮೋಸಹೋದರು. ಆಯ್ತು, ಮೋದಿ ಸರ್ಕಾರ ಮನಸ್ಸು ಮಾಡಿದ್ದರೆ ವಿದೇಶಗಳಲ್ಲಿ ಇದೆ ಎನ್ನಲಾಗುವುದಕ್ಕಿಂತಲೂ ಎಷ್ಟೋ ಪಟ್ಟು ದೊಡ್ಡ ಮೊತ್ತದ ಸ್ವದೇಶಿ ಕಾಳಧನವನ್ನು ಹೊರತರಬಹುದಾಗಿತ್ತಲ್ಲವೇ? ಅದರ ಬಗ್ಗೆ ಅಪ್ಪಿತಪ್ಪಿಯಾದರೂ ಉಸಿರೆತ್ತಿಲ್ಲ, ಬದಲು ಹೊಸ 'ಆದಾಯ ಘೋಷಣೆ ಯೋಜನೆ'ಯ ಮುಖಾಂತರ ಸ್ವದೇಶಿ ಕಾಳದಂಧೆಕೋರ ಕಾರ್ಪೊರೇಟುಗಳನ್ನು ಮಾಫ್ ಮಾಡಲು ಮುಂದಾಗಿದೆ. ಹೀಗೆ ಶ್ರೀಮಂತರು ಮತ್ತು ಕಾರ್ಪೊರೇಟುಗಳ ಪರವಾಗಿರುವ ಈ ಬಜೆಟ್‌ನಲ್ಲಿ ಬಡವರು, ಕಾರ್ಮಿಕರು, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಯನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗಿದೆ. ಪರಿಣಾಮವಾಗಿ ಸಾಮಾಜಿಕ ವಲಯದ ಅವಶ್ಯಕತೆಗಳಾದ ರಾಷ್ಟ್ರೀಯ ಆಹಾರ ಭದ್ರತೆ, ಪೌಷ್ಟಿಕ ಆಹಾರ, ಬಿಸಿಯೂಟ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್), ಹೆಣ್ಮಕ್ಕಳ ಹೆರಿಗೆಗೆ ಹಣಕಾಸಿನ ನೆರವು, ಸಾಮಾಜಿಕ ಭದ್ರತೆ, ಅಸಂಘಟಿತ ವಲಯದ ಕಾರ್ಮಿಕರಿಗೆ ಪೆನ್ಷನ್ ಇವೇ ಮೊದಲಾದ ಕಾರ್ಯಕ್ರಮಗಳಿಗೆ ತೀವ್ರ ಹಣಕಾಸಿನ ಅಭಾವ ಎದುರಾಗಲಿದೆ. ಪ್ರಸಕ್ತ ಬಜೆಟ್ ಇನ್ನೊಂದು ವಿಧದಲ್ಲಿ ಅಪಾಯಕಾರಿಯೂ ಆಗಿದೆ ಏಕೆಂದರೆ ಅದರ ಅನೇಕ ಅಂಶಗಳು ದಲಿತ, ಆದಿವಾಸಿ, ಅಲ್ಪಸಂಖ್ಯಾತ ಸಮುದಾಯಗಳನ್ನು ಎರಡನೆ ಮತ್ತು ಮೂರನೆ ದರ್ಜೆಯ ಪ್ರಜೆಗಳನ್ನಾಗಿ ಮಾಡುವ ಆರೆಸ್ಸೆಸ್‌ನ ಗುಪ್ತ ಕಾರ್ಯಸೂಚಿಗೆ ಪೂರಕವಾಗಿವೆ. ಉದಾಹರಣೆಗೆ ದಲಿತರಿಗೆಂದು ತೆಗೆದಿರಿಸಲಾಗಿರುವುದರ ಮೊತ್ತದ ಶೇಕಡಾ 86ಕ್ಕೂ ಅಧಿಕಾಂಶ ಅಭಿವೃದ್ಧಿಗೆ ಪ್ರೇರಕವಲ್ಲದ ಸಾಮಾಜಿಕ ಸೇವೆ, ಕಲ್ಯಾಣ. ಮತ್ತು ಗೃಹನಿರ್ಮಾಣ ಯೋಜನೆಗಳಿಗೆ ವಿನಿಯೋಗವಾಗಲಿದೆ. ದಲಿತ, ಆದಿವಾಸಿ ಮಹಿಳೆಯರಿಗೆ ಹಿಡಿಗೂಳಿನಷ್ಟು ಮೊತ್ತವನ್ನು ಒದಗಿಸಲಾಗಿದೆ. ಮಾತ್ರವಲ್ಲ ದಲಿತ, ಆದಿವಾಸಿ, ಅಲ್ಪಸಂಖ್ಯಾತರ ಮಕ್ಕಳಿಗೆ ಶೈಕ್ಷಣಿಕ ನೆರವಿನ ಮೊತ್ತದಲ್ಲಿ ಇನ್ನಷ್ಟು ಕಡಿತ ಮಾಡಲಾಗಿದೆ. ಚುಟುಕಾಗಿ ಹೇಳುವುದಾದರೆ ಇದು ಅಂಚಿನಲ್ಲಿರುವ ಸಮುದಾಯಗಳನ್ನು ಮೇಲೆತ್ತುವ ಬದಲು ಪಾತಾಳಕ್ಕೆ ತಳ್ಳುವ ಬಜೆಟ್.

ರೈತಪರ ಅಲ್ಲ

ಇದೊಂದು ರೈತಪರ ಬಜೆಟ್ ಅಂತ ಭಟ್ಟಂಗಿ ಮಾಧ್ಯಮಗಳಲ್ಲಿ ದೊಡ್ಡದಾಗಿ ಟಾಂಟಾಂ ಮಾಡಲಾಗಿದೆ. ನೀರಾವರಿ, ಕೃಷಿವಿಮೆ, ಅಂತರ್ಜಲ ಬಳಕೆ ಮುಂತಾದವುಗಳು ಸೇರಿದಂತೆ ಕೃಷಿವಲಯಕ್ಕೆ ಅನುದಾನವನ್ನು ಶೇಕಡಾ 84ರಷ್ಟು ಹೆಚ್ಚಿಸಲಾಗಿರುವುದನ್ನೂ ಮೇಲುನೋಟಕ್ಕೆ ಕಾಣಬಹುದು. ಆದರೆ ನೀರಾವರಿ, ವಿಮೆ, ಅಂತರ್ಜಲ ಬಳಕೆಯ ಪ್ರಸಕ್ತ ಮಾದರಿಗಳನ್ನು ಬದಲಾಯಿಸುವುದು ಬಾಯಲ್ಲಿ ಹೇಳಿದಷ್ಟು ಸುಲಭವಲ್ಲ, ಬಹಳ ಮುಖ್ಯವಾಗಿ ಕಳೆದ 30 ವರ್ಷಗಳಲ್ಲಿ ಕಂಡುಕೇಳರಿಯದಂಥ ಭೀಕರ ಬರಗಾಲಗಳನ್ನೆದುರಿಸಿದ ಈ ಸಂದರ್ಭದಲ್ಲಿ, ಚಳಿಗಾಲದ ಬೀಜ ಬಿತ್ತನೆ ಕಳೆದ ನಾಲ್ಕು ವರ್ಷಗಳಿಗಿಂತಲೂ ಕನಿಷ್ಠ ಮಟ್ಟಕ್ಕಿಳಿದ ಈ ಸಂದರ್ಭದಲ್ಲಿ, ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಈ ಸಂದರ್ಭದಲ್ಲಿ, ಕಳೆದ 50 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಕೃಷಿ ಕಾರ್ಮಿಕರ ವೇತನಗಳಲ್ಲಿ ಇಳಿಕೆಯಾಗಿರುವ ಈ ಸಂದರ್ಭದಲ್ಲಿ, ಕೃಷಿ ಭೂಮಿಯ ಕಬಳಿಕೆಗಾಗಿದ್ದ ಭೂಸ್ವಾಧೀನ ಮಸೂದೆಯನ್ನು ಜಾರಿಗೊಳಿಸಲೆತ್ನಿಸಿ ಸೋತ ಈ ಸಂದರ್ಭದಲ್ಲಿ ಗ್ರಾಮೀಣ ಭಾಗದ ಜನಪ್ರಿಯತೆಯನ್ನು ಮರಳಿ ಗಳಿಸುವ ಸಲುವಾಗಿ ಹೂಡಿರುವ ತಂತ್ರ ಇದಾಗಿದೆ. ವಾಸ್ತವವಾಗಿ ರೈತಾಪಿ ಕುರಿತ ರಾಷ್ಟ್ರೀಯ ಆಯೋಗ ನೀಡಿರುವ ಸಲಹೆಗಳ ಬಗ್ಗೆ ಮೋದಿ ಸರ್ಕಾರದ ಬಜೆಟ್ ಸಂಪೂರ್ಣ ಮೌನ ತಳೆದಿದೆ. ಆಯೋಗದ ವರದಿಯಲ್ಲಿ ನಿಜಕ್ಕೂ ರೈತರ ಸಂಕಷ್ಟಗಳನ್ನು ದೂರಮಾಡಬಲ್ಲಂತಹ ಸಲಹೆಗಳಿವೆ. ಉದಾಹರಣೆಗೆ ಸರಕಾರದ ಕನಿಷ್ಠ ಬೆಂಬಲ ಬೆಲೆ ಉತ್ಪಾದನೆಯ ವೆಚ್ಚಕ್ಕಿಂತಲೂ ಶೇಕಡಾ 50ರಷ್ಟು ಹೆಚ್ಚಿರಬೇಕು ಎಂದು ಸೂಚಿಸಲಾಗಿದೆ. ಆಯೋಗದ ಇಂತಹ ಸಲಹೆಗಳೆಲ್ಲವೂ ಬಹುಶಃ ಕಸದಬುಟ್ಟಿಗೆ ಸೇರಿರಬೇಕೆಂದು ಊಹಿಸಿದರೆ ತಪ್ಪಾಗದು.

ಅಂಚಿನಲ್ಲಿರುವ ಸಮುದಾಯಗಳ ಪರ ಅಲ್ಲ

ಮೋದಿ ಸರ್ಕಾರ ಕೊಟ್ಟಿದ್ದ ಭರವಸೆಯ ಪ್ರಕಾರ ದಲಿತರು ಮತ್ತು ಆದಿವಾಸಿಗಳಿಗಾಗಿ ಶೇಕಡಾ 16.8ರಷ್ಟು ಅನುದಾನ ಒದಗಿಸಬೇಕಾಗಿತ್ತು, ಆದರೆ ಆ ಭರವಸೆ ಈಗ ಎತ್ತಲೋ ಹಾರಿಹೋಗಿದೆ. ಈ ಬಾರಿಯ ಬಜೆಟ್‌ನಲ್ಲಿ ಅನುದಾನದ ಮೊತ್ತವನ್ನು ಶೇಕಡಾ 16.8ರಿಂದ 7.6ಕ್ಕೆ ಇಳಿಸಲಾಗಿದೆ. ಅಂದರೆ ಸುಮಾರು 75,764 ಕೋಟಿ ರೂಪಾಯಿಗಳಷ್ಟು ಕಡಿತ ಮಾಡಲಾಗಿದೆ. ಪರಿಣಾಮವಾಗಿ ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ) ಈಗಾಗಲೆ ನೆಟ್ (NET) ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಸೌಲಭ್ಯವನ್ನು ನಿರಾಕರಿಸಿದೆ. ವಿದ್ಯಾರ್ಥಿಗಳು ಮೋದಿ ಸರ್ಕಾರದ ಈ ದಲಿತ, ಆದಿವಾಸಿ, ಹಿಂದುಳಿದ ವರ್ಗ (ಒಬಿಸಿ) ವಿರೋಧಿ ಕ್ರಮವನ್ನು ಪ್ರತಿಭಟಿಸಿ 'ಆಕ್ಯುಪೈ ಯುಜಿಸಿ' ಹೋರಾಟ ನಡೆಸಿದ್ದಾರೆ. ಹೈದರಾಬಾದ್ ವಿವಿಯ ರೋಹಿತ್ ವೇಮುಲ ಎಂಬ ದಲಿತ, ಸಂಶೋಧನಾ ವಿದ್ಯಾರ್ಥಿಯ ಆತ್ಮಹತ್ಯೆಗೆ ಪ್ರಧಾನ ಕಾರಣ ಇದೇ ಆಗಿದೆ. ಈ ಬಾರಿಯ ಬಜೆಟ್‌ನಲ್ಲಿ ಸರ್ಕಾರದಿಂದ ಯುಜಿಸಿಗೆ ಬರಲಿರುವ 897 ಕೋಟಿ ರೂಪಾಯಿಗಳಲ್ಲಿ 60% ಸ್ಥಿರಾಸ್ತಿಗೂ, 30% ಸಹಾಯಧನಕ್ಕೂ ಮೀಸಲಿಡಲಾಗಿದೆ. ಮಿಕ್ಕಂತೆ ದಲಿತ, ಆದಿವಾಸಿ, ಹಿಂದುಳಿದ ವರ್ಗಗಳಿಗೆ ಉಳಿಯುವುದು ಬರೀ 8%. ಮೋದಿ ಸರ್ಕಾರಕ್ಕೆ ದಲಿತ, ಆದಿವಾಸಿ ಮಹಿಳೆಯರ ಬಗ್ಗೆ ಯಾವ ಕಾಳಜಿಯೂ ಇಲ್ಲವೆಂಬುದಕ್ಕೆ ಬಜೆಟಿನಲ್ಲಿ ದಲಿತ ಮಹಿಳೆಯರಿಗೆ ಕೇವಲ 1% ಮತ್ತು ಆದಿವಾಸಿ ಮಹಿಳೆಯರಿಗೆ ಕೇವಲ 2% ಮೀಸಲಾಗಿಟ್ಟಿರುವುದೆ ಸಾಕ್ಷಿ. ಸಮಾಜದ ಅಂಚಿನಲ್ಲಿರುವ ಅಲ್ಪಸಂಖ್ಯಾತ, ದಲಿತ, ಆದಿವಾಸಿ, ಒಬಿಸಿ ಸಮುದಾಯಗಳ ಮಕ್ಕಳಿಗಾಗಿ ಇರುವಂತಹ ವಿದ್ಯಾರ್ಥಿವೇತನ, ಹಾಸ್ಟೆಲ್ ಸೌಲಭ್ಯ, ಆರೋಗ್ಯ ಇತ್ಯಾದಿ ವಿವಿಧ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಕತ್ತರಿಪ್ರಯೋಗ ಮಾಡಲಾಗಿದೆ ನೋಡಿ:

ಮದ್ರಸಾಗಳಿಗೆ/ಅಲ್ಪಸಂಖ್ಯಾತರಿಗೆ ಶಿಕ್ಷಣದ ಯೋಜನೆ - 68% ಕಡಿತ.

ಅಲ್ಪಸಂಖ್ಯಾತರ ಮಾಧ್ಯಮಿಕ ಶಿಕ್ಷಣಕ್ಕೆ ವಿದ್ಯಾರ್ಥಿವೇತನ - 10.48% ಕಡಿತ.

ಅಲ್ಪಸಂಖ್ಯಾತರ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿವೇತನ - 5.19% ಕಡಿತ.

ದಲಿತರ ಮಾಧ್ಯಮಿಕ ಶಿಕ್ಷಣಕ್ಕೆ ವಿದ್ಯಾರ್ಥಿವೇತನ - 34.74% ಕಡಿತ.

ದಲಿತ ಬಾಲಕಿಯರ ಹಾಸ್ಟೆಲ್ - 21.84% ಕಡಿತ.

ದಲಿತ ಬಾಲಕರ ಹಾಸ್ಟೆಲ್ - 80.08% ಕಡಿತ.

ದುರ್ಬಲ ದಲಿತ ಗುಂಪುಗಳ ಮಕ್ಕಳಿಗೆ ಪ್ರೋತ್ಸಾಹಧನ - 90% ಕಡಿತ.

ದಲಿತರ ನೆರವಿಗಾಗಿರುವ ಸ್ವಯಂಸೇವಾ ಸಂಸ್ಥೆಗಳು - 2% ಕಡಿತ.

ಒಬಿಸಿಗಳ ಮಾಧ್ಯಮಿಕ ಶಿಕ್ಷಣಕ್ಕೆ ವಿದ್ಯಾರ್ಥಿವೇತನ - 5.93% ಕಡಿತ.

ಒಬಿಸಿ ಬಾಲಕ, ಬಾಲಕಿಯರ ಹಾಸ್ಟೆಲ್ - 13.25% ಕಡಿತ.

ಒಬಿಸಿ ನೆರವಿಗಾಗಿರುವ ಸ್ವಯಂಸೇವಾ ಸಂಸ್ಥೆಗಳು - 40% ಕಡಿತ.

ಅಕ್ಷರತೆಯ ಕೊರತೆ ಇರುವ ಜಿಲ್ಲೆಗಳಲ್ಲಿ ಆದಿವಾಸಿ ಬಾಲಕಿಯರ ಶಿಕ್ಷಣದ ಸಬಲೀಕರಣ - 100% ಕಡಿತ.

ಮಕ್ಕಳು, ಮಹಿಳೆಯರ ಪರ ಅಲ್ಲ

ಭಾರತದಲ್ಲಿ ಮಕ್ಕಳ ಸಂಖ್ಯೆ ದೇಶದ ಒಟ್ಟು ಜನಸಂಖ್ಯೆಯ ಶೇಕಡಾ 37ರಷ್ಟಿದೆ. 2014-15ರ ಸಾಲಿನ ಬಜೆಟ್ ಅನುದಾನದಲ್ಲಿ ಮಕ್ಕಳಿಗಾಗಿರುವ ವಿವಿಧ ಯೋಜನೆಗಳ ಪಾಲು ಶೇಕಡಾ 4.52ರಷ್ಟು ಇದ್ದರೆ 2014-15ರಲ್ಲಿ ಅದನ್ನು ಶೇಕಡಾ 3.26ಕ್ಕೆ ಇಳಿಸಲಾಗಿತ್ತು. ಅಂದರೆ ಸುಮಾರು 30% ಕಡಿತ ಮಾಡಲಾಗಿತ್ತು, ಈ ಸಲ ತೋರಿಕೆಗಾಗಿ ಬರೀ ಶೇಕಡಾ 0.06ರಷ್ಟು ಹೆಚ್ಚಳ ಮಾಡಲಾಗಿದೆ. ಸರ್ವಶಿಕ್ಷಣ ಅಭಿಯಾನಕ್ಕೆ ಅನುದಾನವನ್ನು ಶೇಕಡಾ 2.3ರಷ್ಟು ಹೆಚ್ಚಿಸಲಾಗಿದೆಯಾದರೂ ಇದು ತೀರ ಅತ್ಯಲ್ಪ ಏಕೆಂದರೆ ಇಷ್ಟು ಮಾತ್ರದಿಂದ ಸರಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯಲ್ಲಿ ಏರಿಕೆ, ಬೋಧನೆಯ ಗುಣಮಟ್ಟದಲ್ಲಿ ಸುಧಾರಣೆ ಇತ್ಯಾದಿ ಗುರಿಗಳನ್ನು ಸಾಧಿಸಲು ಸಾಧ್ಯವಿಲ್ಲ. ಕಳೆದ ವರ್ಷ 6000 ಮಾದರಿ ಶಾಲೆಗಳನ್ನು ಸ್ಥಾಪಿಸಲಾಗುವುದೆಂದು ಘೋಷಿಸಿದ್ದ ಮೋದಿ ಸರ್ಕಾರ ಈ ಬಾರಿ ಆ ಕುರಿತು ಮೌನ ತಾಳಿದೆ. ಇನ್ನು 62 ಹೊಸ ನವೋದಯ ವಿದ್ಯಾಲಯಗಳ ಸ್ಥಾಪನೆ ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಲಿದೆ. ಕೆಲವೊಂದು ಕಡಿತಗಳ ವಿವರಗಳು ಹೀಗಿವೆ:

ರಾಷ್ಟ್ರೀಯ ಬಾಲಭವನಗಳು - 21.3% ಕಡಿತ.

ಬಾಲಕಿಯರ ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಧನ - 55% ಕಡಿತ.

ಅರ್ಹತೆ ಮತ್ತು ಆದಾಯ ಆಧಾರಿತ ರಾಷ್ಟ್ರೀಯ ವಿದ್ಯಾರ್ಥಿವೇತನ - 50% ಕಡಿತ.

ಸಮಗ್ರ ಮಕ್ಕಳ ರಕ್ಷಣಾ ಕಾರ್ಯಕ್ರಮ - 1.3% ಕಡಿತ.

ಬಾಲ ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರ ಸ್ಥಿತಿ ಸುಧಾರಣೆ - 44% ಕಡಿತ.

ಬಾಲ ಕಾರ್ಮಿಕರ ಕಲ್ಯಾಣ - 70% ಕಡಿತ.


ಕೇಂದ್ರ ದತ್ತು ನೆರವಿನ ಸಂಸ್ಥೆ - 11.39% ಕಡಿ


ದೀನದಯಾಳ್ ಅಂಗವಿಕಲರ ಮರುವಸತಿ ಯೋಜ - 25% ಕಡಿತ.

ಮಕ್ಕಳ ಪೌಷ್ಟಿಕತೆಯನ್ನು ಸುಧಾರಿಸುವ ಸಲುವಾಗಿರು ಐಸಿಡಿಸ್ ಯೋಜನೆಗೆ ಅನುದಾನದಲ್ಲಿ ಶೇಕಡಾ 7ರ ಕಡಿತ ಮಾಡಲಾಗಿದೆ. ಈ ಕಡಿತದ ಪ್ರಮಾಣ ಕಳೆದೆರ ವರ್ಷಗಳಿಂದೀಚೆಗೆ ತೀವ್ರ ಏರಿಕೆ ಕಂಡಿರುವುದನ ಗಮನಿಸಬಹುದು. ಇನ್ನು ಬಿಸಿಯೂಟ ಕಾರ್ಯಕ್ರಮ 2014-15ರಲ್ಲಿ 0.74% ಅನುದಾನ ನೀಡಲಾಗಿತ ಇದೀಗ ಅದನ್ನು 0.49% ಕ್ಕೆ ಇಳಿಸಲಾಗಿದೆ. ವಾಸ್ತವದ ಈ ಹೂಡಿಕೆಯನ್ನು ಹೆಚ್ಚಿಸಬೇಕಾಗಿತ್ತು ಏಕೆಂದರೆ ಇತ್ತೀಚಿ ಆರ್ಥಿಕ ಸಮೀಕ್ಷೆಯ ವರದಿ ಹೇಳುವಂತೆ ದೇಶದಲ್ಲಿರು ದೊಡ್ಡ ಸಂಖ್ಯೆಯ ಯುವಜನತೆಯನ್ನು ಪರಿಣಾಮಕಾರಿಯಾ ಬಳಸಿಕೊಳ್ಳಬೇಕಿದ್ದರೆ ಮಕ್ಕಳ ಪೌಷ್ಟಿಕ ಆಹಾ ಯೋಜನೆಗಳಿಗೆ ಅಧಿಕ ಹೂಡಿಕೆಯ ಅಗತ್ಯವಿದೆ. ಕಳೆ ವರ್ಷದ ಹಾಗೆ ಈ ಸಲದ ಬಜೆಟ್ ಕೂಡಾ ಮಕ್ಕ ಆರೋಗ್ಯದ ವಿಷಯವನ್ನು ನಿರ್ಲಕ್ಷಿಸಿದೆ. ಮಕ್ಕಳ ಆರೋ ಚೆನ್ನಾಗಿರದಿದ್ದರೆ ದೇಶ ಏನು ಅಭಿವೃದ್ಧಿ ಸಾಧಿಸಲು ಸಾಧ್ 2012-13ರಲ್ಲಿ ಮಕ್ಕಳ ಆರೋಗ್ಯಕ್ಕಾಗಿ ಶೇಕಡಾ 0.18ರ ಅನುದಾನ ಒದಗಿಸಲಾಗಿತ್ತು, 2015-16ರಲ್ಲಿ ಅದನ 0.13ಕ್ಕೆ ಇಳಿಸಲಾಗಿತ್ತು, 2016-17ರಲ್ಲಿ ಇನ್ನಷ್ಟು ಕಡಿ ಮಾಡಲಾಗಿದೆ. ಅದನ್ನೀಗ ಶೇಕಡಾ 0.12ಕ್ಕೆ ಇಳಿಸಲಾಗಿದ (2015-16: 15,483 ಕೋಟಿ ರೂಪಾಯಿಗಳ 2016-17: 14000 ಕೋಟಿ ರೂಪಾಯಿಗಳು ಇದೆಲ್ಲದರ ನಡುವೆ ಕಳೆದೆರಡು ವರ್ಷಗಳಿಂದ ದಿಲ್ಲಿಯ ಕಲಾವತಿ ಸರನ್ ಮಕ್ಕಳ ಆಸ್ಪತ್ರೆ ಮತ್ತು ಸಿಂಗೂರ್‌ನಲ್ಲಿರು ಮಕ್ಕಳ ಪಾಲನೆಪೋಷಣೆ ತರಬೇತಿ ಕೇಂದ್ರಗಳಿಗೆ ಸತತವಾ ಹಣಕಾಸು ನೆರವಿನ ಮೊತ್ತ ಹೆಚ್ಚುತ್ತಲೇ ಇರುವುದು ಮಾ ಭಾರಿ ಕುತೂಹಲಕಾರಿಯಾಗಿದೆ.

ಒಟ್ಟಾರೆಯಾಗಿ ಸಂಘ ಪರಿವಾರದ ಗು ಕಾರ್ಯಸೂಚಿಗೆ ಅನುಗುಣವಾಗಿ ಸಿದ್ಧಪಡಿಸಲಾಗಿರು ಈ ಬಜೆಟ್‌ನ ವೈಶಿಷ್ಟ್ಯಗಳೆಂದರೆ ಕೆಲವೇ ಮಂದಿಯ ವಿಕಾಸ ಮತ್ತು ಭ್ರಷ್ಟಾಚಾರಕ್ಕೆ ಮುಕ್ತ ಅವಕಾಶ.

(ಆಧಾರ: *www.indiaspend.com <http:/ /www.indiaspend.com>; NCDH* ವಿಶ್ಲೇಷಣೆ; ಲಿಂಕ್: *Centre for Child Right* ವಿಶ್ಲೇಷಣೆ; *The Hindu* (3.3.16) ವರದ







ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭವಿಯಾಗು ಭುವನದೊಳು

ಸಿದ್ಧಾರೂಢರ ಜೋಳಿಗೆ ಜಗತ್ತಿಗೆಲ್ಲಾ ಹೋಳಿಗೆ ಎಂಬುದು ಒಂದು ನಾಣ್ನುಡಿ.

ಸಿದ್ಧಾರೂಢರೊಬ್ಬರು ಸಿದ್ಧರು ಎಂಬುದರ ಬಗೆಗಾಗಲಿ, ಆರೂಢರು ಎಂಬುದರ ಬಗೆಗಾಗಲಿ ಆಧ್ಯಾತ್ಮಿಕ ಲೇಖನ ಬರೆಯುವ ಅಗತ್ಯವಿಲ್ಲ ಈಗ. ಆದರೆ ಸಿದ್ಧಾರೂಢರ ಬಗ್ಗೆ ಅರಿಯಬೇಕಾದರೆ ಅವರು ತೆಗೆದುಕೊಂಡಂತಹ ಕ್ರಾಂತಿಕಾರಕ ನಡೆಗಳ ಬಗ್ಗೆ ಮಾತಾಡುವ, ದಾಖಲಿಸುವ ಅಗತ್ಯವಂತೂ ಈಗ ಇದೆ. ಇದಕ್ಕಿಂತ ಮುಖ್ಯವಾಗಿ ಜಗತ್ತನ್ನೇ ಉದ್ಧರಿಸುವ ಸಿದ್ಧಾರೂಢರು ಎಂದು ಪವಾಡ ಪುರುಷನಾಗಿ ಪ್ರತೀತಿಯ ಮಿತಿಯಲ್ಲಿ ಕಿರಿದಾಗಿ ಹೋಗುತ್ತಿರುವ ಸಿದ್ಧಾರೂಢರನ್ನು, ಪವಾಡಗಳ, ಪೌರಾಣಿಕ ವ್ಯಾಖ್ಯಾನಗಳಿಂದ ಉದ್ಧರಿಸುವ ಅಗತ್ಯವಿದೆ.

ಹುಬ್ಬಳ್ಳಿಯ ಸಿದ್ಧಾರೂಢರು

ಸಿದ್ಧಾರೂಢರು ಆಧ್ಯಾತ್ಮದ ಉತ್ತುಂಗದ ಮಹಾನ್ ಶಕ್ತಿ. ಅವರದು ಸರಳ ಜೀವನ ಮತ್ತು ಸಮ ದರುಶನ. ಆದರೆ ಅವರ ಚರಿತಾಮೃತದಲ್ಲಿ ತೊಡಕಾಗಿರುವುದು ಏನೆಂದರೆ ಅವರ ಪವಾಡಗಳ ಅತಿಶಯ ವರ್ಣನೆಗಳು. ನಮ್ಮ ದೇಶದಲ್ಲಷ್ಟೇ ಅಲ್ಲ, ಯಾವುದೇ ದೇಶದಲ್ಲಿ, ಯಾವುದೇ ಕಾಲದಲ್ಲಿ ಪವಾಡಗಳನ್ನೆ, ಜನಸಾಮಾನ್ಯರು ಮಾಡಲಾಗದ ಪವಾಡಗಳನ್ನು ಯಾರು ಮಾಡುವರೋ ಅವರೇ ಸಿದ್ಧ ಯೋಗಿಗಳು, ಆರೂಢರು, ಮಹಾಂತರು ಎಂಬ ಸಾಂಪ್ರದಾಯಕ ಮನೋಭೂಮಿಕೆಯನ್ನು ಹೊಂದಿರುವ ಎಲ್ಲಾ ಭ್ರಾಮಕರೂ ಎದುರುನೋಡುವುದು ಪವಾಡಗಳನ್ನೇ. ತನ್ನ ನೆಚ್ಚಿನ ಮಹಾಂತನನ್ನು ಮತ್ತೊಬ್ಬನಿಗೆ ಪರಿಚಯಿಸಲು ಇಂತಹ ಪವಾಡಗಳಿಗೆ ಮಾರು ಹೋಗುತ್ತಾರೆ.

ನಾನು ಸಣ್ಣ ವಯಸ್ಸಿನಿಂದಲೂ ಸಿದ್ಧಾರೂಢರ ಆಶ್ರಮದಲ್ಲಿಯೇ ಬೆಳೆದವನು. ಅವರ ಮೇಲೆ ನನಗಂತೂ ನನ್ನ ಮನೆಯ ಅಜ್ಜನಂತೆ, ಮಿಗಿಲಾಗಿ ತಂದೆಯಂತೆಯೇ ಪ್ರೀತಿ, ಆತ್ಮೀಯತೆ.

ಒಮ್ಮೆ ರಂಗಕರ್ಮಿಯೆಂದು ನನ್ನ ಗುರುತಿಸಿದ ಶ್ರೀ ಸಿದ್ಧಾಶ್ರಮದ ಗೋವಿಂದ ಸ್ವಾಮಿ ನನ್ನ ಸಂಪರ್ಕಿಸಿ ಸಿದ್ಧಾರೂಢರ ಬಗ್ಗೆ ಒಂದು ನಾಟಕವನ್ನು ಮಾಡಬೇಕೆಂದು ಬಯಸಿದರು. ನಾನಂತೂ ಬಹಳ ಆನಂದದಿಂದ ಒಪ್ಪಿಕೊಂಡೆ. ಅದಕ್ಕೆ ತಕ್ಕ ತಯಾರಿಯನ್ನೂ ಮಾಡತೊಡಗಿದೆ. ಸಿದ್ಧಾರೂಢರು ಒಬ್ಬ ಕ್ರಾಂತಿಯೋಗಿ. ಸಾಂಪ್ರದಾಯಕ ಚೌಕಟ್ಟಿನ ಧರ್ಮವನ್ನು ಪ್ರಶ್ನಿಸುತ್ತಾ ತಮ್ಮ ಮನೆಯಲ್ಲಿ ಅಥವಾ ಮಠದಲ್ಲಿ ಪ್ರವಚನ ಮಾಡುತ್ತಿದ್ದ ಗುರುಗಳನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಬಾಲಕ ಸಿದ್ಧನ ಪ್ರಶ್ನೆಗಳು ಅಲೆಗಳಂತೆ ಹಿಂದೆಹಿಂದೆಯೇ ಬರುತ್ತಿದ್ದು ಅವುಗಳ ಸೂಕ್ಷ್ಮತೆ ಅಥವಾ ಎತ್ತರ ಉತ್ತರಿಸುವವರಿಗೆ ತಿಳಿಯುತ್ತಿರಲಿಲ್ಲ. ಏಕೆಂದರೆ ಸಂಪ್ರದಾಯದ



ಕೋಟೆಯಲ್ಲಿಯೇ ಬಂಧಿತರಾಗಿದ್ದವರು ಅಂತಹ ವಿಚಾರಗಳನ್ನೂ ಮಾಡುತ್ತಿರಲಿಲ್ಲ. ಒಟ್ಟಾರೆ ಈ ಸಂಪ್ರದಾಯವಾದಿ ಗುರುಗಳಿಂದ ತನಗೆ ವಿಷಯ ಸಿಗಲಾರದೆಂದು ಬಾಲಕ ಸಿದ್ಧ ತನ್ನ ದಾಹವನ್ನು ತೀರಿಸುವ ಒಬ್ಬ ಸದ್ಗುರುವನ್ನು ಹುಡುಕುತ್ತಾ ಹೊರಟ. ನಂತರ ತನಗೆ ದೊರಕಿದ ಗುರುವಿನಲ್ಲಿ ತನ್ನ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡ. ಆಗಿನ ಸಂಪ್ರದಾಯವಾದಿಗಳ ಕಂಗಳಿಗೆ ಗುರಿಯಾಗುವಂತೆ ಅವರು ಮಾಡಿದ ಮೊದಲ ಕ್ರಾಂತಿಕಾರಕ ಕೆಲಸವೆಂದರೆ ತಮ್ಮ ಕೊರಳಲ್ಲಿದ್ದ ಲಿಂಗವನ್ನು ತೆಗೆದು ತಮ್ಮ ಗುರುವಿನ ಪದತಲದಲ್ಲಿಟ್ಟು ಹೊರಟುಬಂದದ್ದು.

ಲಿಂಗ ವರ್ಸಸ್ ಲಿಂಗ

ಅಂಗೈಯಲ್ಲಿ ಇಷ್ಟಲಿಂಗವಿರಲು ಬೆಟ್ಟದ ಲಿಂಗದ ಹಂಗೇಕಯ್ಯ ಎಂದು ಬಸವ ಕೇಳಿದರೆ, ಅಲ್ಲಮ ಅವನಿಗಿಂತ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಅರುಹಿನ ಲಿಂಗವು ದೊರಕಾದ ಬಳಿಕ ಕುರುಹಿನ ಲಿಂಗದ ಹಂಗೇಕಯ್ಯಾ ಎಂದ. ಅಂಗೈಯಲ್ಲಿ ಲಿಂಗವು ಒಂದು ಕುರುಹು. ಅದೇ ಗುರಿಯಲ್ಲ. ಅದೊಂದು ಮಾರ್ಗ. ಅದರ ಮೂಲಕ ಸೇರುವಂತ ಮತ್ತೊಂದು ಮಹತ್ತರವಾದ ಗಮ್ಯವಿದೆ ಎಂದು ತಿಳಿದಿದ್ದ ಸಿದ್ಧಾರೂಢರು ಲಿಂಗವನ್ನು ತ್ಯಜಿಸಿದ್ದರು.

ಸಂಕೇತ ತೊಡದ ಭವಿ

ಲಿಂಗವನ್ನು ಧರಿಸಿರದಿದ್ದ ಕಾರಣ ಅವರನ್ನು ಭವಿಯೆಂದು ಜರಿಯಲಾಯಿತು. ಬಹಿಷ್ಕಾರ ಹಾಕಲಾಯಿತು. ಕುಚೇಷ್ಟೆಗಳನ್ನು ಮಾಡುತ್ತಿದ್ದರು. ಸಂಚು ಮಾಡಿ ಅವರನ್ನು ಹೊಡೆದು ಸಾಯಿಸುವ ಪ್ರಯತ್ನವನ್ನು ಮಾಡಲಾಯಿತು. ತಲೆಯ ಮೇಲೆ ಬೆಂಕಿ ಹಾಕಿದ್ದರು. ಇಷ್ಟೆಲ್ಲಾ ತೊಂದರೆಗಳನ್ನು ಸಹಿಸಿಕೊಂಡು ಸಿದ್ಧಾರೂಢರು, ಅವರಿಗೂ ಕೇಡನ್ನು ಬಯಸದೇ ತಾವು ಜನರಿಗೆ ಯಾವ ಆಧ್ಯಾತ್ಮಿಕ ತಿಳಿವಳಿಕೆ ನೀಡಬೇಕೋ ಆ ತಿಳಿವಳಿಕೆಯನ್ನು ನೀಡುತ್ತಾ ಇದ್ದರು. ಇವರು ಪ್ರಖ್ಯಾತರಾಗಿ ಒಂದೆಡೆ ನೆಲೆ ನಿಂತು ಹುಬ್ಬಳ್ಳಿಯಲ್ಲಿ ಮಠ ಮಾಡಿದ ಮೇಲೂ ಇವರ ಏಳ್ಗೆಯನ್ನು ಸಹಿಸದ, ಮಠದಲ್ಲೇ ಅಂತಹ ಮಹಾತ್ಮರ ಸನ್ನಿಧಿಯಲ್ಲೇ ಉಂಟಾದ ಗುಂಪುಗಾರಿಕೆಯಿಂದಾಗಿ




ಸಿದ್ಧಾರೂಢರನ್ನು ಕೋರ್ಟಿಗೆಳೆದಿದ್ದರು, ಅವರಿಗೆ ವಿಷವುಣಿಸಿದ್ದರು.

ಭುವನದಲ್ಲಿ ಯಾವ ಸಂಕೇತವೂ ಇಲ್ಲದೇ ಭವಿಯಾದ ಸಿದ್ಧಾರೂಢರು ಮಹಾನ್ ಮಾನವತಾವಾದಿ, ಸಾಮಾಜಿಕ ಕಾಳಜಿ ಉಳ್ಳವರು ಮತ್ತು ಸಿದ್ಧಯೋಗಿ.

ಆಧ್ಯಾತ್ಮಕ ಸೂಕ್ಷ್ಮಗಳನ್ನು ವಿವರಿಸುತ್ತಾ, ಬಡವರಿಗೆ ಮತ್ತು ನೊಂದವರಿಗೆ ಸಾಮಾಜಿಕವಾಗಿ ಸಹಾಯ ಮಾಡುತ್ತಿದ್ದ ಮಹಾನ್ ಯೋಗಿ ಸಿದ್ಧಾರೂಢರ ಜೀವನ, ಸಂದೇಶ ಮತ್ತು ಆಧ್ಯಾತ್ಮಿಕ ಸಾಧನೆಯನ್ನು ಜನರಿಗೆ ತಿಳಿಸಲು ನನಗೆ ಒಂದು ಒಳ್ಳೆಯ ಅವಕಾಶ ಸಿಕ್ಕಿತೆಂದು ಮಾಹಿತಿಗಳನ್ನು ಕಲೆ ಹಾಕತೊಡಗಿದೆ. ಅದನ್ನು ಮುಂದಿಟ್ಟುಕೊಂಡು ಗೋವಿಂದಸ್ವಾಮಿಯವರ ಮುಂದೆ ಹೋದಾಗ, ಅದು ಹಾಗೆ ಬೇಡ ಎಂದು ಹೇಳಿ ಕೈಲಾಸದ ಒಡ್ಡೋಲಗದಿಂದ ಕಥೆಯನ್ನು ಪ್ರಾರಂಭಿಸಿ ಸಂಪೂರ್ಣ ಪೌರಾಣಿಕ ಕತೆಗಳ ರೀತಿಯಲ್ಲಿ ಅವನ್ನು ಒಯ್ಯುವ, ಪವಾಡಗಳಿಂದ ಸಿದ್ಧಾರೂಢರೆಂದರೆ ಅಬ್ಬಾ ಎನಿಸುವಂತೆ ಭಕ್ತಿ ಭಯ ಉಕ್ಕಿಸುವ ರೀತಿಯಲ್ಲಿ ಕಥೆಯನ್ನು ಮಾಡಿದ್ದರು. ಐತಿಹ್ಯವಿರುವಂತೆ, ಸಾಂಪ್ರದಾಯಕ ಕಥನಗಳಲ್ಲಿ ಇರುವಂತೆ ಅವರ ಪವಾಡಗಳನ್ನು ತೆಗೆದುಬಿಟ್ಟರೆ ಅಲ್ಲಿ ಹೇಳಲು ಏನೂ ಉಳಿದಿಲ್ಲವೆಂದು ಅವರ ವಾದ. ನಿಜ ಹೇಳಬೇಕೆಂದರೆ, ಅತಿಮಾನುಷವಾದಂತಹ ಪವಾಡಗಳನ್ನು ತುಂಬಿ ಕಥೆಯನ್ನು ರಸಭರಿತವನ್ನಾಗಿ ಮಾಡಲು ಯತ್ನಿಸುವುದರಿಂದ, ಆರೂಢರ ಸಜ್ಜನತೆ, ಸರಳತೆ, ಸದಾಶಯಗಳು ಲಕ್ಷ್ಯಕ್ಕೆ ಬರದೇ ಹೋಗುತ್ತವೆ ಎಂಬ ಅಂಶವೇ ಇವರಿಗೆ ಅರ್ಥವಾಗುವುದಿಲ್ಲ. ಅಂತೂ ಸಿದ್ಧಾರೂಢರ ಸುತ್ತ ಹೆಣೆದಿದ್ದ ಪೌರಾಣಿಕ ಐತಿಹ್ಯಗಳ ಒಗಟುಗಳನ್ನು ಬಿಡಿಸಿ ಸರಳ ಸಿದ್ಧರನ್ನಾಗಿ ತೋರಿಸಲು ನನಗೆ ಅನುಮತಿ ದೊರೆಯದೇ ನನ್ನ ಕಡೆಯಿಂದ ನನ್ನ ಪ್ರೀತಿಯ ಸಿದ್ಧಾರೂಢರ ನಾಟಕವನ್ನು ಮಾಡಲು ಸಾಧ್ಯವಾಗದೇ ಹೋಯಿತು.

ಹಾಳುಬಿದ್ದ ಚಾಮರಾಜಪೇಟೆ ಸಿದ್ಧಾಶ್ರಮ

ಬೆಂಗಳೂರಿನ ಚಾಮರಾಜಪೇಟೆಯ ಸಿದ್ಧಾಶ್ರಮದಲ್ಲಿ ನಾನು ಕಂಡಂತೆ ಎಪ್ಪತ್ತು ಮತ್ತು ಎಂಭತ್ತರ ದಶಕದಲ್ಲಿ ವೈಭವದಿಂದ ಮೆರೆಯುತ್ತಾ ಶಿವಾಯನಮಃ ಎಂಬ ಗರ್ಜನೆಯಿಂದ ತುಂಬಿದ್ದ ಮಠದಲ್ಲಿ ನಿತ್ಯ ಭಜನೆ, ಪ್ರವಚನ, ಆಧ್ಯಾತ್ಮಿಕ ಚರ್ಚೆ, ಹರಿಕಥೆ, ಗೀತಗಾಯನಗಳು, ಅನ್ನಸಂತರ್ಪಣೆ, ಪ್ರಸಾದವಿನಿಯೋಗ ಇತ್ಯಾದಿಗಳೆಲ್ಲಾ ನಡೆಯುತ್ತಾ, ಸಾಮಾನ್ಯ ಜನರಿಗೆ ಆಧ್ಯಾತ್ಮಿಕವಾಗಿ ಮತ್ತು ಸಾಮಾಜಿಕವಾಗಿ ಸಾಂತ್ವನ ಸಿಗುತ್ತಿತ್ತು. ಅಲ್ಲಿ ಜಾತಿ ಭೇದವಿರಲಿಲ್ಲ. ಅನೇಕಾನೇಕ ಶ್ರೇಷ್ಠ ಕಲಾವಿದರು,



ಪ್ರವಚನಕಾರರು, ಕೀರ್ತನಕಾರರು, ಭಜನಕಾರರು ಬರುತ್ತಿದ್ದು ನಿತ್ಯ ಬರುತ್ತಿದ್ದ ಜನರಿಗೆ ಮಾರ್ಗದರ್ಶನ ಮತ್ತು ಅರಿವು ದೊರೆಯುತ್ತಿತ್ತು. ಆದರೆ, ಆ ಮಠವು ಖಾಸಗಿತನದ ಜಗ್ಗಾಟದಲ್ಲಿ ಸಂಪೂರ್ಣವಾಗಿ ಪತನಗೊಂಡಿತು. ಇಂದು ಅದು ಬರಿಯ ಸ್ಮಾರಕದಂತೆ ಕಾಣುತ್ತಿದೆ. ಒಟ್ಟಾರೆ ಹಾಳಾಗಿಹೋಯಿತು. ಅಂದಿನ ಯಾವ ವೈಭವಗಳೂ ಇಂದಿಲ್ಲ. ಸಮಾಧಾನಕ್ಕೆ ಹುಬ್ಬಳ್ಳಿಯ ಸಿದ್ಧಾರೂಢರ ಮಠ ಚಟುವಟಿಕೆಗಳಿಂದ ಕೂಡಿದೆ. ಅದು ವ್ಯವಸ್ಥಿತವಾಗಿ ನಡೆಯುತ್ತಿದೆ. ಭೇದಭಾವವಿಲ್ಲದೇ ಯಾರಾದರೂ ಪೂಜಾವಿಗ್ರಹವನ್ನು ಸ್ಪರ್ಶಿಸಬಹುದು. ಆರತಿ ಮಾಡಿ ತಮ್ಮ ಭಕ್ತಿ ಮತ್ತು ಪ್ರೀತಿಯ ಸಂಕೇತಗಳನ್ನು ತೋರಬಹುದು.

ಪವಾಡಗಳ ಮುಸುಕಲ್ಲಿ ಮರೆಯಾಗುವ ಸತ್ಯದರ್ಶನಗಳು

ಇದೇ ರೀತಿಯಲ್ಲಿ ಪವಾಡಗಳನ್ನು ನಾನಾ ಸಿದ್ಧರಿಗೆ ಸಂತರಿಗೆ ಆರೋಪಿಸಿ ಜನರ ಮಧ್ಯೆ ಇರಿಸಿ ಅವರ ನಿಜವಾದ ವಿಷಯಗಳು ಜನರಿಗೆ ತಲುಪದಂತೆ ಮಾಡಿರುವ ಕೀರ್ತಿ ನಮ್ಮ ಭಾರತ ದೇಶದ್ದು. ಈ ಜನರೂ ಅಷ್ಟೇ ತಮ್ಮ ವೈಯಕ್ತಿಕ ಬದುಕಲ್ಲಿ ಯಾವುದೋ ಪವಾಡವಾಗಲೆಂದು ಕಾಯುತ್ತಿರುತ್ತಾರೆ. ಹಾಗೇನಾದರೂ ಸಂಭವಿಸಿದರೆ ಅಥವಾ ಕಾಕತಾಳೀಯವಾಗಿ ಘಟಿಸಿದರೆ ಅದನ್ನು ಬಣ್ಣಕಟ್ಟಿ ತಮ್ಮ ಸಹಜೀವಿಗಳಿಗೆ ಬಣ್ಣಿಸುತ್ತಾರೆ. ಅವರೂ ಅಂತಹ ವಿಷಯಗಳು ತಮ್ಮ ಜೀವನದಲ್ಲಿ ಘಟಿಸಲೆಂದು ನಿರೀಕ್ಷಿಸುತ್ತಾ ತಮ್ಮ ಭಕ್ತಿ ಮಾಡುತ್ತಿರುತ್ತಾರೆ. ಬಹುದೊಡ್ಡ ವ್ಯಂಗ್ಯ ಮತ್ತು ತಮಾಷೆಯೆಂದರೆ, ಯಾವ ಲೌಕಿಕ ಮತ್ತು ಸ್ವಾರ್ಥತೆಯನ್ನು ಕಡೆಗಣಿಸಿ ಸಾಕ್ಷಾತ್ಕಾರಕ್ಕೆ ಮಾರ್ಗ ತೋರಿದ ಸಂತರಲ್ಲಿ ಸದಾ ಲೌಕಿಕ ಮತ್ತು ಸ್ವಾರ್ಥತೆಗೆ ಬೇಕಾಗುವ ವಿಷಯಗಳನ್ನು ಮುಂದಿಟ್ಟುಕೊಂಡಿರುವ ಜನರೇ ಸುತ್ತ ನೆರೆದುಕೊಂಡು ಅವುಗಳ ಈಡೇರಿಕೆಗೆ ಸಂತರ ಸನ್ನಿಧಿಯಲ್ಲಿ ಸಾಧ್ಯತೆಗಳನ್ನು ಹುಡುಕಿಕೊಂಡಿರುತ್ತಾರೆ.

ಜನಸಾಮಾನ್ಯರ ಅನುದಿನದ ಬದುಕು ಬವಣೆಗಳಿಗೆ ಸಂತರು, ಸಿದ್ಧರು ಸ್ಪಂದಿಸುತ್ತಿದ್ದುದೇನೋ ನಿಜ ಆದರೆ, ಅವರ ಉದ್ದೇಶವು ತಮ್ಮ ಭಕ್ತರ ಲೌಕಿಕ ಬದುಕಿಗೆ ಅಗತ್ಯವಾದುದನ್ನು ದೊರಕಿಸಿಕೊಡುವಂತಹ ಎಟಿಎಂ ಮಿಷನ್ ಏನೂ ಆಗಬೇಕೆಂಬ ಉದ್ದೇಶದವರಲ್ಲ. ಪವಾಡಗಳ ಪಂಜರದಲ್ಲಿ ಸಿದ್ಧರನ್ನು ಬಂಧಿಸುವಂತಹ ಜನಕ್ಕೆ ಈ ವಿಷಯ ಎಂದಿಗೂ ಅರ್ಥವಾಗುವುದೂ ಇಲ್ಲ.

ಯೇಸುವಿನ ವಿಷಯದಲ್ಲಿಯೂ ಕೂಡ ಇದೇ ಆಗಿತ್ತು. ಬಸವಣ್ಣನ ವಿಷಯದಲ್ಲೂ ಹೀಗೇ ಆಗಿತ್ತು. ಅವರ ಜನನದ ಉದ್ದೇಶವನ್ನು ನಿರೂಪಿಸುವಂತಹ ಒಂದು ಪೌರಾಣಿಕ ಕತೆಯನ್ನು ಕಟ್ಟುವುದು ಮಾತ್ರವಲ್ಲದೇ, ಅವರ ಜೀವನದಲ್ಲಿ ಪವಾಡಗಳನ್ನು ತುರುಕಿದರು. ಯಾವ ಪವಾಡಗಳನ್ನು ಧಿಕ್ಕರಿಸಿದ್ದನೋ ಆ ಕ್ರಿಸ್ತನಿಗೆ ಸಂಪೂರ್ಣ ಪವಾಡಪುರುಷನನ್ನಾಗಿ ಬಿಂಬಿಸಿದರು. ಅದೇ ನಿರೀಕ್ಷೆಯಲ್ಲಿ ಅವನ ಹಿಂಬಾಲಕರು ಸೊರಗಿದರು. ಅವರ ಲೌಕಿಕ ಮತ್ತು ಅತಿಮಾನುಷ ಪ್ರಕಟಣೆಗಳ ನಿರೀಕ್ಷೆಗಳನ್ನು ಸಾಕಾರಕ್ಕೆ ತರಲಾಗದೇ ಯೇಸು ಶಿಲುಬೆಯ ಮೇಲೆ ಮರಣಿಸಿದ. ನಂತರ ಅದೇ ಯೇಸುವಿನ ಬಗ್ಗೆ ಯಾವುದು ಅಧಿಕೃತವೆಂದು ಹೇಳಲಾಗುವುದೋ ಆ ಬೈಬಲ್ಲಿನಲ್ಲಿಯೇ ರಾಶಿರಾಶಿ ಪುರಾಣಗಳ ಕಂತೆಗಳು ಬಿದ್ದವು.

ಕೊಟ್ಟೂರೇಶ್ವರ ಯಾರು?

ಕೊಟ್ಟೂರಿನಲ್ಲಿ ಕೊಟ್ಟೂರೇಶ್ವರ ಸ್ವಾಮಿ ದೇವಾಲಯವಿದೆ. ಕೊಟ್ರೇಶಿ, ಕೊಟ್ಟೂರೇಶ, ಕೊಟ್ಟೂರು ಸ್ವಾಮಿ- ಹೀಗೆ ಜನಸಾಮಾನ್ಯರು ಹೆಸರುಗಳನ್ನು ಇಟ್ಟುಕೊಳ್ಳುವುದು ಮಾತ್ರವಲ್ಲದೇ ಅಂಗಡಿ ಹೋಟೆಲ್ಲುಗಳೂ ಬರವಿಲ್ಲದಂತೆ ಕೊಟ್ಟೂರೇಶ್ವರನ ಹೆಸರನ್ನು ಧಾರಾಳವಾಗಿ ಹೊಂದಿವೆ. ಕೊಟ್ಟೂರೇಶ್ವರನನ್ನು ದೇವರೆಂದು ಆರಾಧಿಸುವ ಅನೇಕಾನೇಕ ಜನರನ್ನು ಆ ಸ್ವಾಮಿಯ ಹಿನ್ನೆಲೆ ಕೇಳಿದೆ. ನಾನು ಕೇಳಿದ ಯಾರೊಬ್ಬರಿಗೂ ಯಾವುದೊಂದು ಮಾಹಿತಿ ಇರಲಿಲ್ಲ. ಅವರೊಬ್ಬ ಶಿವಶರಣ ಎಂದು ಹೇಳುವಷ್ಟೇ ಹೊರತು ಬೇರೇನೂ ಗೊತ್ತಿಲ್ಲ. ಕೊಟ್ಟೂರಪ್ಪನೋ, ಕೊಟ್ಟೂರಯ್ಯನೋ ಯಾರೋ ಆಗಿರಬಹುದಾದ ಆ ಶಿವಶರಣನ ಜೀವನ, ಬೋಧನೆ, ಸಾಧನೆ ಏನೂ ತಿಳಿಯುವ ಆಸ್ತೆ ತೋರದೇ ಬರಿಯ ಕೊಟ್ಟೂರೇಶ್ವರನನ್ನಾಗಿಸಿ ಗುಡಿಯಲ್ಲಿ ದೇವರಾಗಿಸಿದ್ದಾರೆ. ಇದೇ ಈ ದೇಶದ ಸಮಸ್ಯೆ. ಯಾರು ತಮ್ಮ ಜೀವನ, ಸಾಧನೆ, ಬೋಧನೆಗಳ ಮೂಲಕ ಮಾರ್ಗದರ್ಶನ ಮಾಡಲೆತ್ನಿಸುತ್ತಾರೋ, ಅವರ ಆ ಅಗತ್ಯವಾದ ವಿಷಯವನ್ನು ಬಿಟ್ಟು ಐತಿಹ್ಯಗಳಿಗೆ ಮನಸೋತಿರುತ್ತಾರೆ. ಶ್ರದ್ಧಾನಂಬಿಕೆಗಳಿಂದ ನಡೆದುಕೊಳ್ಳುತ್ತಿ ರುತ್ತಾರೆ. ಈ ಐತಿಹ್ಯ, ದಂತಕಥೆಗಳಿಗಿಂತ ಮುಖ್ಯವೂ ಆದ, ಅಗತ್ಯವೂ ಆದ ಅವರ ಜೀವನೋದಾಹರಣೆಗಳನ್ನು ಸಂಪೂರ್ಣ ನಿರ್ಲಕ್ಷಿಸಿಬಿಟ್ಟಿರುತ್ತಾರೆ. ವಾಸ್ತವವಾಗಿ ಅವು ಐತಿಹ್ಯಗಳಿಗಿಂತ ಮುಖ್ಯವಾಗಿ ನಮ್ಮ ಬದುಕುಗಳಿಗೆ ಬೇಕಾಗಿರುತ್ತದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕುಗಳನ್ನು ಅಧ್ಯಯನ ಮಾಡುವುದಕ್ಕೆ ಪುರಾಣಗಳ ಒಗಟುಗಳನ್ನು ಬಿಡಿಸಬೇಕಾಗುತ್ತದೆ. ಮಹಾತ್ಮರ, ಸಂತರ, ಮಹಾಂತರ, ತತ್ವಜ್ಞಾನಿಗಳ ಜೀವನ ಮತ್ತು ದರ್ಶನಗಳನ್ನು ಅರಿಯಲು, ಸಮಾಜಕ್ಕೆ ಸಂದ ಅವರ ಕಾಣಿಕೆಗಳನ್ನು ಗ್ರಹಿಸಲು ಪವಾಡಗಳ ಹೊರೆಯನ್ನು ಇಳಿಸಬೇಕಾಗುತ್ತದೆ. ಎಷ್ಟೆಷ್ಟೋ ತತ್ವಜ್ಞಾನಿಗಳ ಅಮೂಲ್ಯವಾದ ಆಲೋಚನಾ ಕ್ರಮ, ಗ್ರಹಿಕೆಯ ರೀತಿಗಳು ನಮ್ಮ ಅರಿವಿಗೆ ಬಾರದೇಹೋಗುವ ಮುಖ್ಯ ಕಾರಣವೆಂದರೆ ಪುರಾಣ, ಪವಾಡಗಳಿಂದ ಅವರನ್ನು ವಿಜೃಂಭಿಸಿ ನೈಜತೆಯನ್ನು ಮರೆಮಾಚುವುದು. ನೇರ, ಸರಳ ಮತ್ತು ನಿಷ್ಠುರವಾಗಿರುವ ದಾರ್ಶನಿಕರು ಪೂಜೆಗೊಳಗಾಗುವಂತಹ ಬರಿಯ ವಿಗ್ರಹಗಳಾಗಿರುವುದು ಈ ದೇಶದ ಒಂದು ಸೈದ್ಧಾಂತಿಕ ದುರಂತ. ■

ಮೋದಿರಾಯನ ಭರ್ಜರಿ ನಾಟಕ ಮಂಡಳಿ

ಕಳೆದ ಸಂಚಿಕೆಯಲ್ಲಿ ಗೌರಿ ಮೇಡಮ್ ತಮ್ಮ ಸಂಪಾದಕೀಯದಲ್ಲಿ ಸುಷ್ಮಾ ಸ್ವರಾಜಳ ಅಕ್ಕನ ಮಗಳಂತಿರುವ ಸ್ಮೃತಿ ಇರಾನಿಯ ನಾಟಕೀಯ ಮಾತುಗಾರಿಕೆಯ ಬಗ್ಗೆ ಬರೆದಿದ್ದರು. ಅವರು ಅಂದಂತೆ ರೋಹಿತ್ ವೇಮುಲ ಯಾವ ರೀತಿಯಲ್ಲೂ 'ಕೂಸು' ಅನಿಸುವಂತಹ ಆಗಿದ್ದಿರಲಿಲ್ಲ. ಪ್ರಬುದ್ಧ ಯುವಕನಾಗಿದ್ದ ಆತ ವ್ಯವಸ್ಥೆಯ ಜಿಗುಟುತನಕ್ಕೆ ಬೇಸತ್ತು, ತಾನು ಬದುಕಿನ ಬಗ್ಗೆ ಇಟ್ಟುಕೊಂಡಿದ್ದಂತಹ ಕನಸುಗಳ ಸಾಕಾರಗೊಳ್ಳುವಿಕೆಗೆ ವ್ಯವಸ್ಥೆ ಸುಲಭದಲ್ಲಿ ಬಿಡದೆಂದು ಮನನೊಂದು, ಯಾವ ಉದ್ವೇಗಕ್ಕೂ ಒಳಗಾಗದೇ ಯಾರಿಗೂ ಕೇಡುಬಯಸದಂತಹ ಡೆತ್‌ನೋಟ್ ಬರೆದಿಟ್ಟು (ಇದೇ ಆತನ ಪ್ರಬುದ್ಧತೆಗೆ ಸಾಕ್ಷಿ) ಆತ್ಮಹತ್ಯೆ ಮಾಡಿಕೊಂಡಿದ್ದನು. ಕಳ್ಳಮನಸ್ಸುಗಳು ಹೆಚ್ಚುಹೆಚ್ಚು ನಾಟಕೀಯವಾಗಿ ವರ್ತಿಸುತ್ತವೆ ಎನ್ನುವುದಕ್ಕೆ ಮೊನ್ನಿನ ಸ್ಮೃತಿ ಇರಾನಿಯ ಸಂಸತ್ ಭಾಷಣವೇ ಸಾಕ್ಷಿ.

2004ರ ಕೊನೆಯಲ್ಲಿ ಮೋದಿ ಮಹಾರಾಯ ಗುಜರಾತನ್ನು 'ಇನ್ನಿಲ್ಲದಂತೆ' ಆಳುತ್ತಿದ್ದಾಗ ಮೋದಿಯನ್ನು ಇಳಿಸಲು ಆಮರಣಾಂತ 'ಬೂಖ್ ಹರತಾಳ್' ಮಾಡಿ ಸುದ್ದಿ ಮಾಡಿದ್ದ ಸ್ಮೃತಿ ಇರಾನಿ ಈಗ ಅದೇ ಮೋದಿಯನ್ನು ಮೆಚ್ಚಿಸಲು ಕ್ರಾಂತಿ (ವಾಂತಿ) ಕಾರಕ ಭಾಷಣ ಬಿಗಿದದ್ದು ಅಚ್ಚರಿಯ ವಿಚಾರವೇನಲ್ಲ, ಯಾಕೆಂದರೆ ಈ ಚಡ್ಡಿಗಳ ಬಂಡವಾಳ ಇಂತಹ ನಾಟಕಗಳೇ ತಾನೆ? ದೇಶಕ್ಕಾಗಿ ಎಂದೂ ಹೋರಾಡದ ಹಿನ್ನೆಲೆ ಇರದ ಇವರು ದೇಶಭಕ್ತಿಯ ಭರ್ಜರಿ ಭಾಷಣ ಕುಟ್ಟುತ್ತಾ ಜನರನ್ನು ವಂಚಿಸುತ್ತಿರುವುದೂ ಇದರ ಭಾಗವೇ ತಾನೇ?

ಜನರನ್ನು ಯಾಮಾರಿಸುವ ಸಲುವಾಗಿ ಎಂತಹ ಕೋಡಂಗಿ ಡ್ರೆಸ್ಸನ್ನೂ ಹಾಕಲು ತಯಾರಿರುವ ಮೋದಿ



ಹಾಗು ಆತನ ಪಟಾಲಮ್ ಅನೇಕ ಭಾರಿ ನಗೆಪಾಟಲಿಗೆ ಗುರಿಯಾದದ್ದೂ ಇದೆ. ರೋಹಿತ್ ಹಾಗು ಆತನ ಸ್ನೇಹಿತರ ಬಗ್ಗೆ ಕಿಂಚಿತ್ತೂ ಕರುಣೆ ತೋರದೇ ಈಗ ಕೂಸೆಂದು ಕಣ್ಣೀರಿಡುವ ಇರಾನಿಯಂತೆ ದೇಶದ ಬಡವರ ರೈತರ ಹಿತ ಕಾಪಾಡುವ ಬದಲು ಕಾರ್ಪೊರೇಟ್ ಗುಲಾಮನಂತೆ ವರ್ತಿಸುವ ಮೋದಿ ಯಾವಾಗಲೂ ತನ್ನನು ಕರೆದುಕೊಳ್ಳುವುದು ಮಾತ್ರ 'ಪ್ರಧಾನ ಸೇವಕ'ನೆಂದೇ. ಇದು ಆತನ ಅತ್ಯಂತ ಮಹಾನ್ ನಾಟಕಗಳಲ್ಲಿ ಒಂದೆಂದು ಜನರೇ ಅಲ್ಲಲ್ಲಿ ತಮ್ಮ ಓಟುಗಳ ಮೂಲಕ ನಾಟಕಕ್ಕೆ ತಕ್ಕ ಪ್ರತಿಕ್ರಿಯೆಯನ್ನು ನೀಡಿದ್ದುಂಟು.

ಐವತ್ತಾರು ಇಂಚು ಎದೆಯ ವೈರಿಗಳಿಗೆ ಸಿಂಹಸ್ವಪ್ನವಾಗಿರುವ ಧೀರ ಎಂದೇ ಬಿಂಬಿಸಿಕೊಂಡು ಯಾವ ಧೀರತನವನ್ನೂ ತೋರ್ಪಡಿಸಲಾಗದೇ ವೈರಿ ಪಾಕ್ ದಿನೇದಿನೇ ಗಡಿತಂಟೆ ಹೆಚ್ಚಿಸುತ್ತಾ ಮರ್ಯಾದೆ ಕಳೆಯುತ್ತಿದ್ದಾಗ ನೆಹರೂ, ಶಾಸ್ತ್ರಿಗಳ ಪೋಸ್ ಹಾಕಿ ಪಾಕಿಸ್ತಾನಕ್ಕೆ ಹೋಗಿ ಮೂತಿಗೆ ಇಕ್ಕಿಸಿಕೊಂಡು ಬಂದಿದ್ದ ಕರುಣಾಜನಕ ಕಥೆ ಒಂದೆಡೆಯಾದರೆ, ಸಂಬಂಧವೇ ಇಲ್ಲದಿದ್ದರೂ ವಿದೇಶಗಳಲ್ಲಿ ವಿನಾಕಾರಣ ದೇಶದ ರಾಜಕೀಯವನ್ನು ಎಳೆತಂದು ಹೋದೆಲ್ಲೆಲ್ಲಾ ವಿರೋಧ ಪಕ್ಷವನ್ನು ಟೀಕಿಸುತ್ತಾ ದೇಶದ ಮಾನಮರ್ಯಾದೆ ಇತರರ ಮುಂದೆ ಹರಾಜು ಹಾಕುತ್ತಿದ್ದ ಮೋದಿ ಮೊನ್ನೆ ಸಂಸತ್ತಿನಲ್ಲಿ ವಿರೋಧ ಪಕ್ಷದವರ ಪ್ರಶ್ನೆಗಳನ್ನು ಎದುರಿಸಲಾಗದೇ ವಿರೋಧ ಪಕ್ಷದ ಧುರೀಣರಾಗಿದ್ದ ರಾಜೀವ್, ಇಂದಿರಾರ ಮಾತುಗಳ ಸೆಂಟಿಮೆಂಟ್ ಬಾಣ ಬಿಟ್ಟು ನಮ್ಮನ್ನು ಗಲಿಬಿಲಿಮಾಡುವ ಪ್ರಶ್ನೆಗಳನ್ನು ಕೇಳದೇ ಸುಮ್ಮನೆ ಕೂತು ಕಾರ್ಯಕಲಾಪ ಸುಗಮವಾಗುವಂತೆ ಸಹಕರಿಸಿ ಎಂದು ಸಮಯಕ್ಕೆ ತಕ್ಕಂತೆ ರಾಗ ಬದಲಿಸಿ ಗೋಗರೆದಿದ್ದ.

ಈ 'ಪ್ರಧಾನ ಸೇವಕ'ನ ನಾಗಪುರ ಕೇಂದ್ರಿತ ನಾಟಕ ಮಂಡಳಿಯನ್ನು ರಂಗದಿಂದ ನೇಪಥ್ಯಕ್ಕೆ ಕಳುಹಿಸುವ ಮೂಲಕ ದೇಶವನ್ನು ಬಚಾವ್ ಮಾಡಬೇಕಿದೆ. ಕನ್ನಯ್ಯನಂತವರು ಮೊನ್ನೆ ಇವರ ವೇಷಭೂಷಣಗಳನ್ನೆಲ್ಲ ಕಳಚಿ ಬೆತ್ತಲು ಮಾಡಿದ್ದಾರೆ. ಇನ್ನುಳಿದಿರುವುದು ಜನರ ಪಾತ್ರವಷ್ಟೆ.


- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಸ್ಮೃತಿ ಇರಾನಿಯಿಂದಾಗಿ ಪುರಾಣದ ಒಗಟು ಬಹಿರಂಗಗೊಂಡಿದೆ

ದುರ್ಗಾದೇವಿ ಸೆಕ್ಸ್‌ವರ್ಕರ್ ಆಗಿದ್ದಳು ಹಾಗೂ ಮಹಿಷಾಸುರ ಪ್ರಜಾಪ್ರಿಯ ರಾಜನಾಗಿದ್ದ ಎಂಬ ಒಕ್ಕಣೆಯ ಕರಪಂಂತ್ರ ಜೆಎನ್‌ಯುನಲ್ಲಿ ವಿತರಿಸಲಾಗಿತ್ತು ಎಂದು ಆರೋಪಿಸುತ್ತಾ ಕೇಂದ್ರ ಸಚಿವೆ ನಟಿ-ಭಯಂಕರಿ ಸ್ಮೃತಿ ಇರಾನಿ ರಾಜ್ಯಸಭೆಯಲ್ಲಿ ಅದನ್ನು ಓದಿ ತುಂಬಾ ಟೀಕೆಗೊಳಗಾಗಿದ್ದರೂ ಇದರಿಂದ ಒಂದು ಒಳ್ಳೆಯ ಪರಿಣಾಮವುಂಟಾಗಿದೆ. ಕೋಟ್ಯಾಂತರ ಬುಡಕಟ್ಟು ಜನಾಂಗದವರು ಮಹಿಷಾಸುರನಂತಹ ಅಸುರರನ್ನು ಪೂಜಿಸುತ್ತಾರೆ ಎಂಬುದು ಭಾರತದ ಕೆಲ ಪ್ರದೇಶಗಳ ಜನರಿಗೆ ಮೊದಲು ಗೊತ್ತೇ ಇರಲಿಲ್ಲ. ಆದರೆ ಸ್ಮೃತಿ ಇರಾನಿಯ ಜೆಎನ್‌ಯು ಪ್ರಹಸನದ ನಂತರ ಈ ರಾಕ್ಷಸ-ಅಸುರರ ಬಗ್ಗೆ ಇಂಗ್ಲಿಷ್ ಮತ್ತು ಹಿಂದಿ ಮಾಧ್ಯಮಗಳಲ್ಲಿ ಚರ್ಚೆ ಶುರುವಾಯಿತು. ಪರಿಣಾಮವಾಗಿ ಸಮಸ್ತ ಭಾರತೀಯರಿಗೂ ಮಹಿಷಾಸುರ ಒಬ್ಬ ಪ್ರಜಾಪ್ರಿಯ ರಾಜನಾಗಿದ್ದ ಹಾಗೂ ಅವನನ್ನು ದುರ್ಗಾ ಅಥವಾ ಚಾಮುಂಡಿ ಎಂಬ ಹೆಣ್ಣಿನಿಂದ ಹನಿಟ್ರ್ಯಾಪ್ ಮಾಡಿಸಿ ಆರ್ಯರು ಮೋಸದಿಂದ ಕೊಂದರು ಎಂಬ ಪುರಾಣದ ಒಗಟು ಬಯಲಾಗಿದೆ. ನರಕಾಸುರನನ್ನೂ ಸತ್ಯಭಾಮೆಯಿಂದ ಹನಿಟ್ರ್ಯಾಪ್ ಮಾಡಿಸಿಯೇ ಶ್ರೀಕೃಷ್ಣ ಕೊಂದಿದ್ದು. ಹಾಗೆಯೇ ಬಲೀಂದ್ರ ಎಂಬ ಪ್ರಜಾಪ್ರೇಮಿ ಅಸುರನನ್ನು ವೈದಿಕರು ಮೋಸದಿಂದ ಕೊಂದಿದ್ದು ಎಂಬ ಹಿಂದೂ ಪುರಾಣ ಕತೆಯೊಳಗಿನ ಕೊಳಕು ಗುಟ್ಟು ಈಗ ಕ್ರೈಸ್ತ ಮುಸ್ಲಿಂ ಪರಧರ್ಮದವರ ಎದುರೂ ಬಟಾಬಯಲಾಗುತ್ತಿದೆ.

ಮೈಸೂರಿನ ಅಧಿದೇವತೆ ಚಾಮುಂಡಿ ಮಹಿಷಾಸುರನ ಪ್ರೇಯಸಿಯಾಗಿದ್ದಳು ಹಾಗೂ ಮಹಿಷಾಸುರ ಮತ್ತು ಚಾಮುಂಡಿ ಇಬ್ಬರನ್ನೂ ವೈದಿಕರು ಮೋಸದಿಂದ ಕೊಂದರು ಎಂಬ ಪ್ರಕಾಶ್ ರಾಜ್ ಮೇಹು ಬರೆದಿರುವ ಮೈಸೂರಿನ ಜಾನಪದ ಕಥೆಯನ್ನು ತಮ್ಮ ಈ ವಾರದ ಸಂಚಿಕೆಯಲ್ಲಿ ಓದಿರುವ ಮುಂಬೈ ಹಾಗೂ ಗುಜರಾತಿನಲ್ಲಿರುವ ನನ್ನ ಮಿತ್ರರು ಈ ಬಗ್ಗೆ ನನಗೆ ಮೈಸೂರಿಗೆ ಫೋನ್ ಮಾಡಿ "ನೀನಿರುವ ಊರಿನ ಕಥೆ ನಿಜವೇ?" ಎಂದು ಕೇಳಿದರು. ಒಟ್ಟಾರೆ ಇರಾನಿಯ ನಕಾರಾತ್ಮಕ ನಡೆ ಕೊನೆಗೆ ಧನಾತ್ಮಕ ಪರಿಣಾಮವನ್ನೇ ಬೀರಿರುವುದು ಸಂತಸದ ಸಂಗತಿ.

ಇದೇರೀತಿ ಕರಾವಳಿಯಲ್ಲಿ ದುರ್ಗೆಯ ಇನ್ನೊಂದು ಸ್ಥಳೀಯ ಜನಪದ ಕತೆಯಿದೆ. ದುಷ್ಟ ಆರ್ಯರು ಪರಶುರಾಮನ ನೇತೃತ್ವದಲ್ಲಿ ಬಂದು ಇಲ್ಲಿಯ ಅರಣ್ಯ ನಾಶ ಮಾಡಿ ಜಮೀನು ಅಕ್ರಮಿಸಿಕೊಂಡಾಗ ಇಲ್ಲಿಯ ಮೂಲನಿವಾಸಿಗಳು ಪ್ರತಿರೋಧ ಒಡ್ಡಿ ಪರಶುರಾಮನ ಆರ್ಯ ಪಡೆಯನ್ನು ಹೊಡೆದೋಡಿಸಿದರು. ಆದರೆ ಈ ಪ್ರಕೃತಿ ಆರಾಧಕ ಮೂಲನಿವಾಸಿಗಳು ಮಾತೃ ಸಂಸ್ಕೃತಿಯವರಾಗಿದ್ದು ಮಹಿಳೆಯರನ್ನು ಹಾಗೂ ಪ್ರಾಣಿಗಳನ್ನು ತುಂಬಾ ಗೌರವಿಸುತ್ತಿದ್ದರು. ಅದನ್ನು ಕಂಡ ಆರ್ಯರು ಅದರ ದುರ್ಲಾಭ ಪಡೆಯಲು ಕುತಂತ್ರ ಮಾಡಿ ತಮ್ಮ ಬಿಳಿ ಚರ್ಮದ ಹೆಂಗಸರನ್ನು ಹಾಗೂ ಗೋವು ಮತ್ತು ಎಮ್ಮೆಗಳನ್ನು ಮುಂದಿಟ್ಟುಕೊಂಡು ಬಂದು ಇಲ್ಲಿಯ ಮೂಲನಿವಾಸಿಗಳ ಮೇಲೆ ಮತ್ತೆ ದಾಳಿ ಮಾಡಿದರು. ಕೋಣದ (ಮಹಿಷ) ಲಾಂಛನವಿದ್ದ ಮೂಲನಿವಾಸಿಗಳು ವೈರಿ ಆರ್ಯ ಪಡೆಯ ಮುಂಭಾಗದಲ್ಲಿ ಮಹಿಳೆಯರು ಮತ್ತು ಹಸು ಎಮ್ಮೆಗಳು ಇದ್ದಿದ್ದನ್ನು ಕಂಡು ಆಯುಧ ಎತ್ತಲಾರದೇ ಗೌರವಸೂಚಕವಾಗಿ ಹಿಮ್ಮೆಟ್ಟಿದರು. ಹಾಗಾಗಿ ಸುಲಭವಾಗಿ ಆರ್ಯರು ಗೆದ್ದು ತಮ್ಮ ಗೆಲುವಿಗೆ ಸಾಧನವಾಗಿದ್ದ ಮಹಿಳೆಯರ ಸಂಕೇತವಾಗಿ ದುರ್ಗೆಯನ್ನು ಹಾಗೂ ಪ್ರಾಣಿಗಳ ಸಂಕೇತವಾಗಿ ಹಸುವನ್ನು ಪೂಜಿಸಲು ಶುರುಮಾಡಿದರು. ಆರ್ಯರಿಗೆ ಹಾಗೂ ಪರಶುರಾಮನಿಗೆ



ನಿಜವಾಗಿ ಗೋವಿನ ಬಗ್ಗೆ ಅಥವಾ ತಮ್ಮದೇ ಮಹಿಳೆ... ಬಗ್ಗೆ ಸ್ವಲ್ಪವಾದರೂ ಗೌರವ ಅನುಕಂಪವಿದ್ದಿದ್ದರೆ ಅವರ... ಯುದ್ಧಭೂಮಿಗೆ ತಂದು ಅಪಾಯಕ್ಕೆ ಒಡ್ಡುತ್ತಲೇ ಇರಲ... ಇಂತಹ ಪುರುಷ ಪ್ರಧಾನ ಹೃದಯಹೀನ ಕಪಟಿಗ... ಆರ್ಯರು.

- ಜೆ. ರವಿಕಿರಣ, ಮೈಸೂ...

ಬುಡಕಟ್ಟು ಜನರು ಮಹಿಷಾಸುರರನ... ಪೂಜಿಸುತ್ತಾರೆ ಎಂದೂ ಗೊತ್ತಿಲ್ಲದ ನ...

ಈ ವಾರ ಗೌರಿ ಅವರು ತಮ್ಮ ಸಂಪಾದಕೀಯದ... ಬರೆದಿರುವಂತೆ ಸ್ಮೃತಿ ಇರಾನಿ ಮಹಾ ಸುಳ್ಳುಗಾತಿ ಹಾ...



ಮಾನವೀಯತೆ ಇಲ್ಲದ ಅಭಿನಯ ವಿಶಾರದೆ ಎಂಬುದು... ನಿಜ. "ಯಾರಿಗಾದರೂ ನನ್ನ ಜಾತಿ ಗೊತ್ತಿದ್ದರೆ ಹೇಳಿ" ಎಂದು ರಾಜ್ಯ ಸಭೆಯಲ್ಲಿ ಸವಾಲ್ ಹಾಕಿರುವ ಇವಳ... 2014 ರ ಲೋಕಸಭಾ ಚುನಾವಣೆಯ ವೇಳೆ ತ... ಚುನಾವಣಾ ಅರ್ಜಿಯಲ್ಲಿ ತನ್ನ ಗಂಡ ಜುಬಿನ್ ಇರಾ... ಪಾರ್ಸಿ-ಜೊರಾಷ್ಟ್ರಿಯನ್ ಧರ್ಮದವ ಎಂದೂ, ತಾನ... ಪಂಜಾಬಿ ಹಿಂದೂ ಖತ್ರಿ (ಮಲ್ಹೋತ್ರ) ಜಾತಿಯವಳ... ಎಂದೂ ತಾನೇ ಬರೆದಿದ್ದು ಮರೆತಿರುವುದು ಆಶ್ಚರ್ಯ...

1999-2000ರಲ್ಲಿ ಬಂದ ಇವಳ ಮೊಟ್ಟಮೊದ...

ಹಿಂದೂತ್ವ ಪಡ್ಡೆಗಳು ಮಿಲಿಟರಿಯ ಅಸಲಿ ದೇಶಭಕ್ತರ ಕಾಲಿನ ಧೂಳಿಗೂ ಸಮವಲ್ಲ

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ದಿನೇಶ್ ಅಮೀನ್ ಮಟ್ಟು ಅವರು ಕೇವಲ ಬಡವರು ಮತ್ತು ಕೆಳ ಜಾತಿಯವರು ಮಾತ್ರ ಮಿಲಿಟರಿ ಸೇವೆಗೆ ಸೇರುವುದು, ಧನಿಕರು ಮತ್ತು ಮೇಲ್ಜಾತಿಯವರು ಕೇವಲ ಬಾಯಿಮಾತಿನಲ್ಲಿ ಮಾತ್ರ ದೇಶಪ್ರೇಮ ತೋರಿಸುತ್ತಾರೆ, ಆದರೆ ನಿಜವಾಗಿ ಸೇನೆ ಸೇರುವ ವಿಷಯ ಬಂದಾಗ ಮೇಲ್ಜಾತಿ ಯುವಕರು ಜಾರಿಕೊಳ್ಳುತ್ತಾರೆ ಎಂದು ಹೇಳಿದ್ದು ಅಕ್ಷರಶಃ ನಿಜ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂದಂತೆ ದಿನೇಶ್ ಅಮೀನರ ಮಾತು ಸಂಘ ಪರಿವಾರದವರ ಹುಚ್ಚು ಕೆರಳಿಸಿರುವುದು ಸ್ವಾಭಾವಿಕ. ಕಾರಣ ಭಾರತದೆಲ್ಲೆಡೆ ಸಂಘ ಪರಿವಾರದ ಮೆದುಳಾಗಿರುವ ಬ್ರಾಹ್ಮಣ ವೈಶ್ಯ (ಬನಿಯಾ) ಮತ್ತು ಜೈನರು ಮಿಲಿಟರಿ ಸೇರುವುದು ಅತೀ ವಿರಳ.

ಕಳೆದ ತಿಂಗಳು ಸಿಯಾಚಿನ್‌ನಲ್ಲಿ ಸತ್ತ ಹತ್ತು ಜನ ಸೈನಿಕರಲ್ಲಿ ಒಬ್ಬನೇ ಒಬ್ಬ ಮೇಲ್ಜಾತಿಯವನಿರಲಿಲ್ಲ, ಆದರೆ ಅವರಲ್ಲಿ ಕೇರಳದ ಒಬ್ಬ ಕ್ರೈಸ್ತ ಮತ್ತು ಆಂಧ್ರದ ಒಬ್ಬ ಮುಸ್ಲಿಂ ಇದ್ದಿದ್ದು ನಿಜ.

ನಮ್ಮ ಕೊಡಗಿನಲ್ಲಿ ಪ್ರತಿ ಕುಟುಂಬದಲ್ಲೂ ಒಬ್ಬ ಯುವಕ ಸೇನೆಯಲ್ಲಿ ಇದ್ದಾನೆ. ಆದರೆ ನಮ್ಮ ನೆರೆಯ ಕರಾವಳಿ ಜಿಲ್ಲೆಯ ಯುವಕರು ಸೇನೆ ಸೇರುವುದೇ ಇಲ್ಲ, ಯಾಕೆಂದರೆ ಅವರಿಗೆ ಬಜರಂಗ ದಳ, ಹಿಂದೂ ಯುವಸೇನೆ, ರಾಮಸೇನೆ ಸೇರಿ ಅನೈತಿಕ ಪೊಲೀಸುಗಿರಿ ಮಾಡಿ ಹುಡುಗಿಯರನ್ನು ಬಡಿಯುವುದರಲ್ಲಿಯೇ ಅವರ ಶೌರ್ಯವೆಲ್ಲಾ ಖರ್ಚಾಗಿರುತ್ತದೆ. ಮಂಗಳೂರಿನ ಮಂಗಳಾ ಸ್ಟೇಡಿಯಮ್ಮಿನಲ್ಲಿ ಆರು ತಿಂಗಳಿಗೊಮ್ಮೆ ನಡೆಯುವ ಮಿಲಿಟರಿ ರಿಕ್ರೂಟ್ಮೆಂಟ್ ರ್‍ಯಾಲಿಯಲ್ಲಿ ಕೇವಲ ಹಾಸನ,



ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಬಡ ಯುವಕರು ಮಾತ್ರ ಭಾಗವಹಿಸುತ್ತಾರೆ. ಅಲ್ಲಿ ಸ್ಥಳೀಯ ತುಳು-ಕೊಂಕಣಿ ಯುವಕರು ನಾಪತ್ತೆ. ಆದರೂ ಈಗ ದೇಶಪ್ರೇಮದ ಬಗ್ಗೆ ನಕಲಿ ಕಾಳಜಿ ವ್ಯಕ್ತ ಪಡಿಸುತ್ತಿರುವವರಲ್ಲಿ ಈ ಕರಾವಳಿಯ ತುಳುವ-ಕೊಂಕಣಿಗರೇ ಅಧಿಕ.

ಅದೂ ಅಭಿನಯಶೂರ ಮೇಲ್ಜಾತಿಯ ಬ್ರಾಹ್ಮಣ ಬಂಟ ಜೈನ ಕೊಂಕಣಿಗಳೇ ಅಧಿಕ ದೇಶಪ್ರೇಮದ ನಾಟಕ ಆಡುತ್ತಾರೆ, ಆದರೆ ತಮ್ಮ ಮಕ್ಕಳನ್ನು ಸೇನೆಗೆ ಸೇರಿಸುವ ವಿಷಯ ಬಂದಾಗ ಅವರು ಅಲ್ಲಿಂದ ಮಾಯ! ಕರಾವಳಿಯ ತುಳುವರ ಮಕ್ಕಳು ಮುಂಬೈ ಅಂಡರ್‌ವರ್ಲ್ಡ್ ಸೇರುತ್ತಾರೆ ಆದರೆ ಮಿಲಿಟರಿ ಸೇರುವುದಿಲ್ಲ. ಮಂಗಳೂರಿನವರು ಉತ್ತರ ಕರ್ನಾಟಕದವರನ್ನು ಹೆಜ್ಜೆಹೆಜ್ಜೆಗೆ ಅವಮಾನಿಸುತ್ತಾರೆ. "ಆಯೇ ಘಟ್ಟದಾಯೆ, ಬಿಜಾಪುರದ ಗೌಡೇ" ಎಂದು ತುಳುವಿನಲ್ಲಿ ಬಸ್ ಕಂಡಕ್ಟರ್, ರಿಕ್ಷಾದವ, ಹೊಟೇಲ್ ಮಾಣಿಯೂ ಉತ್ತರ ಕರ್ನಾಟಕದವರನ್ನು ಅವಮಾನಿಸುತ್ತಾ ಇರುತ್ತಾರೆ. ಆದರೆ ಮಿಲಿಟರಿ ಸೇರುವವರಲ್ಲಿ ಉತ್ತರ ಕರ್ನಾಟಕದ ವೀರರೇ ಹೆಚ್ಚು, ಇವರಿಗೆ ಹೋಲಿಸಿದರೆ ಸೋಮಾರಿ ಕರಾವಳಿಯ ತುಳು-ಕೊಂಕಣಿ ಯುವಕರು ಬರೀ ಪುಕ್ಕಲರು.

ಭಾರತದ 13 ಲಕ್ಷ ಯೋಧರಿರುವ ಆರ್ಮಿ-ನೇವಿ-ಏರ್‌ಫೋರ್ಸ್ ಸೇನೆಗಳಲ್ಲಿ ಜಾತಿವಾರು ವಿಂಗಡಣೆ ಮಾಡಿದರೆ ಒಬ್ಬನೇ ಒಬ್ಬ ಜೈನ ಸಿಗುವುದಿಲ್ಲ. ಜತೆಗೆ ಬ್ರಾಹ್ಮಣ ಮತ್ತು ವೈಶ್ಯ-ಬನಿಯಾಗಳೂ ಸೇನೆಯಲ್ಲಿ ತುಂಬಾ ವಿರಳ. ಇವರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಮುಸ್ಲಿಂ ಮತ್ತು ಕ್ರೈಸ್ತರು ಭಾರತೀಯ ಸೇನೆಯಲ್ಲಿ ಇದ್ದಾರೆ! ದಲಿತರೂ ಈಗ ದೊಡ್ಡ ಸಂಖ್ಯೆಯಲ್ಲಿ ಸೇನೆ ಸೇರುತ್ತಾರೆ. ಇದರ ಅರ್ಥ ಮೇಲ್ಜಾತಿ ಹಿಂದೂಗಳ ದೇಶಪ್ರೇಮ ಕೇವಲ ಬಾಯಿಮಾತಿಗಷ್ಟೇ ಸೀಮಿತ. ಸೇನೆಯಲ್ಲಿ ಈಗ ತುಂಬಾ ದೊಡ್ಡ ಸಂಖ್ಯೆಯಲ್ಲಿ ತಾಂತ್ರಿಕ ಪರಿಣಿತರು ಇಂಜಿನಿಯರರೂ ಡಾಕ್ಟರರೂ ಬೇಕಾಗುತ್ತಾರೆ. ಅಪಾಯವಿಲ್ಲದ ಈ ಒಳ್ಳೆಯ ಸಂಬಳದ ಕೆಲಸಗಳಿಗೂ ಮೇಲ್ಜಾತಿಯವರು ಸೇರಲು ಹೆದರುತ್ತಾರೆ. ಕೇವಲ ಕ್ರಿಕೆಟ್ ಆಟದ ಸಮಯದಲ್ಲಿ ಭಾರತದ ಧ್ವಜ ಹಿಡಿದುಕೊಂಡು ಹುಚ್ಚುಚ್ಚಾಗಿ ಕುಣಿಯುವುದಕ್ಕೆ ಮಾತ್ರ ಇವರ ದೇಶಪ್ರೇಮ ಸೀಮಿತ. ಮ್ಯಾ... ಮುಗಿದಮೇಲೆ ಈ ಧ್ವಜ ಜನರ ಕಾಲಡಿ ಬಿದ್ದಿರುತ್ತ...

ನಮ್ಮ ಯೋಧರನ್ನು ರಾಜ್ಯವಾರು ವಿಂಗಡಣೆ ಮಾ... ನೋಡಿದರೆ ಸೇನೆಯಲ್ಲಿ ಅತೀ ಕಡಿಮೆ ಸಂಖ್ಯೆಯಲ್ಲಿರುವವ... ಪುಕ್ಕಲು ಗುಜರಾತಿಗಳು ಎಂಬುದು ಗೊತ್ತಾಗುತ್ತದೆ. ಕೇವ... ಹಣ ಮಾಡುವುದರಲ್ಲಿ ಮಾತ್ರ ಗುಜರಾತಿಗಳು ನಿಸ್ಸೀಮರು... ಆದರೂ ಹೋದಲ್ಲೆಲ್ಲಾ ಗುಜರಾತಿ ಮೋದಿಯ ದೇಶಭಕ್ತಿಯ... ಪ್ರಚಂಡ ಅಭಿನಯ ನಡೆಯುತ್ತಲೇ ಇರುತ್ತದೆ. ಎಷ್ಟಾದರೂ... ಈ ನರೇಂದ್ರ ಮೋದಿ ಗುಜರಾತಿ ರಂಗಭೂಮಿ... ಹಿನ್ನೆಲೆಯಿಂದ ಬಂದವರು ತಾನೇ.

ಉತ್ತರ ಭಾರತದಲ್ಲಿ ಸೇನೆ ಸೇರುವ ಲಿಖಿತ ಪರೀ... ಇರುವುದು ಹಿಂದಿಯಲ್ಲಿ ಅಂದರೆ ಅವರ ಮಾತೃಭಾಷೆಯಲ್ಲಿ... ಆದರೆ ಕರ್ನಾಟಕದಲ್ಲಿ ಸೇನೆಯ ಪರೀಕ್ಷೆ ಕನ್ನಡದಲ್ಲಿ ಇಲ್ಲ... ಇಲ್ಲಿಯ ಕನ್ನಡ ಮಾಧ್ಯಮದ ಹಳ್ಳಿಯ ಹುಡುಗರು... ಇಂಗ್ಲಿಷಿನಲ್ಲಿ ಅಥವಾ ಹಿಂದಿಯಲ್ಲಿಯೇ ಪರೀ... ಬರೆಯುವುದು ಅನಿವಾರ್ಯ. ಅದರಿಂದಾಗಿ ಉತ್ತ... ಕರ್ನಾಟಕ ಮತ್ತು ಹಳೆ ಮೈಸೂರು ಭಾಗದ ಹಳ್ಳಿಯ... ಯುವಕರಿಗೆ ಸೇನೆ ಸೇರುವುದು ಕಷ್ಟವಾಗುತ್ತಿದೆ. ಆದರೂ... ಸಿಯಾಚಿನ್‌ನಲ್ಲಿ ವೀರಮರಣ ಅಪ್ಪಿದ ವೀರಯೋಧ... ಹನುಮಂತಪ್ಪ, ನಾಗೇಶ್, ಮಹೇಶ್ ಮತ್ತು ಕಾಶ್ಮೀರದ... ಉಗ್ರರೊಂದಿಗೆ ಹೋರಾಡುತ್ತಾ ಹುತಾತ್ಮರಾದ... ವಿಜಯಪುರದ ಸಹದೇವ್ ಮೋರೆ ಇವರು ಸೇನೆ ಸೇರುವ... ಸಫಲರಾಗಿದ್ದು ಅವರಲ್ಲಿ ಇದ್ದ ಅಸಾಧಾರಣ... ಪ್ರತಿಭೆಯಿಂದಾಗಿ. ನಕಲಿ ದೇಶಭಕ್ತಿಯ ಹಿಂದೂತ್ವ ಪಡ್ಡೆಗಳು... ಈ ನಮ್ಮ ಮಿಲಿಟರಿಯ ಅಸಲಿ ದೇಶಭಕ್ತ ಶಹೀದರ... ಕಾಲಿನ ಧೂಳಿಗೂ ಸಮವಲ್ಲ.

-ವೀರಪ್ಪ ಡಿ.ಎನ್. ಮಡಿಕೇ...

ಂದಿ ಟಿವಿ ಸೀರಿಯಲ್ 'ಆತಿಶ್'ನಲ್ಲಿ ಇವಳ ಹೆಸರು ೃತಿ ಮಲ್ಹೋತ್ರ ಎಂದು ಟೈಟಲ್‌ನಲ್ಲೇ ಇರುತ್ತಿತ್ತು. ುಬಿನ್ ಇರಾನಿ ತನ್ನ ಮೊದಲ ಪತ್ನಿ ಬದುಕಿರುವಾಗಲೇ ೃತಿಯನ್ನು ಎರಡನೇ ಪತ್ನಿಯಾಗಿ ಸ್ವೀಕರಿಸಿದ್ದು ಅನಂತರ.

ಹೈದರಾಬಾದಿನ ರೋಹಿತ್ ವೇಮುಲಾ ದಲಿತನಾಗಿರಲಿಲ್ಲ, ಅವನು ವಡ್ಡರ್ ಜಾತಿಯವನಾಗಿದ್ದ ಎಂದು ಹಲವು ಬಾರಿ ರಾಜ್ಯ ಸಭೆಯಲ್ಲಿ ಸುಳ್ಳು ಹೇಳಿರುವ ೃತಿ ಇರಾನಿ ತನ್ನಂತೆ ಅಂತರ್ಜಾತಿ ವಿವಾಹವಾಗಿರುವ ೋಹಿತ್ ವೇಮೂಲಾನ ತಾಯಿ ರಾಧಿಕಾರ ವೈವಾಹಿಕ ೀತಿಯಲ್ಲಿ ಸಾಕಷ್ಟು ಸಾಮ್ಯತೆಗಳಿರುವುದನ್ನು ಗಮನಿಸಬೇಕು. ೋಹಿತನ ತಾಯಿ ಮಾಲಾ ಎಂಬ ದಲಿತ ಜಾತಿಯವರಾಗಿದ್ದು ಅವರ ಗಂಡ ಹಿಂದುಳಿದ ವರ್ಗದ ವಡ್ಡರ್ ಜಾತಿಯವನು. ರೋಹಿತನ ತಂದೆಯ ಕುಟುಂಬದವರು ಮತ್ತು ವಡ್ಡರ್ ಜಾತಿಯವರು ರೋಹಿತನ ತಾಯಿ ಮತ್ತು ಅವಳ ಮಕ್ಕಳನ್ನು ವಡ್ಡರ್ ಜಾತಿಯವರೆಂದು ಪರಿಗಣಿಸಲು ನಿರಾಕರಿಸಿದ್ದರಿಂದ ಸ್ವಾಭಾವಿಕವಾಗಿ ರೋಹಿತನ ತಾಯಿ ದಲಿತ ಮಾಲಾ ಜಾತಿಯಾಗಿಯೇ ಮುಂದುವರಿದರು. ಹಾಗಾಗಿ ಅವರಿಗೆ ಹುಟ್ಟಿದ ರೋಹಿತನನ್ನು ಅವರೇ ಬೆಳೆಸಿರುವುದರಿಂದ ರೋಹಿತನೂ ದಲಿತನೇ ಆಗುತ್ತಾನೆ.

ಅಂತೆಯೇ ಸ್ಮೃತಿ ಇರಾನಿ ಪಾರ್ಸಿ ಧರ್ಮದವನನ್ನು ಮಾದುವೆಯಾಗಿದ್ದರೂ ಪಾರ್ಸಿ ಧರ್ಮದ ಕಟ್ಟಳೆಯಂತೆ ಅವಳಿಗೆ ಪಾರ್ಸಿಗಳ ಅಗ್ನಿ ದೇವಾಲಯದ ಒಳಗೆ ಹೋಗಲು ಅನುಮತಿಯಿಲ್ಲ. ಪಾರ್ಸಿಗಳ ಅಗ್ನಿ ದೇವಾಲಯದ ಒಳಗೆ ಕೇವಲ ಪಾರ್ಸಿ ತಂದೆತಾಯಿಗಳಿಗೆ ಹುಟ್ಟಿದವರು ಮಾತ್ರ ಹೋಗಬಹುದು. ದಂಪತಿಗಳಲ್ಲಿ ಗಂಡ ಅಥವಾ ಹೆಂಡತಿ ಇಬ್ಬರಲ್ಲಿ ಯಾರೇ ಒಬ್ಬರು ಬೇರೆ ಧರ್ಮದವರಾಗಿದ್ದರೆ ಅವರಿಗೆ ಹುಟ್ಟುವ ಮಕ್ಕಳೂ ಅಗ್ನಿ ದೇವಾಲಯದ ಒಳಗೆ ಹೋಗುವಂತಿಲ್ಲ. ನಾನು ಮುಂಬೈಯಲ್ಲಿ ಇರುವಾಗ ನನ್ನ ಒಬ್ಬ ಪಾರ್ಸಿ ಸಹೋದ್ಯೋಗಿ ಮರಾಠಿ ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗಿದ್ದನು. ಆದರೂ ಅವನ ಹೆಂಡತಿಗೆ ಹಾಗೂ ಮಕ್ಕಳಿಗೆ ಅಗ್ನಿ ದೇವಾಲಯದೊಳಗೆ ಹೋಗಲು ಅನುಮತಿಯಿರಲಿಲ್ಲ. ಒಮ್ಮೆ ನಾನು ಕುತೂಹಲದಿಂದ ಪಾರ್ಸಿಗಳ ಅಗ್ನಿ ದೇವಾಲಯವೆಂದರೆ ಒಳಗೆ ಹೇಗಿರುತ್ತದೆ ಎಂಬುದನ್ನು ನೋಡಲು ನನ್ನ ಇನ್ನೊಬ್ಬ ಪಾರ್ಸಿ ಮಿತ್ರನೊಟ್ಟಿಗೆ ಅಗ್ನಿ ದೇವಲದ ಒಳಗೆಹೋಗಲು ನಾನು ಪ್ರಯತ್ನಿಸಿದಾಗ ಅಲ್ಲಿಯ ದಸ್ತೂರ್ (ಪುರೋಹಿತ) ನನ್ನನ್ನು ಅನ್ಯ ಧರ್ಮದವನೆಂದು ಒಳಗೆ ಬಿಡಲಿಲ್ಲ. ಮುಂಬೈಯಲ್ಲಿ ಅನೇಕ ಪಾರ್ಸಿ ಗಂಡಸರು ಬೇರೆ ಧರ್ಮ ದವರನ್ನು ಮದುವೆಯಾಗಿದ್ದಾರೆ, ಆದರೆ ಅವರ ಮಕ್ಕಳಿಗೆ ತಾಯಿಯ ಧರ್ಮವನ್ನೇ ಕೊಡಲಾಗಿದೆಯೇ ಹೊರತು ಅವರನ್ನು ಪಾರ್ಸಿ-ಜೊರಾಷ್ಟ್ರಿಯನ್ ಧರ್ಮದವರೆಂದು ಪರಿಗಣಿಸುವುದಿಲ್ಲ. 'ಬಾಂಬೆ ಡಾಯಿಂಗ್'ನಂತಹ ದೊಡ್ಡ ಕಂಪನಿಯ ಮಾಲಿಕ ನುಸ್ಲಿ ವಾಡಿಯಾರ ತಂದೆ ಪಾರ್ಸಿ ಯಾದರೂ ತಾಯಿ ಶಿಯಾ ಮುಸ್ಲಿಂ ಆಗಿದ್ದು ಪಾಕಿಸ್ತಾನದ ಜನಕ ಮೊಹಮ್ಮದಾಲಿ ಜಿನ್ನಾರ ಸ್ವಂತ ಮಗಳಾಗಿದ್ದರೂ ಪತ್ನಿಗೂ ನುಸ್ಲಿ ವಾಡಿಯಾಗೆ ಅಗ್ನಿ ದೇವಲದೊಳಗೆ ಪ್ರವೇಶವಿಲ್ಲವಂತೆ. ಇಂದಿರಾಗಾಂಧಿ ಯವರ ಗಂಡ ಪಾರ್ಸಿಯಾಗಿದ್ದು ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ದೇಶದ ಪ್ರಧಾನಿಗಳಾಗಿದ್ದರೂ ಅವರಿಗೆ ಯಾವುದೇ ಅಗ್ನಿ ದೇವಾಲಯದೊಳಗೆ ಪ್ರವೇಶ ಕೊಡಲಿಲ್ಲ. ಹೀಗೆಯೇ ಸ್ಮೃತಿ ಇರಾನಿಯ ಮಕ್ಕಳೂ ಪಾರ್ಸಿ ಆಗಿರದೇ ಹಿಂದೂ ಕ್ಷತ್ರಿ ಜಾತಿಯವರಾಗುವುದು ಅನಿವಾರ್ಯ. ಇದೇ ನಿಯಮ ರೋಹಿತ್ ವೇಮುಲ ಮತ್ತು ಆತನ ತಾಯಿಗೂ ಅನ್ವಯ. ಆದರೆ ರೋಹಿತನ ತಾಯಿ ದಲಿತ ಜಾತಿಯಲ್ಲಿಯೇ ಮುಂದುವರಿದಿದ್ದುದರಿಂದ ಅವರ ಮಗನೂ ದಲಿತನೇ ಆಗಿರುವನು ಎಂಬುದು ನಿರ್ವಿವಾದ.

ಸ್ಮೃತಿ ಇರಾನಿ ಇಡೀ ದೇಶದ ಮಾನವ ಸಂಪನ್ಮೂಲ ಮಂತ್ರಿಯಾಗಿದ್ದರೂ ಅವಳಿಗೆ ನಮ್ಮ ದೇಶದ ಪ್ರಮುಖ ಬುಡಕಟ್ಟು ಜನಾಂಗಗಳ ಸಂಸ್ಕೃತಿ ಮತ್ತು ಧಾರ್ಮಿಕ ನಂಬಿಕೆಯ ಸ್ವಲ್ಪವೂ ಗೊತ್ತಿಲ್ಲವೆಂದರೆ ಆಶ್ಚರ್ಯ. ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ತಮಿಳುನಾಡು ಮತ್ತು ನಮ್ಮ ಮೈಸೂರಿನ ಬುಡಕಟ್ಟು ಜನಾಂಗದವರು ಮಹಿಷಾಸುರರನ್ನು ದೇವರೆಂದು ಪೂಜಿಸುತ್ತಾರೆ ಎಂಬುದೂ ಈ ಟಿವಿ ನಟಿಗೆ ಗೊತ್ತಿಲ್ಲ! ದಸರೆಯ ರಾಮಲೀಲಾ ಮತ್ತು ರಾವಣನ ಮೂರ್ತಿ ಸುಡುವುದನ್ನು ಬಹಳ ಹಿಂದೆಯೇ ಜಾರ್ಖಂಡಿನ ಶಿಬೂ ಸೊರೇನ್ ಸರಕಾರ ಅಧಿಕೃತವಾಗಿ ನಿಷೇಧಿಸಿರು ವುದೂ ಇರಾನಿಗೆ ಗೊತ್ತಿಲ್ಲ? ದ್ರಾವಿಡರ ಪವಿತ್ರ ದೈವೀಶಕ್ತಿ ಯಾದ ಅಸುರರನ್ನು ದುಷ್ಟರೆಂದು ಇರಾನಿ ಹೇಳಿದರೆ ಈ ಎಲ್ಲಾ ಪರಿಶಿಷ್ಟರ ಧಾರ್ಮಿಕ ಭಾವನೆಗಳಿಗೆ ನೋವಾಗುವುದಿಲ್ಲವೇ? ಧಾರ್ಮಿಕ ಭಾವನೆಗಳೆನ್ನುವುದು ಕೇವಲ ವೈದಿಕ ಮೇಲ್ಜಾತಿಗೆ ಮಾತ್ರ ಮೀಸಲೆಂದು ಮೋದಿ ಸರಕಾರ ಭಾವಿಸಿದೆಯೇ?

-ಆರ್.ಬಿ.ಶೆಣಾವ, ಮಂಗಳೂರು

ಮುಸ್ಲಿಮರ ದೇಶಭಕ್ತಿ ಕೇಸರಿ ಸಂಘಟನೆಗಳಿಗೆ ಕಾಣುವುದೇ ಇಲ್ಲ

ತನ್ನ ಜನ್ಮ ತಾರೀಖಿನ ಬಗ್ಗೆ ಗೊಂದಲ ಹುಟ್ಟಿಸಿ ಸರಕಾರವನ್ನೇ ಯಾಮಾರಿಸಿ ತನ್ನ ಸರ್ವಿಸ್ ವಿಸ್ತರಿಸಿಕೊಳ್ಳಲು ಪ್ರಯತ್ನಿಸಿ ಸೋತ ಜನರಲ್ ವಿ.ಕೆ.ಸಿಂಗ್ ನಂತಹವರು ನಿವೃತ್ತಿಯ ನಂತರ ಬಿಜೆಪಿ ಸೇರಿದ ಮೇಲೆ ಈಗ ಸಂಘ ಪರಿವಾರದವರು ಇನ್ನೊಂದು ದೊಡ್ಡ ಮನೋವೈಜ್ಞಾನಿಕ ತಂತ್ರ ಹೂಡುತ್ತಿದ್ದಾರೆ. ಭಾರತದೆಲ್ಲೆಡೆ ನಿವೃತ್ತ ಸೈನಿಕರನ್ನು ತಮ್ಮ ಸಂಘಟನೆಗಳಲ್ಲಿ ಸಕ್ರಿಯವಾಗಿ ಸೇರಿಸಲು ಸಂಘಿಗಳು ಶತಪ್ರಯತ್ನ ಮಾಡುತ್ತಿದ್ದಾರೆ. ದೇಶದೆಲ್ಲೆಡೆ ಜಿಲ್ಲೆಗೊಂದರಂತೆ ನಿವೃತ್ತ ಸೈನಿಕರ ಎಕ್ಸ್-ಸರ್ವಿಸ್‌ಮೆನ್ಸ್ ಅಸೋಸಿಯೇಷನ್ ಮತ್ತು ಸೈನಿಕ ಭವನಗಳು ಅಧಿಕೃತವಾಗಿ ಸ್ಥಾಪನೆಯಾಗಿ ನಿವೃತ್ತ ಸೈನಿಕರ ಕುಟುಂಬದ ನಿಸ್ವಾರ್ಥ ಸೇವೆ ಮಾಡುತ್ತಿವೆ. ಆದರೆ ಈಗೀಗ ಇದರ ಸದಸ್ಯರನ್ನು ಅವರ ಸಮವಸ್ತ್ರದಲ್ಲಿಯೇ



ಸಂಘಿಗಳು ತಮ್ಮ ಸಭೆಸಮಾರಂಭಗಳಿಗೆ ಕರೆಸಿ ವೇದಿಕೆಯ ಮೇಲೆಯೇ ಕುಳ್ಳಿರಿಸಿ ಅವರ ಬಾಯಿಂದ ದೇಶಪ್ರೇಮ ಮತ್ತು ಗೋರಕ್ಷೆಯ ಬಗ್ಗೆ ಕಂಠಪಾಠ ಭಾಷಣ ಮಾಡಿಸಿ, ಆ ನಿವೃತ್ತ ಸೈನಿಕರೂ ಹಿಂದೂತ್ವವಾದಿಗಳ ಪರವಾಗಿದ್ದಾರೆ ಎಂಬ ತಪ್ಪು ಭಾವನೆ ಜನರಲ್ಲಿ ಮೂಡುವಂತೆ ತಂತ್ರ ಹೂಡುತ್ತಿದ್ದಾರೆ. ಜತೆಗೆ ನಿವೃತ್ತ ಸೈನಿಕರಂತೆ ತಾವೂ ಬಹದ್ದೂರ್ ದೇಶಪ್ರೇಮಿಗಳು ಎಂದು ಬಿಂಬಿಸಲು ಸಂಘಿಗಳು ಯತ್ನಿಸುತ್ತಿದ್ದಾರೆ. ಸೂರ್ಯನ ಬಾಡಿಗೆ ಬೆಳಕಲ್ಲಿ ಚಂದ್ರ ಬೆಳಗಿದ ರೀತಿಯಾಗಿದೆ ಸಂಘಿಗಳಿಗೆ ಈಗ ಒಮ್ಮೆಲೇ ಉಮ್ಮಳಿಸಿ ಬಂದಿರುವ ನಿವೃತ್ತ ಮತ್ತು ವೀರಮರಣ ಹೊಂದಿರುವ ಸೈನಿಕರ ಬಗೆಗಿನ ದಿಢೀರ್ ಅಭಿಮಾನ.

ಮಿಲಿಟರಿಯಲ್ಲಿ ಕ್ಯಾಪ್ಟನ್ ಆಗಿ ಸೇರಿ ನಂತರ ಸೇನೆಯ ಕಠಿಣ ಜೀವನಕ್ಕೆ ಒಗ್ಗಿಕೊಳ್ಳಲಾಗದೇ ಕೇವಲ ಎಳೇ ವರ್ಷಕ್ಕೆ ನೌಕರಿ ಬಿಟ್ಟ ನಮ್ಮ ಕಾರ್ಕಳ ತಾಲೂಕಿನ ಮರಾಠಿಗನೊಬ್ಬ ಕರಾವಳಿಯ ಬಿಜೆಪಿಯಿಂದ ಎಮ್‌ಎಲ್‌ಸಿಯಾಗಿ ಆಯ್ಕೆಗೊಂಡು ಈಗ ನಿವೃತ್ತ ಸೈನಿಕರನ್ನು ತನ್ನ ಪಕ್ಷದೆಡೆ ಸೆಳೆಯುವ ಕಾಯಕದಲ್ಲಿ ತೊಡಗಿದ್ದಾನೆ.

ಹಿಂದೂತ್ವ ಪಡೆಗಳು ಎಲ್ಲಾ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಎಬಿವಿಪಿ ಮುಖಾಂತರ ಸಮಸ್ತ ವಿದ್ಯಾರ್ಥಿಗಣ ಮತ್ತು ಪ್ರಾಧ್ಯಾಪಕರನ್ನು ತಮ್ಮ ಕೈವಶ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ಎಲ್ಲಾ ಜಿಲ್ಲೆಗಳಲ್ಲೂ ನಿವೃತ್ತ ಸೈನಿಕರ ಸಂಘಗಳನ್ನೂ ಕೇಸರಿಕರಣಗೊಳಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಸಿಯಾಚಿನ್‌ನಲ್ಲಿ ವೀರಮರಣ ಹೊಂದಿದ ಕನ್ನಡಿಗ ಯೋಧ ಮಹೇಶರವರ ಪತ್ನಿ ಆಶಾರವರನ್ನು ಕಳೆದ ಭಾನುವಾರ ಮೈಸೂರಿನಿಂದ ಮಂಗಳೂರಿಗೆ ಕರೆಸಿ ಹಿಂದೂ ಸಂಘಟನೆಯವರು ಸನ್ಮಾನಿಸಿದರು. ಆದರೆ ಅದೇ ಸಿಯಾಚಿನಲ್ಲಿ ಸತ್ತ ಹತ್ತು ಯೋಧರಲ್ಲಿ ಒಬ್ಬರಾಗಿದ್ದ ಆಂಧ್ರದ ಸಿಪಾಯಿ ಮುಷ್ತಾಕ್ ಅಹಮದರ ಕುಟುಂಬದವರನ್ನು ತೆಲಂಗಾಣ-ಆಂಧ್ರದ ಹಿಂದೂತ್ವ ಸಂಘಟನೆಗಳು ಸನ್ಮಾನಿಸಿದ ಸುದ್ದಿಯೇ ಇಲ್ಲ. ಅದಕ್ಕೆ ಕಾರಣ ಮುಷ್ತಾಕರು ಮುಸ್ಲಿಮರಾಗಿದ್ದದ್ದು. ಮುಸ್ಲಿಮರ ಇಂತಹ ಅಪ್ಪಟ ದೇಶಭಕ್ತಿ ಕೇಸರಿ ಸಂಘಟನೆಗಳಿಗೆ ಕಾಣುವುದೇ ಇಲ್ಲ.

ಪತ್ರಿಕೆಯಲ್ಲಿ ಬಂದ ಸುದ್ದಿಯೊಂದರಂತೆ ಮಂಗಳೂರಿನ ಬಂಟರ ಜಾತಿಯ ನಿವೃತ್ತ ಸೈನಿಕನೊಬ್ಬ ವಿಶ್ವಹಿಂದೂ ಪರಿಷತ್ತಿನ ನೇತಾರರೂ ಆಗಿರುವ ಉಡುಪಿಯ ಒಬ್ಬ ಹಿರಿಯ ಸ್ವಾಮೀಜಿಯಲ್ಲಿ ಹೋಗಿ ಇಲ್ಲಿಯ ಎಮ್‌ಆರ್‌ಪಿಎಲ್ ಕಂಪನಿಯಲ್ಲಿ ಭದ್ರತಾ ಸಿಬ್ಬಂದಿಯ ನೌಕರಿಗಾಗಿ ತಮ್ಮ ಮಾಧ್ವ ಜಾತಿಯ ಕಂಪನಿಯ ಅಧಿಕಾರಿಗೆ ಸ್ವಲ್ಪ ಹೇಳಿಸುವಂತೆ ಕೋರಿದಾಗ ಆ ಸ್ವಾಮೀಜಿ ಮೂರು ಬೆರಳು ತೋರಿಸಿ ಮೂರು ಲಕ್ಷ ರೂ. ದೇಣಿಗೆ (ಲಂಚ) ಕೇಳಿದ್ದರಂತೆ. ಇದುವೇ ನೋಡಿ ಹಿಂದೂತ್ವ ನೇತಾರರಿಗೆ ದೇಶಭಕ್ತ ನಿವೃತ್ತ ಸೈನಿಕರ ಬಗೆಗಿರುವ ಅಭಿಮಾನದ ಒಳರೂಪ! ಇದನ್ನು ಎಲ್ಲ ಸೈನಿಕರ ಕುಟುಂಬದವರು ಅರಿತುಕೊಂಡರೆ ಒಳಿತು.

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
nkesh70@rediffmail.com ಗೆ ನುಡಿ
ಫಾಂಟ್ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ
ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ
ಚುಟುಕಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ಜೀವನವೇ ಪಾತ್ರ ಆಗಿರುವ ಖುಷಿಯಲ್ಲಿ ಮೇಘನಾ

ಡಿಫರೆಂಟ್ ಪಾತ್ರಗಳ ಮೂಲಕ ಗುರುತಿಸಿಕೊಂಡ ನಟಿ ಮೇಘನಾ ಗಾಂವ್ಕರ್ ನಟಿಸಿದ್ದು ಕಡಿಮೆ ಚಿತ್ರಗಳಲ್ಲಾದರೂ ಅವರು ನಿರ್ವಹಿಸಿದ ಪಾತ್ರಗಳು ವಿಭಿನ್ನ. ಈ ವಾರ ಇವರ ನಟನೆಯ 'ಸಿಂಪಲ್ಲಾಗ್ ಇನ್ನೊಂದ್ ಲವ್‌ಸ್ಟೋರಿ' ಚಿತ್ರ ಬಿಡುಗಡೆ ಆಗುತ್ತಿದೆ. ಆ ಪಾತ್ರ ಮತ್ತು ಮುಂದಿನ ಯೋಜನೆಗಳ ಕುರಿತಾಗಿ ಅವರು ಮಾತಾಡಿದ್ದಾರೆ.



'ಚಾರ್‌ಮಿನಾರ್' ಸಿನಿಮಾದಲ್ಲಿನ ನಟನೆಗಾಗಿ ಪ್ರಶಂಸೆ ಪಡೆದವರು ಮೇಘನಾ ಗಾಂವ್ಕರ್. ಅನೇಕ ಪ್ರಯೋಗಾತ್ಮಕ ಸಿನಿಮಾಗಳಲ್ಲಿ ನಟಿಸಿದ ಹೆಗ್ಗಳಿಕೆ ಇವರದ್ದು. ಇಂಗ್ಲಿಷ್ ಸಾಹಿತ್ಯದಲ್ಲಿ ಸಂಶೋಧನೆಗೆ ತೊಡಗಿರುವ ಮೇಘನಾ, ಜತೆಜತೆಗೆ ಸಿನಿಮಾರಂಗದಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.


* ಚಾರ್‌ಮಿನಾರ್ ಬಿಡುಗಡೆ ಆಗಿ ಮೂರು ವರ್ಷ ಆಯಿತು. ಬಿಡುವಿನ ವೇಳೆಯಲ್ಲಿ ಏನು ಮಾಡುತ್ತೀರಿ?

ನನಗೆ ಸಾಹಿತ್ಯದ ಬಗ್ಗೆ ಅಪಾರ ಒಲವು. ಹೀಗಾಗಿ ಏನಾದರೂ ಓದುತ್ತೇನೆ. ಬರೆಯುತ್ತೇನೆ. ಇತ್ತೀಚೆಗೆ ಕವಿತೆ ಬರೆಯುವುದರಲ್ಲಿ ತೊಡಗಿದ್ದೇನೆ. ಅಲ್ಲದೇ ಸಂಶೋಧನಾ ವಿದ್ಯಾರ್ಥಿ ಆಗಿರುವುದರಿಂದ, ಆ ಕೆಲಸದಲ್ಲೂ ಬಿಜಿ ಆಗಿದ್ದೇನೆ.

* ಮೂರು ವರ್ಷಗಳ ನಂತರ ಸಿನಿಮಾ ಒಪ್ಪಿಕೊಂಡಿದ್ದೀರಿ. 'ಸಿಂಪಲ್ಲಾಗ್ ಇನ್ನೊಂದ್ ಲವ್‌ಸ್ಟೋರಿ' ಚಿತ್ರ ಒಪ್ಪಿಕೊಳ್ಳಲು ಕಾರಣವೇನು?

ನನಗೆ ಈ ಸಿನಿಮಾದ ಕತೆಯೇ ವಿಭಿನ್ನ ಅನಿಸಿತು. ಅಲ್ಲದೇ ನಿರ್ದೇಶಕ ಸುನಿ ಈವರೆಗೂ ವಿಭಿನ್ನ ರೀತಿಯ ಚಿತ್ರಗಳನ್ನು ಕೊಟ್ಟವರು. ಅವರ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸೋತರೂ, ಗೆದ್ದರೂ ಜನರ ಮನಸ್ಸಿನಲ್ಲಿ ಉಳಿದಿವೆ. ಇಡೀ ತಂಡದಲ್ಲಿ ಬರೀ ಯೂತ್ಸ್ ಇದ್ದಾರೆ. ಹೀಗಾಗಿ ಪಾತ್ರ ಒಪ್ಪಿಕೊಂಡೆ.

* 'ಸಿಂಪಲ್ಲಾಗೊಂದ್ ಲವ್‌ಸ್ಟೋರಿ' ಭರ್ಜರಿ ಹಿಟ್ ಆಗಿದೆ. ಈ ಸಿನಿಮಾದ ಬಗ್ಗೆ ಇನ್ನಷ್ಟು ನಿರೀಕ್ಷೆ ಮೂಡಿದೆ. ಭಯ ಆಗ್ತಿದೆಯಾ?



ನನ್ನ ಮೊದಲ ಸಿನಿಮಾದಿಂದ ಇಲ್ಲಿವರೆಗೂ ಯಾವತ್ತೂ ನಾನು ಭಯ ಪಟ್ಟುಕೊಂಡು ನಟಿಸಿಲ್ಲ. ಸ್ಕ್ರಿಪ್ಟ್ ಮೇಲೆ ನಂಬಿಕೆ ಇದ್ದಾಗ ಆತಂಕ ಪಡುವ ಅವಶ್ಯಕತೆಯೂ ಇಲ್ಲ. ಮೊದಲ ಸಿನಿಮಾ ಗೆದ್ದಿದೆ. ಈ ಚಿತ್ರವೂ ಗೆಲ್ಲುತ್ತದೆ ಅನ್ನುವ ವಿಶ್ವಾಸವಿದೆ. ಹೀಗಾಗಿ ಕೂಲ್ ಆಗಿದ್ದೇನೆ.

* ಎಂಥ ಪಾತ್ರವನ್ನು ನಿರ್ವಹಿಸುತ್ತಿದ್ದೀರಿ. ನಿಮಗೆ ಪಾತ್ರದ ಬಗ್ಗೆ ಖುಷಿ ಇದೆಯಾ?

ನನ್ನ ಪಾತ್ರದ ಹೆಸರೇ ಖುಷಿ. ಹೀಗಾಗಿ ನಿಜಕ್ಕೂ ಖುಷಿಯಾಗಿದ್ದೇನೆ. ನಾನು ನನ್ನ ಲೈಫ್ ಅನ್ನು ಈವರೆಗೂ ಹೇಗೆ ನೋಡಿಕೊಂಡು ಬಂದಿದ್ದೇನೋ, ಪಾತ್ರವೂ ಹಾಗೇ ಇದೆ. ನಾನು ನಟಿಸುತ್ತಿದ್ದೇನೆ ಅಂತ ಯಾವತ್ತೂ ಅನಿಸಿಲ್ಲ. ಯಾಕೆಂದರೆ, ಪಾತ್ರವೇ ನಾನು, ನಾನೇ ಪಾತ್ರ. ಇಂಥ ಪಾತ್ರಕ್ಕಾಗಿ ನಾನು ಕಾಯುತ್ತಿದ್ದೆ. ನಾನು ಕಾದದ್ದು ಫಲ ಕೊಟ್ಟಿದೆ.

* ಸ್ಟಾರ್ ನಟರ ಜತೆ ಕೆಲಸ ಮಾಡಿದವರು, ಈಗ ಹೊಸ ಹುಡುಗನೊಂದಿಗೆ ತೆರೆ ಹಂಚಿಕೊಂಡಿದ್ದೀರಿ. ಈ ಅನುಭವ ಹೇಗಿತ್ತು?

ನಟಿಸುವಾಗ ಎಲ್ಲರೂ ಕಲಾವಿದರೆ. ಹೀಗಾಗಿ ನಾನಂತೂ ಆ ರೀತಿ ಫೀಲ್ ಮಾಡಿಕೊಳ್ಳುವುದಿಲ್ಲ. ಅಲ್ಲದೇ ಪ್ರವೀಣ್ ಈಗಾಗಲೇ ಕಿರುತೆರೆಯಲ್ಲಿ ಫೇಮಸ್. ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಹೀಗಾಗಿ ನಟನೆ ಅವರಿಗೆ ಸಹಜವಾಗಿಯೇ ಒಲಿದಿದೆ. ಅವರು ನನ್ನಿಂದ, ನಾನು ಅವರಿಂದ ಟಿಪ್ಸ್ ತೆಗೆದುಕೊಂಡು ನಟಿಸಿದ್ದೇವೆ. ಅಲ್ಲದೇ ಇಲ್ಲಿ ಕತೆ ಮತ್ತು ಡೈಲಾಗ್ ಮುಖ್ಯ ಪಾತ್ರವಹಿಸುತ್ತವೆ. ಹೀಗಾಗಿ ಖುಷಿಯಿಂದಲೇ ನಟಿಸಿದ್ದೇವೆ.

* ನಿಮ್ಮ ಪಾತ್ರಕ್ಕಿರುವ ಹಿನ್ನೆಲೆ ಏನು? ಈ ಪಾತ್ರವನ್ನು ನೀವು ಹೇಗೆ ವಿಭಿನ್ನ ಅಂತೀರಿ?

ಆಗಲೇ ಹೇಳಿದಂತೆ, ನನ್ನ ಜೀವನಕ್ಕೂ ಪಾತ್ರಕ್ಕೂ ಸಾಮೀಪ್ಯವಿದೆ. ನನ್ನ ಜೀವನದಲ್ಲಿ ನಡೆದ ಅನೇಕ ಘಟನೆಗಳು ಇಲ್ಲಿವೆ. ನನಗೆ ಪ್ರವಾಸ ಮಾಡುವುದೆಂದರೆ ಇಷ್ಟ. ಈ ಸಿನಿಮಾದಲ್ಲೂ ಟ್ರಾವೆಲ್ ಇದೆ. ಬೆಂಗಳೂರಿನಿಂದ ಶುರುವಾಗುವ ಕತೆ ಕಾರವಾರದಲ್ಲಿ ಅಂತ್ಯವಾಗುತ್ತದೆ. ಆ ಜರ್ನಿಯೇ ಒಂದು ವಿಶೇಷ. ಅಲ್ಲದೇ ಈ ಹೊತ್ತಿನ ಹುಡುಗಿಯರನ್ನು ಪಾತ್ರ ಪ್ರತಿನಿಧಿಸುತ್ತದೆ. ಪ್ರತಿ ಹುಡುಗಿಯೂ ಈ ಪಾತ್ರದೊಂದಿಗೆ ರಿಲೇಟ್ ಮಾಡಿಕೊಳ್ಳಬಹುದು.

* ಮುಂದಿನ ಯೋಜನೆಗಳೇನು? ನಿಮ್ಮ ಹೊಸ ಸಿನಿಮಾ ಯಾವುದು?


ನಾನು ಯಾವತ್ತೂ ಯೋಜನೆಗಳನ್ನು ಹಾಕಿಕೊಂಡು ಬದುಕೋಳು ಅಲ್ಲ. ಅಲ್ಲದೇ ಅವಕಾಶ ಸಿಕ್ಕಿದೆ ಅಂತ ನಟಿಸುವುದಿಲ್ಲ. ನನಗೆ ಪಾತ್ರ ಇಷ್ಟವಾಗಬೇಕು. ನಾನು ಕೆಲಸ ಮಾಡುವ ತಂಡ ನನಗೆ ಒಪ್ಪಿಗೆಯಾಗಬೇಕು. ಇಲ್ಲದಿದ್ದರೆ ನಾನು ಸಿನಿಮಾವನ್ನು ಒಪ್ಪಿಕೊಳ್ಳುವುದಿಲ್ಲ. ನಿರ್ದೇಶಕರು ಕತೆಯನ್ನು ಹೇಳುತ್ತಲೇ ಇರುತ್ತಾರೆ. ಪಾತ್ರ ವಿಭಿನ್ನ ಅನಿಸಿದರೆ ನಟಿಸುತ್ತೇನೆ. ಇಲ್ಲದಿದ್ದರೆ ಸಾಹಿತ್ಯದ ಜತೆಯೇ ಹಾಯಾಗಿರುತ್ತೇನೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 23-03-2016 RNI No. KARKAN



ರೋಹಿತ್ ವೇಮುಲ ನೆನಪಿನಲ್ಲಿ

ಲಂಕೇಶ್ 81



ಮೊದಲ ಗೋಷ್ಠಿ: 3:00–3:45

'ಲಂಕೇಶ್ ನೆನಪು'

ಪ್ರಾಸ್ತಾವಿಕ ನುಡಿ

ದೊಡ್ಡಿಪಾಳ್ಯ ನರಸಿಂಹಮೂರ್ತಿ

'ಸಮಕಾಲೀನ ಸಂದರ್ಭದಲ್ಲಿ ಲಂಕೇಶ್ ಚಿಂತನೆ'

ಟಿ.ಕೆ.ದಯಾನಂದ

ಪುಸ್ತಕಗಳ ಬಿಡುಗಡೆ

ಅಧ್ಯಕ್ಷತೆ

ಗೌರಿ ಲಂಕೇಶ್

ಎರಡನೆ ಗೋಷ್ಠಿ: 4:00–7:00

'ಆಜಾದಿ– ಒಂದು ಚರ್ಚೆ'

ಪ್ರಾಸ್ತಾವಿಕ ನುಡಿ

ನೂರ್ ಶ್ರೀಧರ್

ಭಾಗವಹಿಸುವವರು

ಶೆಹ್ಲಾ ರಶೀದ್, ಮೋಹಿತ್ ಪಾಂಡೆ (ಜೆಎನ್‌ಯು ವಿದ್ಯಾರ್ಥಿ ಸಂಘಟನೆ, ದೆಹಲಿ), ಉಮಾಮಹೇಶ್ವರ ರಾವ್ (ಅಂಬೇಡ್ಕರ್ ಸ್ಟೂಡೆಂಟ್ಸ್ ಅಸೋಸಿಯೇಷನ್ ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯ), ಅನಂತ್ ನಾಯಕ್, ಸಂತೋಷ್ ಎಚ್.ಎಂ, ಹರಿರಾಮ್ ಮತ್ತು ಸರೋವರ ಬೆಂಕಿಕೆರೆ

ಎಲ್ಲರಿಗೂ ಸ್ವಾಗತ

ನಾಟಕ: 7:00– 8:00


ಏಕವ್ಯಕ್ತಿ ನಾಟಕ 'ಮೈಥಿಲಿ'


ರಚನೆ, ವಿನ್ಯಾಸ ಮತ್ತು ನಿರ್ದೇಶನ: ಡಾ.ಸಾಸ್ವೇಹಳ್ಳಿ ಸತೀಶ್ ಅಭಿನಯ: ಸುಪ್ರಿಯಾ ಎಸ್ ರಾವ್


ದಿನಾಂಕ: ಮಾರ್ಚ್ 12, 2016, ಶನಿವಾರ ಸಮಯ: ಮಧ್ಯಾಹ್ನ ಮೂರರಿಂದ


ಸ್ಥಳ: ಕ್ಸೇವಿಯರ್ ಹಾಲ್, ಸೇಂಟ್ ಜೋಸೆಫ್ಸ್ ಕಾಲೇಜ್, ಲಾಂಗ್‌ಫೋರ್ಡ್ ರೋಡ್, ಬೆಂಗಳೂರು


12-3-2016ರಂದು ಬಿಡುಗಡೆಯಾಗಲಿರುವ ಹೊಸ ಪುಸ್ತಕಗಳ



















PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com